ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ



ಮಾ॥ ಹಿರಣ್ಣಯ್ಯ ಇನ್ನಿಲ್ಲ

ಸಂಪುಟ 13 | ಸಂಚಿಕೆ 19 | ಮೇ 6-12, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



ನವ ಉದಾರವಾದ, ಕೋಮುವಾದ, ಮನುವಾದ ಮತ್ತು ಸರ್ವಾಧಿಕಾರದ ವಿರುದ್ಧ ಹೋರಾಡಲು

ಮೇ ದಿನದ ಸಂಕಲ್ಪ




ರಾಯಚೂರು: ಸ್ಫೋಟಗೊಂಡ ಜನಾಕ್ರೋಶ



ಮಂಡ್ಯ: ರೈತ ಆತ್ಮಹತ್ಯೆಗಳ 'ಪೋಸ್ಟ್ ಮಾರ್ಟಂ'

ಚುನಾವಣಾ ಆಯೋಗದ ಮೇಲೂ ಪ್ರಶ್ನೆಚಿಹ್ನೆ



ಶ್ರೀಲಂಕಾ

ಸತ್ತವರಲ್ಲಿ ನಮ್ಮವರು ಯಾರು?

"ಚುನಾವಣಾ ಆಯೋಗದ ಮಾರ್ಗಸೂಚಿಗಳ ಪಾವಿತ್ರ್ಯವನ್ನು ಉಳಿಸಿ ಪ್ರಧಾನಿಗಳಿಂದ ಸತತ ಉಲ್ಲಂಘನೆಗಳ ವಿರುದ್ದ ಕ್ರಮ ಕೈಗೊಳ್ಳಿ"

– ಮುಖ್ಯ ಚುನಾವಣಾ ಆಯುಕ್ತರಿಗೆ ಯೆಚುರಿ ಪತ್ರ

ಚುನಾವಣಾ ಆಯೋಗ ತಾನೇ ನೀಡಿರುವ ಮಾರ್ಗಸೂಚಿಗಳನ್ನು ಪ್ರಧಾನ ಮಂತ್ರಿಗಳೂ ಸೇರಿದಂತೆ, ಎಲ್ಲರೂ ಪಾಲಿಸುವಂತೆ ಖಾತರಿಪಡಿಸಲು ಕ್ರಮಗಳನ್ನು ತುರ್ತಾಗಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಮುಖ್ಯ ಚುನಾವಣಾ ಆಯುಕ್ತರಿಗೆ ಎಪ್ರಿಲ್ 22ರಂದು ಬರೆದಿರುವ ಪತ್ರದಲ್ಲಿ ಆಗ್ರಹಿಸಿದ್ದಾರೆ. ಆಗ ಮಾತ್ರವೇ ಭಾರತದ ಸಂವಿಧಾನದ ಕಲಂ 324ರಲ್ಲಿ ಚುನಾವಣಾ ಆಯೋಗಕ್ಕೆ ನೀಡಿರುವ ಅಧಿಕಾರದ ಪಾವಿತ್ರ್ಯವನ್ನು ಎತ್ತಿ ಹಿಡಿಯಲು ಸಾಧ್ಯ ಎಂದು ತನ್ನ ಅಭಿಪ್ರಾಯ ಎನ್ನುತ್ತ ಅವರು ಮುಖ್ಯ ಚುನಾವಣಾ ಆಯುಕ್ರು ತುರ್ತಾಗಿ ಸೂಕ್ತ ಕ್ರಮಕೈಗೊಳ್ಳುವುದಾಗಿ ಆಶಿಸಿದ್ದಾರೆ.

ರಾಜಕೀಯ ಪಕ್ಷಗಳು ಸಶಸ್ತ್ರ ಪಡೆಗಳನ್ನು ಚುನಾವಣಾ ಪ್ರಯೋಜನಕ್ಕೆ ಬಳಸಿಕೊಳ್ಳಬಾರದು ಎಂಬ ಚುನಾವಣಾ ಆಯೋಗದ ಮಾರ್ಗಸೂಚಿಯನ್ನು ಪ್ರಧಾನ ಮಂತ್ರಿಗಳು ಉಲ್ಲಂಘಿಸುತ್ತಿರುವ ಬಗ್ಗೆ ಅವರು ಈ ಪತ್ರವನ್ನು ಬರೆದಿದ್ದಾರೆ.

ರಾಷ್ಟ್ರೀಯ ಭದ್ರತೆಯ ಮತ್ತು ಭಾರತದ ಸಶಸ್ತ್ರ ಪಡೆಗಳ ಕಾರ್ಯಾಚರಣೆ ಗಳನ್ನು ಆಳುವ ಪಕ್ಷ ಚುನಾವಣಾ ಭಾಷಣಗಳಿಗೆ ಆಹಾರವಾಗಿ ಉಪಯೋಗಿಸಬಾರದು ಎಂದು ಚುನಾವಣಾ ಆಯೋಗ ಸ್ಪಷ್ಟ ಮಾರ್ಗಸೂಚಿಗಳನ್ನು ನೀಡಿತ್ತು. ಇದನ್ನು ಸಾರ್ವತ್ರಿಕ ಚುನಾವಣೆಗಳ ಪ್ರಕಟಣೆಯ ನಂತರ ಪುನರುಚ್ಚರಿಸಲಾಗಿತ್ತು, ಆದರೆ ಇದನ್ನು ಪ್ರಧಾನ ಮಂತ್ರಿಗಳು ಸತತವಾಗಿ ಉಲ್ಲಂಘಿಸುತ್ತ ಬರುತ್ತಿರುವುದನ್ನು ನಾವು ಕಾಣುತ್ತಿದ್ದೇವೆ ಎಂದಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಲಾತೂರಿನಲ್ಲಿ ಅವರು ಪುಲ್ವಾವಾದ ಹುತಾತ್ಮರ ಹೆಸರಿನಲ್ಲಿ ಮತ ಯಾಚನೆ ಮಾಡಿರುವ ಸುದ್ದಿಯತ್ತ ಮುಖ್ಯ ಚುನಾವಣಾ ಆಯುಕ್ತರ ಗಮನ ಸೆಳೆದಿದ್ದಾರೆ.

"ಲಾತೂರಿನಲ್ಲಿ ಅವರು ಮಾಡಿದ ಭಾಷಣಗಳನ್ನು ನೀವು ಗಮನಕ್ಕೆ ತಗೊಂಡಿದ್ದೀರಿ ಎಂದು ನಂಬುತ್ತೇನೆ. ಆದರೆ ಅವರ ವಿರುದ್ಧ ಕೈಗೊಂಡಿರುವ ಶಿಸ್ತು ಕ್ರಮಗಳ ವಿವರಗಳಿಗೆ ಇನ್ನೂ ಕಾಯುತ್ತಿದ್ದೇವೆ. ಅಲ್ಲದೆ, ಆಯೋಗದ ಮಾರ್ಗ ಸೂಚಿಗಳಿಗೆ ಅವಮಾನ ಮಾಡುವುದನ್ನು, ಚುನಾವಣಾ ಪ್ರಕ್ರಿಯೆಯನ್ನು, ಮತ್ತು ಅದರಿಂದಾಗಿ ಪ್ರಜಾಸತ್ತಾತ್ಮಕ ಕ್ರಿಯೆಯನ್ನು ಕಲುಷಿತಗೊಳಿಸುವುದನ್ನು ನಿಲ್ಲಿಸಬೇಕೆಂದು ಅವರಿಗೆ ಯಾವಾಗ ಹೇಳಲಾಗುತ್ತದೆ ಎಂಬುದೂ ನಮಗಿನ್ನೂ ಕೇಳ ಬಂದಿಲ್ಲ" ಎಂದು ಈ ಕುರಿತು ಮುಂದುವರೆದು ಟಿಪ್ಪಣಿ ಮಾಡಿರುವ ಯೆಚುರಿಯವರು ನರೇಂದ್ರ ಮೋದಿಯವರ ಇತ್ತೀಚಿನ ಎರಡು ಹೇಳಿಕೆಗಳತ್ತವೂ ಮುಖ್ಯ ಚುನಾವಣಾ ಆಯುಕ್ತರ ಗಮನ ಸೆಳೆದಿದ್ದಾರೆ. ಇವು ಮುದ್ರಣ ಮತ್ತು ಇಲೆಕ್ಟ್ರಾನಿಕ್ ಮಾಧ್ಯಮಗಳಲ್ಲೂ ವಿವರವಾಗಿ ವರದಿಯಾಗಿವೆ.

ಎಪ್ರಿಲ್ 21ರಂದು ಗುಜರಾತಿನಲ್ಲಿ ಪ್ರಚಾರದ ಕೊನೆಯ ದಿನದಂದು ಅವರು, ಪಾಕಿಸ್ತಾನ ಭಾರತೀಯ ವಾಯುಪಡೆಯ ಪೈಲಟ್‌ರನ್ನು ಹಿಂದಿರುಗಿಸದಿದ್ದದಿದ್ದರೆ ಒಂದು "ಸಂಹಾರದ ರಾತ್ರಿ;ಯೇ "(ಖತ್ಲ್ ಕೀ ರಾತ್) ಸಂಭವಿಸುತ್ತಿತ್ತು ಎಂದರು.

ಪಠಾಣ್ ದಲ್ಲಿ ಒಂದು ರ್‍ಯಾಲಿಯನ್ನು ಉದ್ದೇಶಿಸಿ ಮಾತಾಡುತ್ತ ಪ್ರಧಾನ ಮಂತ್ರಿ ಮೋದಿ "ಎರಡನೇ ದಿನ, ಭಾರತ ದೊಡ್ಡದಾದುದೊಂದನ್ನು ಮಾಡಲಿದೆ ಎಂದು ಅಮೆರಿಕಾದ ಹಿರಿಯ ಅಧಿಕಾರಿಯೊಬ್ಬರು ಹೇಳಿದರು. ಮೋದಿಯವರು 12 ಕ್ಷಿಪಣಿಗಳೊಂದಿಗೆ ಸಿದ್ಧವಾಗಿದ್ದರು. ಅದೊಂದು ಗಂಭೀರ ಸನ್ನಿವೇಶವಾಗುತ್ತಿತ್ತು. ಪಾಕಿಸ್ತಾನ ಭಾರತೀಯ ಪೈಲಟನ್ನು ಹಿಂದಿರುಗಿಸುವುದಾಗಿ ಪ್ರಕಟಿಸಿದ್ದು ಒಳ್ಳೆಯದೇ ಆಯಿತು., ಇಲ್ಲವಾದರೆ ಅದು ಸಂಹಾರದ ರಾತ್ರಿಯಾಗುತ್ತಿತ್ತು" ಎಂದರು.

"ವ್ಯಂಗ್ಯವೆಂದರೆ, ಅಮೆರಿಕನ್ ಅಧ್ಯಕ್ಷ ಡೊನಾಲ್ಡ್ ಟ್ರಂಫ್, ಪಾಕಿಸ್ತಾನ ಅಭಿನಂದನ್ ರವರನ್ನು ಹಿಂದಿರುಗಿಸುವ ಕೆಲವು ಗಂಟೆಗಳ ಮೊದಲು ಹಾನೊಯ್ ನಲ್ಲಿ ಜಾಗತಿಕ ಮಾಧ್ಯಮಗಳನ್ನು ಉದ್ದೇಶಿಸಿ ಮಾತಾಡುತ್ತ ಭಾರತ–ಪಾಕಿಸ್ತಾನ ತಿಕ್ಕಾಟ ಕುರಿತಂತೆ ಜಗತ್ತು ಒಂದು ಒಳ್ಳೆಯ ಸುದ್ದಿಯನ್ನು ನಿರೀಕ್ಷಿಸಬೇಕು ಎಂದಿದ್ದರು.

ಇತ್ತೀಚಿನ ವಾಯು ದಾಳಿಗಳಲ್ಲಿ ಭಾರತವನ್ನು ಸುಭದ್ರಗೊಳಿಸಿದ್ದು ತಾನು, ನಮ್ಮ ಸಶಸ್ತ್ರ ಪಡೆಗಳಲ್ಲ ಎಂದು ಹೇಳಿಕೊಳ್ಳುತ್ತ ಅವರು ಮುಂದುವರೆದು ತಾನು ಇಸ್ಲಾಮಾಬಾದ್ ಗೆ ಬೆದರಿಕೆ ಹಾಕಿದ ಮೇಲೆಯೇ ಪಾಕಿಸ್ತಾನ ಭಾರತೀಯ ವಾಯುಪಡೆಯ ಪೈಲಟನ್ನು ಹಿಂದಕ್ಕೆ ಕಳಿಸಿದ್ದು ಎಂದೂ ಹೇಳಿಕೊಂಡರು.

ಮೋದಿಯವರು ಪರಮಾಣು ಶಸ್ತ್ರಗಳನ್ನು ಬಳಸಬೇಕು ಎಂದು ಹೇಳುವಷ್ಟರ ವರೆಗೂ ಬೇಜವಾಬ್ದಾರಿ ಮತ್ತು ನಿರ್ಲಕ್ಷ್ಯವನ್ನು ತೋರಿದ್ದಾರೆ. ಬಾರ್ಮೇರ್ ನಲ್ಲಿ ಭಾನುವಾರ ಒಂದು ಚುನಾವಣಾ ರ್‍ಯಾಲಿಯಲ್ಲಿ ಅವರು 'ಭಾರತ ಪಾಕಿಸ್ತಾನದ ಬೆದರಿಕೆಗಳಿಂದ ಭಯಪಡುವುದು ನಿಂತಿತು. 'ನಮ್ಮ ಬಳಿ ಪರಮಾಣು ಬಟನ್ ಇದೆ, ಪರಮಾಣು ಬಟನ್ ಇದೆ 'ಎಂದು ಅವರು ಹೇಳುತ್ತಿದ್ದರು. ಹಾಗಿದ್ದರೆ ನಮ್ಮ ಬಳಿ ಇರುವುದೇನು? ಅದನ್ನು ದೀಪಾವಳಿಗೆ ಇಟ್ಟುಕೊಂಡಿದ್ದೇವೆಯೇ?"

ಸಶಸ್ತ್ರ ಪಡೆಗಳ ಹೆಸರನ್ನು, ಸಶಸ್ತ್ರ ಕಾರ್ಯಾಚರಣೆಯನ್ನು ಭಂಡತನದಿಂದ, ಎಚ್ಚರಹೀನವಾಗಿ ಉದ್ಧರಿಸುವುದು ಮತ್ತು ನಂತರ ಪರಮಾಣು ಯುದ್ಧದ ಬೆದರಿಕೆ ಹಾಕುವುದು ಅವರ ಒಂದು ಪಕ್ಷಪಾತೀ ರಾಜಕೀಯ ಕೃತ್ಯ ಮತ್ತು ಆದರ ಆಧಾರದಲ್ಲಿ ಮತ ಕೇಳುವುದು ಚುನಾವಣಾ ಆಯೋಗ ಹಾಕಿಕೊಟ್ಟಿರುವ ಚುನಾವಣಾ ಪ್ರಕ್ರಿಯೆಯ ಸಮಗ್ರತೆಗೆ ಹಾನಿ ತರುತ್ತದೆ ಎಂದು ಸೀತಾರಾಂ ಯಚುರಿ ಈ ಪತ್ರದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

ವಾರಾಣಸಿಯಲ್ಲಿ ಅಭ್ಯರ್ಥಿಯೂ ಆಗಿರುವ ಪ್ರಧಾನ ಮಂತ್ರಿಗಳು ಮತ್ತು ಆಳುವ ಪಕ್ಷದ ಪ್ರಮುಖ ಪ್ರಚಾರಕರೂ ಆಗಿರುವವರು ಸದಾ ಸಶಸ್ತ್ರ ಪಡೆಗಳ ಕೆಚ್ಚನ್ನು ತನ್ನದೇ ಎಂದು ಹೇಳಿಕೊಳ್ಳಲು, ಮತ್ತು ಅದರ ಮೇಲೆ ಮತಗಳನ್ನು ಕೇಳಲು ಬಿಟ್ಟಿರುವುದು ನೇರವಾಗಿ ಮಾದರಿ ಆಚಾರ ಸಂಹಿತೆಯ ಉಲ್ಲಂಘನೆಯಾಗಿದೆ, ಮತ್ತು ಚುನಾವಣಾ ಉದ್ದೇಶಗಳಿಗೆ ಪ್ರಧಾನ ಮಂತ್ರಿ ಹುದ್ದೆಯ ದುರುಪಯೋಗವೂ ಆಗಿದೆ ಎಂದು ಯೆಚುರಿಯವರು ಮುಖ್ಯ ಚುನಾವಣಾ ಆಯುಕ್ತರಿಗೆ ಹೇಳಿದ್ದಾರೆ.

"ಕೆಲವು ವಾರಗಳ ಹಿಂದೆ 'ಹುತಾತ್ಮ'ರ ಹೆಸರಿನಲ್ಲಿ ಮತಯಾಚನೆಯ ನಂತರವೂ ಅವರು ತಮ್ಮ ಭಾಷಣಗಳಲ್ಲಿ ನಿಮ್ಮ ಸುಸ್ಥಾಪಿತ ನಿಯಮಗಳನ್ನು ಉಲ್ಲಂಘಿಸುತ್ತಲೇ ಇದ್ದಾರೆ. ತಾವು ತಮ್ಮ ಅಧಿಕಾರವನ್ನು ಬಳಸಬೇಕು ಮತ್ತು ಇಂತಹ ಅಭಯ ರಕ್ಷೆ ನಿಲ್ಲುವಂತಾಗಬೇಕು" ಎಂದು ಯೆಚುರಿಯವರು ಮುಖ್ಯ ಚಾನಾವಣಾ ಆಯುಕ್ತರನ್ನು ಆಗ್ರಹಿಸಿದ್ದಾರೆ.

"ತಾವು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸುತ್ತೇವೆ, ಆಮೂಲಕ ತಾವು ಹಾಕಿಕೊಟ್ಟಿರುವ ಮಾರ್ಗಸೂಚಿಗಳ ಪಾವಿತ್ರ್ಯ ಉಳಿಯುವಂತೆ ಮಾಡಬೇಕು ಮತ್ತು ಸಮಸ್ತ ಚುನಾವಣಾ ಪ್ರಕ್ರಿಯೆ ನಿಜವಾಗಿಯೂ ಎಲ್ಲ ಪಕ್ಷಗಳಿಗೆ ಮತ್ತು ಅಭ್ಯರ್ಥಿಗಳಿಗೆ ಸಮಾನ ನೆಲೆಯ ರಂಗವಾಗಿ ಉಳಿಯಬೇಕು. ಚುನಾವಣಾ ಆಯೋಗ ತಾನೇ ನೀಡಿರುವ ಮಾರ್ಗಸೂಚಿಗಳನ್ನು ಪ್ರಧಾನ ಮಂತ್ರಿಗಳೂ ಸೇರಿದಂತೆ, ಎಲ್ಲರೂ ಪಾಲಿಸುವಂತೆ ಖಾತರಿಪಡಿಸಲು ಕ್ರಮಗಳನ್ನು ತುರ್ತಾಗಿ ಕ್ರಮಗಳನ್ನು ಕೈಗೊಳ್ಳಬೇಕು. ಆಗ ಮಾತ್ರವೇ ಭಾರತದ ಸಂವಿಧಾನದ ಕಲಂ 324ರಲ್ಲಿ ಚುನಾವಣಾ ಆಯೋಗಕ್ಕೆ ನೀಡಿರುವ ಅಧಿಕಾರದ ಪಾವಿತ್ರ್ಯವನ್ನು ಎತ್ತಿ ಹಿಡಿಯಲು ಸಾಧ್ಯ ಎಂದು ನನ್ನ ಅಭಿಪ್ರಾಯ" ಎಂದು ಅವರು ಹೇಳಿದ್ದಾರೆ.

ಭಯೋತ್ಪಾದನೆಯ ಆರೋಪಿಗೆ ಪ್ರಧಾನಿ, ಬಿಜೆಪಿ ಅನುಮೋದನೆ ಆಘಾತಕಾರಿ

ಮತದಾರರನ್ನು ಧ್ರುವೀಕರಿಸುವ ಹತಾಶ ಬಿಜೆಪಿ ಪ್ರಯತ್ನಗಳನ್ನು ಸೋಲಿಸಿ–ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ

ಭೋಪಾಲ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಪ್ರಜ್ಞಾಸಿಂಗ್ ಠಾಕುರ್ ನಾಮನಿರ್ದೇಶನ ಬಿಜೆಪಿಯ ಮತ್ತು ಪ್ರಧಾನ ಮಂತ್ರಿಗಳ ಯುಕ್ತತೆಯಿಲ್ಲದ ಕೃತ್ಯ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಬಲವಾಗಿ ಖಂಡಿಸಿದೆ. ಆಕೆ ಒಬ್ಬ ಆರೋಪಿ, ಭಯೋತ್ಪಾದನೆ ಸಂಬಂಧಿತ ಹಲವು ಕೇಸುಗಳಲ್ಲಿ ಆರೋಪ ಪಟ್ಟಿಗಳಲ್ಲಿ ಆಕೆಯನ್ನು ಹೆಸರಿಸಲಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಆಕೆ ಇನ್ನೂ ಮಾಲೆಗಾಂವ್ ಸ್ಫೋಟ ಪ್ರಕರಣದಲ್ಲಿ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯ ಅಡಿಯಲ್ಲಿ ವಿಚಾರಣೆಯನ್ನು ಎದುರಿಸುತ್ತಿದ್ದಾರೆ.

ಆದರೂ ಬಿಜೆಪಿ ಆಕೆಯನ್ನು ಕಣಕ್ಕಿಳಿಸಿರುವುದು ಭಯೋತ್ಪಾದನೆಯನ್ನು ವಿರೋಧಿಸುವ ಅವರ ಅಬ್ಬರದ ಮಾತುಗಳ ಟೊಳ್ಳನ್ನು ಸಂಪೂರ್ಣವಾಗಿ ಅನಾವರಣಗೊಳಿಸಿದೆ. ಆಕೆಯೇ ಸ್ವತಃ ತನ್ನ ಸ್ಪರ್ಧೆಯ ನೆಲೆ ಎಷ್ಟು ಅಸಹ್ಯಕಾರಿ ಎಂಬುದನ್ನು, ಸಪ್ಟಂಬರ್ 26, 2011ರಂದು ಮುಂಬೈಯಲ್ಲಿ ಐ.ಎಸ್.ಐ. ಪ್ರಾಯೋಜಿತ ಭಯೋತ್ಪಾದನಾ ದಾಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತ ಪ್ರಾಣಾರ್ಪಣೆ ಮಾಡಿದ ಆಗಿನ ಭಯೋತ್ಪಾದನಾ–ನಿರೋಧಕ ದಳದ ಮುಖ್ಯಸ್ಥ ಹೇಮಂತ ಕರ್ಕರೆಯವರ ವಿರುದ್ದ ಹರಿಹಾಯುವ ಮೂಲಕ ಬಯಲು ಮಾಡಿಕೊಂಡಿದ್ದಾರೆ.

ಒಬ್ಬ ಹುತಾತ್ಮರನ್ನು ಈ ರೀತಿ ಅವಹೇಳನ ಮಾಡಿರುವುದು ವ್ಯಾಪಕ ಟೀಕೆಗೆ ಒಳಗಾಗಿದೆ. ದೇಶದ ಐಪಿಎಸ್ ಅಧಿಕಾರಿಗಳ ಸಂಘ ಕೂಡ ಟೀಕೆ ಮಾಡಿದೆ. ಆದರೂ ಪ್ರಧಾನ ಮಂತ್ರಿಗಳೇ ಆಕೆಯನ್ನು ಚುನಾವಣೆಗೆ ನಿಲ್ಲಿಸಿರುವುದನ್ನು ಸಮರ್ಥಿಸಿಕೊಂಡಿದ್ದಾರೆ, ಆಕೆ ಸಾವಿರಾರು ವರ್ಷಗಳ ಧಾರ್ಮಿಕ , ತಾತ್ವಿಕ ಮತ್ತು ನಾಗರಿಕತೆಯ ಮೌಲ್ಯಗಳ ಸಂಕೇತ ಎಂದು ಬಿಂಬಿಸಿದ್ದಾರೆ. ಈ ರೀತಿಯಲ್ಲಿ ಒಬ್ಬ ಸಂವಿಧಾನಿಕ ಹುದ್ದೆಯನ್ನು ಅಲಂಕರಿಸಿರುವವರು ಒಂದು ಕ್ರಿಮಿನಲ್ ಚಟುವಟಿಕೆಯನ್ನು ಇಷ್ಟು ಭಂಡತನದಿಂದ ರಾಜಕೀಯಕರಣಗೊಳಿಸಿರುವುದನ್ನು ಈ ಹಿಂದೆ ಕಂಡಿರಲಿಲ್ಲ.

ಜನಗಳಲ್ಲಿ ತಮ್ಮ ಜೀವನಾಧಾರಗಳಿಗೆ ಬಂದೆರಗಿರುವ ಬಿಕ್ಕಟ್ಟಿನ ಬಗ್ಗೆ ಅಸಂತೃಪ್ತಿ ಹೆಚ್ಚುತ್ತಿರುವುದನ್ನು ಕಂಡು ಹತಾಶಗೊಂಡಿರುವ ಬಿಜೆಪಿ ಮತ್ತು ಪ್ರಧಾನ ಮಂತ್ರಿಗಳು ಮತದಾರರನ್ನು ಧ್ರುವೀಕರಿಸಲು ಸರ್ವ ಪ್ರಯತ್ನ ನಡೆಸುತ್ತಿದ್ದಾರೆ ಎಂಬುದೀಗ ಸ್ಪಷ್ಟವಾಗುತ್ತಿದೆ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಇದು ಚುನಾವಣಾ ವಾತಾವರಣವನ್ನು ಕಲುಷಿತಗೊಳಿಸುವ ಮತ್ತು ಕಾನೂನಿನ ಆಳ್ವಿಕೆಯನ್ನು ಮತ್ತು ಸಂವಿಧಾನಿಕ ವ್ಯವಸ್ಥೆಯನ್ನು ಬುಡಮೇಲು ಮಾಡುವ ಪ್ರಯತ್ನ ಎಂದು ಖಂಡಿಸಿದೆ. ಚುನಾವಣೆಗಳಲ್ಲಿ ಇವರನ್ನು ತಿರಸ್ಕರಿಸುವ ಮೂಲಕ ಈ ದುಷ್ಟ ಪ್ರಯತ್ನಗಳನ್ನು ಸೋಲಿಸಬೇಕು ಎಂದು ಸಿಪಿಐ(ಎಂ) ಜನತೆಗೆ ಮನವಿ ಮಾಡಿಕೊಂಡಿದೆ.

ಶ್ರೀಲಂಕಾದಲ್ಲಿ 290 ಬಲಿ ತೆಗೆದುಕೊಂಡ ಸರಣಿ ಸ್ಫೋಟ –ಸಿಪಿಐ(ಎಂ) ಪೊಲಿಟ್ ಬ್ಯುರೋ ಖಂಡನೆ

ಎಲ್ಲ ಸ್ವರೂಪಗಳ ಧಾರ್ಮಿಕ ಉಗ್ರವಾದವನ್ನು ಎದುರಿಸಬೇಕಾದ ಅಗತ್ಯವನ್ನು ಎತ್ತಿ ತೋರುತ್ತದೆ

ಶ್ರೀಲಂಕಾದಲ್ಲಿ 290 ಜನರನ್ನು ಬಲಿತೆಗೆದುಕೊಂಡ, 500 ಮಂದಿಯನ್ನು ಗಾಯಗೊಳಿಸಿರುವ ಸರಣಿ ಸ್ಫೋಟದ ಬಗ್ಗೆ ಸಿಪಿಐ (ಎಂ) ಪೊಲಿಟ್ ಬ್ಯುರೋ ಬಲವಾದ ಖಂಡನೆ ಮತ್ತು ಆಕ್ರೋಶವನ್ನು ವ್ಯಕ್ತಪಡಿಸಿದೆ. ಸಾವು–ನೋವುಗಳ ಸಂಖ್ಯೆ ಇನ್ನೂ ಹೆಚ್ಚಾಗಬಹುದು ಎನ್ನಲಾಗಿದೆ. ಈಸ್ಟರ್ ಭಾನುವಾರದಂದು ಚರ್ಚುಗಳಲ್ಲಿ ನೆರೆದಿದ್ದವರು ಮತ್ತು ಹೊಟೇಲು ಗಳಲ್ಲಿ ಇದ್ದವರನ್ನು ಗುರಿ ಮಾಡಿ ಈ ಭಯೋತ್ಪಾದನಾ ದಾಳಿ ನಡೆದಿದೆ.

ಈ ಭೀಕರ ದಾಳಿ ಹೇಗೆ ಧಾರ್ಮಿಕ ಉಗ್ರವಾದದಿಂದ ಪ್ರೇರಿತ ಭಯೋತ್ಪಾದನೆ ದಕ್ಷಿಣ ಏಷ್ಯಾದ ದೇಶಗಳಲ್ಲಿ ಹೆಚ್ಚು–ಹೆಚ್ಚಾಗಿ ಅಲ್ಪಸಂಖ್ಯಾತರ ಮೇಲೆ ಗುರಿಯಿಡುತ್ತಿದೆ ಎಂಬುದನ್ನು ಎತ್ತಿ ತೋರಿದೆ. ಎಲ್ಲ ಸ್ವರೂಪಗಳ ಧಾರ್ಮಿಕ ಉಗ್ರವಾದವನ್ನು ಎದುರಿಸಬೇಕಾದ ಅಗತ್ಯವನ್ನು ಇದು ಎತ್ತಿ ತೋರುತ್ತದೆ ಎಂದು ಪೊಲಿಟ್ ಬ್ಯುರೋ ಹೇಳಿದೆ.

ಈ ಸಂದರ್ಭದಲ್ಲಿ ಶ್ರೀಲಂಕಾ ಜನತೆಯೊಡನೆ ಸೌಹಾರ್ದವನ್ನು ವ್ಯಕ್ತಪಡಿಸಿರುವ ಸಿಪಿಐ(ಎಂ) ಪೊಲಿಟ್ ಬ್ಯುರೋ ಎಲ್ಲ ಸಂತ್ರಸ್ತ ಕುಟುಂಬಗಳಿಗೆ ಹಾರ್ದಿಕ ಅನುತಾಪವನ್ನು ವ್ಯಕ್ತಪಡಿಸಿದೆ. ಈ ಹತ್ಯಾಕಾಂಡಕ್ಕೆ ಕಾರಣರಾಗಿರುವ ಅಪರಾಧಿಗಳನ್ನು ಮತ್ತು ಗುಂಪನ್ನು ಪತ್ತೆ ಹಚ್ಚಿ ಅವರ ವಿರುದ್ಧ ತೀವ್ರ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂಬ ನಿರೀಕ್ಷೆಯನ್ನು ಸಿಪಿಐ (ಎಂ) ವ್ಯಕ್ತಪಡಿಸಿದೆ.

ಇರಾನಿ ತೈಲ ಖರೀದಿ ಮೇಲೆ ಅಮೆರಿಕನ್ ನಿರ್ಬಂಧವನ್ನು ತಿರಸ್ಕರಿಸಬೇಕು – ಭಾರತ ಸರಕಾರಕ್ಕೆ ಸಿಪಿಐ(ಎಂ) ಆಗ್ರಹ

ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಸರಕಾರ ಇರಾನಿನಿಂದ ತೈಲ ಖರೀದಿಸುವ ದೇಶಗಳ ಮೇಲೆ ನಿರ್ಬಂಧಗಳನ್ನು ಹೇರಲು ನಿರ್ಧರಿಸಿರುವುದನ್ನು ಸಿಪಿಐ(ಎಂ) ಪೊಲಿಟ್ ಬ್ಯುರೊ ಖಂಡಿಸಿದೆ. ಈ ವಿಷಯದಲ್ಲಿ ಇದುವರೆಗೆ ಟ್ರಂಪ್ ಸರಕಾರ ಭಾರತ ಮತ್ತು ಇತರ ಕೆಲವು ದೇಶಗಳಿಗೆ ವಿನಾಯ್ತಿಯನ್ನು ಕೊಟ್ಟಿತ್ತು. ಈಗ ಅದನ್ನು ವಿಸ್ತರಿಸದಿರಲು ನಿರ್ಧರಿಸಿದೆ.

ಇರಾನಿನಿಂದ ತೈಲ ಆಮದನ್ನು ನಿಲ್ಲಿಸುವ ಯಾವುದೇ ಕ್ರಮ ಭಾರತದ ಇಂಧನ ಭದ್ರತೆ ಮತ್ತು ರಾಷ್ಟ್ರೀಯ ಹಿತಾಸಕ್ತಿಗಳಿಗೆ ಹಾನಿಯುಂಟು ಮಾಡುತ್ತದೆ. ಈ ಹಿಂದೆ ವಿದೇಶಾಂಗ ವ್ಯವಹಾರಗಳ ಮಂತ್ರಿ ಸುಷ್ಮಾ ಸ್ವರಾಜ್, ಭಾರತವು ವಿಶ್ವಸಂಸ್ಥೆ ಅಂಗೀಕರಿಸಿದ ನಿರ್ಬಂಧಗಳನ್ನು ಬಿಟ್ಟು ಬೇರೆ ಯಾವುದೇ ನಿರ್ಬಂಧಗಳಿಗೆ ಬದ್ಧವಾಗಿರುವುದಿಲ್ಲ ಎಂದು ಹೇಳಿದ್ದರು.

ಅಮೆರಿಕಾ ಸಂಯುಕ್ತ ಸಂಸ್ಥಾನ ಏಕಪಕ್ಷೀಯವಾಗಿ ಈ ಕಾನೂನುಬಾಹಿರ ನಿರ್ಬಂಧಗಳನ್ನು ಹೇರಿರುವುದರಿಂದಾಗಿ, ಬಿಜೆಪಿ ನೇತೃತ್ವದ ಸರಕಾರ ಈ ನಿರ್ಬಂಧಗಳನ್ನು ತಿರಸ್ಕರಿಸಬೇಕು ಮತ್ತು ಇರಾನಿನಿಂದ ತೈಲ ಖರೀದಿಸುವುದನ್ನು ದೇಶದ ಹಿತದೃಷ್ಟಿಯಿಂದ ಮುಂದುವರೆಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗ್ರಹಿಸಿದೆ.

ಸಂಪಾದಕೀಯ

ಸತ್ತವರಲ್ಲಿ ನಮ್ಮವರು ಯಾರು ?

"ಎಲ್ಲಿ ನೋಡಿದರಲ್ಲಿ ಚಿಂದಿಯಾದ ಶವಗಳು. ಕಾಲಿಟ್ಟಲೆಲ್ಲ ರಕ್ತವೋ ರಕ್ತ. ಲೆಕ್ಕವಿಲ್ಲದಷ್ಟು ಮೃತದೇಹಗಳ ಅವಶೇಷಗಳು. ಮುಂಡವಿಲ್ಲದ ರುಂಡಗಳು, ರುಂಡವಿಲ್ಲದ ಮುಂಡಗಳು. ಕೈ ಕಾಲುಗಳಿಲ್ಲದ ದೇಹಗಳು. ಗಾಯಗೊಂಡು ಒದ್ದಾಡುತ್ತಿದ್ದ ಹಲವರ ದೇಹಗಳಲ್ಲಿ ಚೂಪಾದ ಗಾಜಿನ ಚೂರುಗಳು ಹೊಕ್ಕಿದ್ದವು. ತಮ್ಮವರ ಪತ್ತೆಗಾಗಿ ಸಾವಿರಾರು ಮಂದಿ ಅಲ್ಲಿ ಸೇರಿದ್ದರು. ಶವಗಳನ್ನು ಗುರುತಿಸಲಾಗದೆ ಅವರು ರೋಧಿಸುತ್ತಿದ್ದರು. ಅವರ ಆಕ್ರಂದನ ಮುಗಿಲು ಮುಟ್ಟಿತ್ತು." ಇದು ಈಸ್ಟರ್ ಭಾನುವಾರ ದ್ವೀಪರಾಷ್ಟ್ರ ಶ್ರೀಲಂಕಾದ ಕೊಲೊಂಬೋ ನಗರದಲ್ಲಿನ 3 ಚರ್ಚ್‌ಗಳಲ್ಲಿ ಮತ್ತು 3 ಪಂಚತಾರಾ ಹೋಟೇಲುಗಳಲ್ಲಿ ಸಂಭವಿಸಿದ ಭೀಕರ ಸರಣಿ ಬಾಂಬ್ ಸ್ಫೋಟದ ನಂತರ ಕಂಡುಬಂದ ಮನಕಲಕುವ ದೃಶ್ಯ.

ಚರ್ಚ್‌ಗಳಲ್ಲಿ ಪ್ರಾರ್ಥನೆಯಲ್ಲಿ ನಿರತರಾಗಿದ್ದವರ ಮೇಲೆ ಮತ್ತು ವಿಲಾಸಿ ಹೋಟೇಲುಗಳಲ್ಲಿ ತಂಗಿದ್ದ ವಿದೇಶಿ ಪ್ರವಾಶಿಗರನ್ನು ಗುರಿಯಾಗಿಸಿಕೊಂಡು ನಡೆದ ಎರಡು ಆತ್ಮಹತ್ಯಾ ದಾಳಿ ಮತ್ತು ಬಾಂಬ್ ಸ್ಫೋಟಗಳಿಂದಾಗಿ 300 ಕ್ಕೂ ಅಧಿಕ ಮಂದಿ ಅಮಾಯಕರು ಅಸುನೀಗಿ, 500 ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಭಾರತ, ಪಾಕಿಸ್ತಾನ, ಅಮೇರಿಕ, ಡೆನ್ಮಾರ್ಕ್, ಬ್ರಿಟನ್, ಟರ್ಕಿ, ಪೋರ್ಚುಗಲ್, ಚೀನಾ ಮೊದಲಾದ ದೇಶಗಳ 35 ಪ್ರಜೆಗಳು ಮೃತಪಟ್ಟಿದ್ದಾರೆ. ಶ್ರೀಲಂಕಾದ ಇತಿಹಾಸದಲ್ಲೇ ಅತ್ಯಂತ ಬೀಭತ್ಸವಾದ ಈ ದಾಳಿಯನ್ನು ಭಾರತವೂ ಸೇರಿದಂತೆ ವಿಶ್ವದ ಅನೇಕ ದೇಶಗಳ ಗಣ್ಯರು ಬಲವಾಗಿ ಖಂಡಿಸಿದ್ದಾರೆ.

ಅಲ್ಲಿ ಮಕ್ಕಳನ್ನು ಕಳೆದುಕೊಂಡ ಹೆತ್ತವರು, ಅಪ್ಪ–ಅಮ್ಮನನ್ನು ಕಳೆದುಕೊಂಡ ಮಕ್ಕಳು, ಪತಿಯನ್ನು ಕಳೆದುಕೊಂಡ ಮಹಿಳೆಯರು, ಪತ್ನಿಯನ್ನು ಕಳೆದುಕೊಂಡ ಪುರುಷರು ತಮ್ಮವರನ್ನು ಹುಡುಕುತ್ತಿದ್ದರು. ಛಿದ್ರ, ಛಿದ್ರವಾದ ಮಾನವ ದೇಹದ ತುಂಡುಗಳಲ್ಲಿ ತಮ್ಮವರನ್ನು ಗುರುತಿಸುವುದು ಹೇಗೆ? ಸತ್ತವರಲ್ಲಿ ನಮ್ಮವರು ಯಾರು?

ಅದೇ ರಕ್ತ! ಅದೇ ಅಂಗಾಂಗಗಳು! ಇವರು ನಮ್ಮವರಾ? ಅವರು ನಮ್ಮವರಾ? ಒಂದರ ಮೇಲೊಂದು ಎಂಬಂತೆ ಬಿದ್ದಿರುವ ಮೃತದೇಹಗಳಲ್ಲಿ ನಮ್ಮವರು ಯಾರು ಎಂದು ಗುರುತಿಸುವುದು ಹೇಗೆ? ಇಂತಹ ಪ್ರಕರಣಗಳಲ್ಲಿ ಮೃತದೇಹಗಳನ್ನು ಗುರುತಿಸಲಾಗದೆ. ತಮಗೆ ಸಂಬಂಧವಿಲ್ಲದ ಮೃತ ದೇಹವನ್ನು ಹಸ್ತಾಂತರಿಸಿಕೊಂಡು ಅಂತ್ಯಸಂಸ್ಕಾರ ಮಾಡಿದ ಉದಾರಣೆಗಳಿವೆ. ಶ್ರೀಲಂಕಾ ಸ್ಫೋಟದಲ್ಲಿ ಮಡಿದ 7 ಜನ ಕನ್ನಡಿಗರು ಸೇರಿದಂತೆ 10 ಜನ ಭಾರತೀಯರು ನಮ್ಮವರೇ. ಮೃತಪಟ್ಟ ಇನ್ನುಳಿದವರೆಲ್ಲರೂ ನಮ್ಮವರೇ.



"ಇವ ನಮ್ಮವ, ಇವ ನಮ್ಮವ" ಎನ್ನುವವನಿಗೆ ತಮ್ಮವರು ಸಿಗುತ್ತಾರೆ. ಆತನಿಗೆ ಎಲ್ಲರೂ ತನ್ನವರೇ ಆಗಿರುತ್ತಾರೆ. ಆತ ಮಾನವ ರಕ್ತದಲ್ಲಿ ಬೇಧ ಕಾಣುವುದಿಲ್ಲ. ಹುಟ್ಟಿನಿಂದಲೇ ಕೆಲವರು ಕೀಳು ಜಾತಿಯವರಾಗಿರುತ್ತಾರೆ ಎಂಬುವುದನ್ನು ಆತ ಒಪ್ಪುವುದಿಲ್ಲ. ಮತ ಧರ್ಮಗಳ ಖಾಸಗಿ ನಂಬಿಕೆಗಳನ್ನು ಆತ ವಿವಾದಾಸ್ಪದಗೊಳಿಸುವುದಿಲ್ಲ. ಪುಲ್ವಾಮಾ ದಾಳಿಯಲ್ಲಿ ಸಾವನ್ನಪ್ಪಿದ ಯೋಧರನ್ನು ಆತ 'ತನ್ನವರು' ಎಂದು ದುಃಖಿಸುತ್ತಾನೆ. ಕಳೆದ ಮಾರ್ಚ್ 15 ರಂದು ನ್ಯೂಜಿಲ್ಯಾಂಡ್‌ನ ಮಸೀದಿಯಲ್ಲಿ ನಡೆದ ಶೂಟೌಟ್‌ಗೆ ಬಲಿಯಾದ 50 ಮಂದಿ ಪ್ರಾರ್ಥನಾ ನಿರತರನ್ನು ಆತ 'ತನ್ನವರು' ಎಂದು ಗುರುತಿಸುತ್ತಾನೆ. ಈಗ ಶ್ರೀಲಂಕಾದ ಚರ್ಚುಗಳಲ್ಲಿ ಬಾಂಬ್ ಸ್ಫೋಟಿಸಿ ಸಾಯಿಸಿದ ನೂರಾರು ಮಂದಿ ಭಕ್ತರನ್ನು ಆತ 'ತನ್ನವರು' ಎಂದು ಕಣ್ಣೀರು ಹಾಕುತ್ತಾನೆ. ಆತನಿಗೆ 'ತನ್ನವರು' ಸಿಕ್ಕೇ ಸಿಗುತ್ತಾರೆ.

'ತನ್ನವರು' ಚೆನ್ನಾಗಿರಬೇಕು. ತನ್ನವರು ನೆಮ್ಮದಿಯಿಂದ ಇರಬೇಕು. ಅವರಿಗೆ ಕಷ್ಟಗಳು ಬರಬಾರದು. ಹೀಗೆ 'ಇವ ನಮ್ಮವ ಇವ ನಮ್ಮವ' ಎನ್ನುವವನಿಗೆ ಎಲ್ಲರೂ ಚೆನ್ನಾಗಿರಬೇಕೆಂಬ ಮಹದಾಸೆ! ಆತನಿಗೆ ಯುದ್ಧ ಬೇಡ, ಶಾಂತಿ ಬೇಕು. ಆತನಿಗೆ ಪ್ರೀತಿ ಬೇಕು, ಹಿಂಸೆ ಬೇಡ, ಆತ ಹಂಚಿಕೊಂಡು ಬದುಕು ಬಯಸುತ್ತಾನೆ. ಎಲ್ಲರನ್ನೂ ಒಳಗೊಳ್ಳಲು ಶ್ರಮಿಸುತ್ತಾನೆ. ಆತ ವೈವಿಧ್ಯತೆಯಲ್ಲಿ ಏಕತೆ ಕಾಣುತ್ತಾನೆ. ಆತ ಗಡಿಗಳಿಲ್ಲದ, ಗಡಿ ಘರ್ಷಣೆಗಳಿಲ್ಲದ ವಿಶ್ವದ ಕನಸು ಕಾಣುತ್ತಾನೆ. ಆತ ವಿಶ್ವಮಾನವ. ಸರ್ವಜನಾಂಗ ಪ್ರೇಮಿ, ವಿಶ್ವದ ಕರಿಯರಲ್ಲಿ, ಬಿಳಿಯರಲ್ಲಿ ಆತ ಭೇಧ ಕಾಣುವುದಿಲ್ಲ. ಆಫ್ರಿಕಾದವರು, ಅಮೆರಿಕದವರು ಆತನಿಗೆ ಬೇರೆ ಬೇರೆ ಅಲ್ಲ. ಅವರ ಭಾಷೆ ಯಾವುದೇ ಇರಲಿ. ಅವರ ಆಹಾರ ವಿಹಾರ ಹೇಗೂ ಇರಲಿ, ಆತನಿಗೆ ಅವರೆಲ್ಲರೂ 'ತನ್ನವರು'.

ಎಲ್ಲಾದರೂ ಸರಿಯೇ, ಭೂಕಂಪದಂತಹ, ಪ್ರವಾಹದಂತಹ, ಬರಗಾಲದಂತಹ ನೈಸರ್ಗಿಕ ವಿಕೋಪ ಸಂಭವಿಸಿ ಸಾವು ನೋವುಗಳಾದಾಗ ಆತ ಮರಗುತ್ತಾನೆ. ತನ್ನ ಕೈಲಾದಷ್ಟು ನೆರವು ನೀಡುತ್ತಾನೆ. ಆತನಿಗೆ ಪಾಕಿಸ್ತಾನ, ಹಿಂದುಸ್ಥಾನ ಎಂಬ ಭೇದವಿಲ್ಲ. ಹಿಂದು–ಮುಸ್ಲಿಂ ಎಂಬ ದ್ವೇಷವಿಲ್ಲ. ಅವನು ಚರ್ಚ್‌ಗಳನ್ನು ಧ್ವಂಸ ಮಾಡುವುದಿಲ್ಲ. ಮಸೀದಿಯನ್ನು ಕೆಡವಿ ಹೆಮ್ಮೆ ಪಟ್ಟುಕೊಳ್ಳುವುದಿಲ್ಲ. ಆತ ತನ್ನ ನಂಬಿಕೆಗಳನ್ನು ಇತರರ ಮೇಲೆ ಹೇರುವುದಿಲ್ಲ. ದಲಿತರನ್ನು ಆತ ನಿಂದಿಸುವುದಿಲ್ಲ. ಮಹಿಳೆಯರ ದೇವಸ್ಥಾನ ಪ್ರವೇಶವನ್ನು ಆತ ವಿರೋಧಿಸುವುದಿಲ್ಲ. ಎಲ್ಲರ ಸ್ವಾತಂತ್ರ್ಯವನ್ನು ಆತ ಗೌರವಿಸುತ್ತಾನೆ. ಎಲ್ಲೆಲ್ಲೂ ತನ್ನವರಿದ್ದಾರೆ. ಎಲ್ಲಾ ದೇಶಗಳಲ್ಲಿದ್ದಾರೆ. ಎಲ್ಲಾ ಭಾಷೆಗಳನ್ನಾಡುವವರಲ್ಲಿದ್ದಾರೆ. ಎಲ್ಲಾ ಮತಧರ್ಮಗಳ ಅನುಯಾಯಿಗಳಲ್ಲಿದ್ದಾರೆ. ಯಾವುದೇ ಮತವನ್ನು ಪ್ರತಿಪಾದಿಸದಿರುವವರ ನಡುವೆಯೂ ಇದ್ದಾರೆ. ಎಲ್ಲಾ ತರಹದ ಆಹಾರ ಸೇವಿಸುವವರ, ವಿಭಿನ್ನ ಉಡುಪುಗಳನ್ನು ತೊಡುವವರ, ಎಲ್ಲರ ನಡುವೆಯೂ ಆ ವಿಶ್ವ ಮಾನವನಿಗೆ 'ತನ್ನವರು' ಇದ್ದಾರೆ. ●

ಸಮಾಜ ಕಲ್ಯಾಣ ಇಲಾಖೆ ಯ ದೇವದಾಸಿ ಮಹಿಳೆಯರ ಮಕ್ಕಳ ಮದುವೆಯ ತಿದ್ದುಪಡಿ ಆದೇಶ ಸ್ವಾಗತಾರ್ಹ

ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ಹೋರಾಟಕ್ಕೆ ಸಿಕ್ಕ ಜಯ



ಕ.ರಾ.ದೇವದಾಸಿ ಮಹಿಳೆಯರ ವಿಮೋಚನಾ ಸಂಘವು ದೇವದಾಸಿ ಮಹಿಳೆಯರ ಮಕ್ಕಳ ಸ್ವಜಾತಿ ಅಥವಾ ಅಂತರ್ಜಾತಿಗಳ ವಿವಾಹಕ್ಕೆ 5.ಲಕ್ಷ ರೂ ಗಳ ಪ್ರೋತ್ಸಾಹ ಧನ ನೀಡುವಂತೆ ಕಳೆದ ಹತ್ತು ವರ್ಷಗಳಿಂದ ಸರಕಾರವನ್ನು ಒತ್ತಾಯಿಸಿ ಹೋರಾಟ ನಡೆಸುತ್ತಾ ಬಂದುದ್ದು ಮತ್ತು ಸರ್ಕಾರದ ಜೋತೆ ಹಲವು ಸುತ್ತಿನ ಮಾತುಕತೆ ನಡೆಸಲಾಗಿತ್ತು. ಇದಕ್ಕೆ ಮಣಿದ ರಾಜ್ಯ ಸರಕಾರ ಕಳೆದ ವರ್ಷ ದೇವದಾಸಿ ಮಹಿಳೆಯರು ಅನ್ಯಜಾತಿ ಯವರ ಜೋತೆ ಅಥವಾ ಅಂತರ್ಜಾತೀಯ ಮದುವೆ ಯಾದಲ್ಲಿ ಗಂಡು ಮಕ್ಕಳಾದಲ್ಲಿ ಅವರಿಗೆ 3 ಲಕ್ಷ ರೂ ಮತ್ತು ಹೆಣ್ಣು ಮಕ್ಕಳಾದಲ್ಲಿ ಅವರಿಗೆ 5.ಲಕ್ಷ ರೂ ಗಳ ಪ್ರೋತ್ಸಾಹ ಧನ ನೀಡುವುದಾಗಿ ಘೋಷಿಸಿತ್ತು. ಇದನ್ನು 2018–2019 ರಲ್ಲಿಯೂ ಪ್ರಕಟಿಸಿತ್ತು...ದೇವದಾಸಿ ಮಹಿಳೆಯರ ವಿಮೋಚನಾ ಸಂಘ. ಈ ಸೌಲಭ್ಯ ವನ್ನು ಸ್ವಜಾತಿ ವಿವಾಹಗಳಿಗೂ ನೀಡಬೇಕೆಂದು ಬಲವಾಗಿ ಒತ್ತಾಯಿಸಿತ್ತು ಮತ್ತು ಬಲವಾಗಿ ಪ್ರತಿಭಟಿಸಿತ್ತು. ಅಲ್ಲದೆ ಮಂತ್ರಿಗಳ ಜೊತೆಯಲ್ಲಿ ಮಾತುಕತೆ ನಡೆಸಲಾಗಿತ್ತು...ಈ ಒತ್ತಾಯದ ಪರಿಣಾಮವಾಗಿ ಸರಕಾರ ಸದರಿ ಸೌಲಭ್ಯವನ್ನು ಸ್ವಜಾತಿ ಮದುವೆಗೂ ವಿಸ್ತರಿಸಿ ತಿದ್ದುಪಡಿ ಆದೇಶವನ್ನು ಹೋರಡಿಸಿರುವುದು ಸ್ವಾಗತಾರ್ಹ ವಿಷಯವಾಗಿದೆ..ಇದು ದೇವದಾಸಿ ಮಹಿಳೆಯರ ವಿಮೋಚನಾ ಸಂಘ ಹಾಗೂ ಅವರ ಮಕ್ಕಳ ಸಂಘಟಿತ ಹೋರಾಟಕ್ಕೆ ಸಂದ ಜಯವಾಗಿದೆ. ರಾಜ್ಯ ಸರಕಾರ ಇದರ ದುರುಪಯೋಗವಾಗದಂತೆ ತಡೆಯಲು ಅಗತ್ಯ ಕ್ರಮವಹಿಸ ಬೇಕು.ಮತ್ತು ದೇವದಾಸಿ ಮಹಿಳೆಯರ ಹೆಣ್ಣು ಮಕ್ಕಳಿಗೆ ಪ್ರೋತ್ಸಾಹ .ಧನದ ಕನಿಷ್ಟ ಅರ್ದದಷ್ಟು ಹಣವನ್ನು ಕೊನೆಯ ಪಕ್ಷ ಐದು ವರ್ಷ ಅವರ ಹೆಸರಿನಲ್ಲಿ ಫಿಕ್ಸಡ್ ಡಿಪಾಜಿಟ್ ಆಗಿರುವಂತೆ ಕ್ರಮ ವಹಿಸಬೇಕು. ಆದೇಶ ವನ್ನು

'ದೇಶದ ರಕ್ಷಣೆಗಾಗಿ ಬಿಜೆಪಿ ಸೋಲಬೇಕು' ಕೊಡಗು ಜಿಲ್ಲಾ ರಾಜಕೀಯ ಸಮಾವೇಶದಲ್ಲಿ ಕರೆ

ಬಿಜೆಪಿ ನೇತೃತ್ವದ ಎನ್.ಡಿ.ಎ ಸರಕಾರ ಮತ್ತೇ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಲ್ಲಿ ದೇಶದಲ್ಲಿ ಗಂಡಾತರದಲ್ಲಿ ಸಿಲುಕಲಿದೆ. ಮೋದಿಯವರ ಸರಕಾರ ತಂದದ್ದು ವಿಕಾಸವಲ್ಲ, ಬದಲಾಗಿ ವಿನಾಶವನ್ನು. ಇದನ್ನು ಅರಿತು ಜನತೆ ದೇಶದ ಉಳಿವಿಗಾಗಿ ಬಿಜೆಪಿ ಕೂಟವನ್ನು ಸೋಲಿಸಬೇಕು ಎಂದು ಸಿಪಿಐ(ಎಂ) ಮುಖಂಡರಾದ ಕಾಂ. ಎಸ್.ವೈ. ಗುರುಶಾಂತರವರು ಕರೆ ನೀಡಿದರು.

ಅವರು ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಕೊಡಗು ಜಿಲ್ಲಾ ಮಟ್ಟದ ರಾಜಕೀಯ ಸಮಾವೇಶವನ್ನು ಸಿದ್ಧಾಪುರದ ನಾರಾಯಣಗುರು ಹಾಲ್ ನಲ್ಲಿ ಉದ್ಘಾಟಿಸಿ ಮಾತನಾಡುತ್ತಿದ್ದರು.

ಕಳೆದ ಐದು ವರುಷಗಳ ಆಡಳಿತದಲ್ಲಿ ಎಲ್ಲಾ ರಂಗಗಳೂ ವೈಫಲ್ಯ ಅನುಭವಿಸಿವೆ. ಮೋದಿ ಸರಕಾರಕ್ಕೆ ಸೋಲು ನಿಶ್ಚಯವಾಗುತ್ತಿರುವದನ್ನು ಮನಗಂಡು ಜನತೆಯನ್ನು ದೇಶದ ಭದ್ರತೆ ತನ್ನಿಂದಲೇ ಎಂದು ಅಬ್ಬರಿಸಿ ಅಭದ್ರತೆಯ ಭಯವನ್ನು ಹುಟ್ಟು ಹಾಕುತ್ತಿದ್ದಾರೆ. ನಮ್ಮ ಆರ್ಥಿಕತೆ ಕುಸಿಯುತ್ತಿದ್ದು ಸಾಮಾನ್ಯ ಜನ ದಿವಾಳಿಯೇಳುತ್ತಿದ್ದಾರೆ. ವಿದೇಶದ ಸಾಲದ ಹೊರೆ ವಿಪರೀತ ಹೆಚ್ಚಿದ್ದು ಸಾಲದ ಕೂಪದಲ್ಲಿ ದೇಶವನ್ನು ಕೆಡವಲಾಗಿದೆ. ಪ್ರತಿಭಾ ಪಲಾಯನ, ನಿರುದ್ಯೋಗದ ಬವಣೆ ಹೆಚ್ಚಿದೆ. ಕೃಷಿ ರಂಗದ ಬಿಕ್ಕಟ್ಟು ತಾರಕ್ಕೇರುತ್ತಿದೆ. ಇಂತಹ ಸ್ಥಿತಿಯೆದರು ಕಾರಣವಾದ ತನ್ನ ವಿನಾಶಕಾರಿ ನೀತಿಗಳನ್ನು ಬದಲಿಸಿಕೊಳ್ಳದೇ ಭಾರತ 'ವಿಶ್ವ ಗುರು' ವಾಗಲಿದೆ ಎಂಬ ಭ್ರಮೆಯನ್ನು ಹುಟ್ಟು ಹಾಕಲಾಗುತ್ತಿದೆ. ಪುಲ್ವಾಮ ಘಟನೆ ನಡೆಯುವ ಮೊದಲು ಮೋದಿಯನ್ನೇ ಬದಲಿಸಬೇಕೇ ಎಂದು ಬದಲಿ ನಾಯಕನ ಬಗ್ಗೆ ಸಂಘ ಪರಿವಾರವೇ ಯೋಚಿಸುತ್ತಿತ್ತು. ಹೀಗಾಗಿ ಮೋದಿ ಸರಕಾರದ

ಪುಟ 4 ಕ್ಕೆ




ಬೆಂಗಳೂರು



ಕುಂದಾಪುರ


ಹೊಸಪೇಟೆ



ಹುಣಸೂರು



ಮಂಗಳೂರು

ರಾಜ್ಯದಾದ್ಯಂತ ಮೇ ದಿನದ ರ್ಯಾಲಿಗಳು



ಹುಬ್ಬಳ್ಳಿ



ಮಂಡ್ಯ



ಗಂಗಾವತಿ

ಕೊಡಗು ಜಿಲ್ಲಾ ರಾಜಕೀಯ ಸಮಾವೇಶದಲ್ಲಿ ಕರೆ... ಪುಟ 3 ರಿಂದ

ವೈಫಲ್ಯಗಳ ಬಗ್ಗೆ ಸಚಿವ ನಿತಿನ್ ಗಡಕರಿ, ಯಶವಂತ ಸಿನ್ಹಾ, ಅರುಣ್ ಶೌರಿ ಯಂತಹವರೇ ಮಾತನಾಡ ತೊಡಗಿದ್ದರು ಎಂಬುದನ್ನು ಗಮನಿಸಬೇಕು ಎಂದರು. ಮೋದಿಯದು ಅತ್ಯಂತ ಭ್ರಷ್ಟ, ಹಗರಣಗಳ ಸರಕಾರ. ಮೋದಿ ಕಳ್ಳರು ಊರು ಕೊಳ್ಳೆ ಹೊಡೆದ ಮೇಲೆ ಅದನ್ನು ಖಾತ್ರಿ ಮಾಡಿಕೊಂಡು ಬಾಗಿಲು ಹಾಕುವ ಚೌಕಿದಾರ ಎಂದು ಟೀಕಿಸಿದರು.

ಈ ಸರಕಾರ ಕಾರ್ಪೊರೇಟ್ ಬಂಡವಾಳದ ಬಲ ಮತ್ತು ಫ್ಯಾಶಿಸ್ಟ್ ಮಾದರಿಯ ಕೋಮುವಾದವನ್ನು ಹೊಂದಿರುವ ಸರಕಾರ. ಹೀಗಾಗಿಯೇ ಇದು ದುಡಿಯುವ ವರ್ಗಗಳ ಕಡು ವಿರೋಧಿಯಾಗಿದೆ. ಈ ಚುನಾವಣೆ ಸಂಕಷ್ಟಗಳ ಸರಮಾಲೆ ಸೃಷ್ಟಿಸಿದವರಿಗೆ ತಕ್ಕ ಪಾಠ ಕಲಿಸಲು ಜನತೆಗೆ ಸಿಕ್ಕಿರುವ ಒಂದು ಅಪೂರ್ವ ಅವಕಾಶ. ಓಟಿನ ಅಸ್ತ್ರವನ್ನು ಪರಿಣಾಮಕಾರಿಯಾಗಿ ಬಳಸಿ, ಪ್ರಜಾಪ್ರಭುತ್ವವನ್ನು ಉಳಿಸಬೇಕು. ಈ ಅವಧಿಯಲ್ಲಿ ನಾವು ನಡೆಸಿದ ಹೋರಾಟಗಳಿಗೆ ರಾಜಕೀಯವಾಗಿ ಒಂದು ತಾರ್ಕಿಕ ಹಂತ ಸಿಗಬೇಕಿದೆ. ಆದ್ದರಿಂದ ಬಿಜೆಪಿಯನ್ನು ಸೋಲಿಸಬಲ್ಲ ಜಾತ್ಯಾತೀತ ಅಭ್ಯರ್ಥಿಗೆ ಮತ ನೀಡಲು ಪಕ್ಷ ನಿರ್ಧರಿಸಿದೆ ಎಂದು ತಿಳಿಸಿದರು.

ಜಿಲ್ಲಾ ಕಾರ್ಯದರ್ಶಿ ಡಾ. ಐ.ಆರ್. ದುರ್ಗಾಪ್ರಸಾದ್ ರವರು ಮಾತನಾಡಿ, ಕೊಡಗು ಜಿಲ್ಲೆಯ ಜನತೆ ನರೆ ಹಾವಳಿಗೆ ತುತ್ತಾದಾಗ, ಕಸ್ತೂರಿರಂಗನ್, ಜೀವ ವೈವಿದ್ಯತೆಯ ತಾಣ, ಅರಣ್ಯ ಹಕ್ಕುಗಳ ಕಾಯ್ದೆ, ಪರಿಸರದಂತಹ ಪ್ರಶ್ನೆಗಳಿಂದ ತಲ್ಲಣಿಸುತ್ತಿರುವಾಗ ನಮ್ಮ ಭಾಗದ ಬಿಜೆಪಿ ಸಂಸದರು ಏನು ಮಾಡುತ್ತಿದ್ದರು, ಮಾಡಿದರು ಎಂಬುದನ್ನು ಜನ ನೆನಪಿಸಿಕೊಳ್ಳಬೇಕು. ಇಡೀ ಕೊಡಗಿನ ಲಕ್ಷಾಂತರ ಜನ ತಮ್ಮ ನೆಲೆಗಳಿಂದಲೇ ಎತ್ತಂಗಡಿ ಯಾಗಬೇಕಾದಂತಹ ಸ್ಥಿತಿಯನ್ನು ಕೇಂದ್ರ ಸರಕಾರ ಸೃಷ್ಟಿಸಲು ಮುಂದಾದಾಗ ನಮ್ಮ ಸಂಸದರು ಚಕಾರವೆತ್ತದೇ ದ್ರೋಹ ಎಸಗಿದ್ದಾರೆ. ಇಂತಹವರು ಮತ್ತೇ ಸಂಸತ್ತಿಗೆ ಹೋಗಬೇಕೇ? ಆದ್ದರಿಂದ ಬಿಜೆಪಿಯನ್ನು ಸೋಲಿಸುವುದೇ ಇಂದಿನ ಅಗತ್ಯ. ಆ ಕರ್ತವ್ಯವನ್ನು ನಾವೆಲ್ಲರೂ ನಿರ್ವಹಿಸೋಣ ಎಂದರು.

ಈ ಸಮಾವೇಶದಲ್ಲಿ ನೂರರಷ್ಟು ಪ್ರತಿನಿಧಿಗಳು ಇದರಲ್ಲಿ ಜಿಲ್ಲಾ ಸಂಘಟನಾ ಸಮಿತಿಯ ಸದಸ್ಯರು, ವಿವಿಧ ಶಾಖೆಗಳ ಸದಸ್ಯರು, ಹಿತೈಷಿಗಳು ವಿಶೇಷವಾಗಿ ಆದಿವಾಸಿಗಳು, ಕಾರ್ಮಿಕರು, ಮಹಿಳೆಯರು ಭಾಗವಹಿಸಿದ್ದರು. ಸಮಾವೇಶದ ಅಧ್ಯಕ್ಷತೆಯನ್ನು ಹಿರಿಯ ಮುಖಂಡರಾದ ಕಾಂ.ಜೋಸ್ ರವರು ವಹಿಸಿದ್ದರು.

●

ಚುನಾವಣಾ ಆಯೋಗದ ನಿಯತ್ತನ್ನು ಕಾಯ್ದುಕೊಳ್ಳಬೇಕಾಗಿದೆ



ಮೋದಿ ಸರಕಾರದ ಐದು ವರ್ಷಗಳ ಆಳ್ವಿಕೆಯಲ್ಲಿ ಹೇಗೆ ಒಂದಾದ ಮೇಲೆ ಒಂದರಂತೆ ಹಲವು ಸಂವಿಧಾನಿಕ ಸಂಸ್ಥೆಗಳ ಮೇಲೆ ಪ್ರಹಾರಗಳು ನಡೆದಿವೆ, ಅಥವ ಅವನ್ನು ಒಳಗಿಂದಲೇ ಕೊರೆದು ಹಾಕಲಾಗಿದೆ ಎಂಬುದನ್ನು ನೋಡಿದ್ದೇವೆ. ಈಗ, ದೇಶದ ಚುನಾವಣಾ ವ್ಯವಸ್ಥೆಯ ನಿಯತ್ತನ್ನು ಕಾಯ್ದುಕೊಂಡ ಹೆಮ್ಮೆಯ ದಾಖಲೆಯ ಚುನಾವಣಾ ಆಯೋಗವೂ ಆ ಸಾಲಿಗೆ ಸೇರುತ್ತಿದೆ. ಅದು ಪ್ರಧಾನ ಮಂತ್ರಿ ನರೆಂದ್ರ ಮೋದಿ ಮತ್ತು ಬಿಜೆಪಿಗೆ ಎದುರಾಗಿ ನಿಲ್ಲಲಾರದು ಎಂಬ ಭಾವನೆ ಬೆಳೆದಿರುವುದು ಅದರ ವಿಶ್ವಾಸಾರ್ಹತೆಯನ್ನೇ ಹಾಳುಗೆಡವಿದೆ. ಆದರೆ ಚುನಾವಣಾ ಆಯೋಗ ಒಂದು ಬಹಳ ಮಹತ್ವದ ಸಂಸ್ಥೆ, ಅದರ ವಿಶ್ವಾಸಾರ್ಹತೆಯನ್ನು ಈ ರೀತಿ ಕುಂದಿಸಿ ಹಾಳುಗೆಡವಲು, ಅದು ಕಾರ್ಯಾಂಗದ ಮರ್ಜಿಗೆ ಒಳಪಡಲು ಬಿಡಲಾಗದು.

'ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯ, ಮೇ 1, 2019

ಚುನಾವಣಾ ಆಯೋಗ ಭಾರತದ ಸಂಸದೀಯ ಜನತಂತ್ರ ವ್ಯವಸ್ಥೆಯಲ್ಲಿ ಒಂದು ಬಹಳ ಮಹತ್ವದ ಪಾತ್ರವನ್ನು ವಹಿಸುತ್ತದೆ. ಇದು ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳನ್ನು ನಡೆಸಲು ಸಂವಿಧಾನದಿಂದ ಅಧಿಕಾರ ಪಡೆದಿರುವ ಸಂಸ್ಥೆಯಾಗಿದೆ. ಸಂವಿಧಾನದ ಕಲಮು 324(1) ಆಯೋಗಕ್ಕೆ "ಸಂಸತ್ತು ಮತ್ತು ಪ್ರತಿ ರಾಜ್ಯದ ಶಾಸನ ಸಭೆಗೆ ಚುನಾವಣಾ ಪಟ್ಟಿಗಳ ಉಸ್ತುವಾರಿ, ನಿರ್ದೇಶನ ಮತ್ತು ಹತೋಟಿ ಮತ್ತು ಎಲ್ಲ ಚುನಾವಣೆಗಳನ್ನು ನಡೆಸುವ" ಅಧಿಕಾರವನ್ನು ಕೊಟ್ಟಿದೆ.

ಆಯೋಗ ಕಳೆದ ಏಳು ದಶಕಗಳಲ್ಲಿ ಈ ಜವಾಬ್ದಾರಿಯನ್ನು ಭಾರತದಲ್ಲಿ ಚುನಾವಣಾ ವ್ಯವಸ್ಥೆಯ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ರೀತಿಯಲ್ಲಿ ನಿಭಾಯಿಸಿದೆ. ಅದು ಸಂಸದೀಯ ಮತ್ತು ರಾಜ್ಯ ಶಾಸನ ಸಭೆಗಳಿಗೆ ಚುನಾವಣೆಗಳನ್ನು ನಡೆಸುವ ಬೃಹತ್ ಸ್ವರೂಪದ ಕಾರ್ಯವನ್ನು ಸಮಯಕ್ಕೆ ಸರಿಯಾಗಿ, ನಿಯಮಿತವಾಗಿ ಮತ್ತು ದಕ್ಷತೆಯಿಂದ ಮಾಡುತ್ತ ಬಂದಿದೆ.

ಮುಕ್ತ ಮತ್ತು ನ್ಯಾಯಯುತ ಚುನವಣೆಗಳನ್ನು ನಡೆಸುವಲ್ಲಿ ಹಲವಾರು ಸಂದರ್ಭಗಳಲ್ಲಿ ನ್ಯೂನತೆಗಳು ಮತ್ತು ಲೋಪಗಳು ಕಂಡು ಬಂದರೂ, ಆಯೋಗ ಒಟ್ಟಾರೆಯಾಗಿ ಒಂದು ಕೀರ್ತಿಶಾಲಿ ದಾಖಲೆಯನ್ನು ಹೊಂದಿದೆ. ಈ ನ್ಯೂನತೆಗಳು ಕೂಡ ಪೂರ್ಣವಾಗಿ ಆಯೋಗದ್ದೇ ಎಂದು ಹೇಳಲಾಗುವುದಿಲ್ಲ. ಏಕೆಂದರೆ ಅದು ಅಪರಿಪೂರ್ಣವಾದ ಒಂದು ಅಧಿಕಾರಶಾಹಿ ವ್ಯವಸ್ಥೆಯನ್ನು ಅವಲಂಬಿಸಬೇಕಾಗುತ್ತದೆ. ಕೆಲವೊಂದು ಸಂದರ್ಭಗಳಲ್ಲಿ ಆಯೋಗ ಆಗಿನ ಸರಕಾರದ ಮತ್ತು ಆಳುವ ಪಕ್ಷದ ಒತ್ತಡಗಳನ್ನೂ ಎದುರಿಸಬೇಕಾಗಿ ಬಂದಿದೆ. ಇಲ್ಲಿ ಕೂಡ, ಕೆಲವು ಅಪವಾದಗಳನ್ನು ಬಿಟ್ಟರೆ, ಆಯೋಗ ಸಂವಿಧಾನಿಕ ಚೌಕಟ್ಟಿನೊಳಗೇ ಕೆಲಸ ಮಾಡಿದೆ.

ಆದ್ದರಿಂದ, ಈ ಆಯೋಗ 17ನೇ ಲೋಕಸಭಾ ಚುನಾವಣೆಗಳನ್ನು ನಡೆಸುತ್ತಿರುವ ರೀತಿಯನ್ನು ಟೀಕಿಸುವ ಹಲವು ಪ್ರಶ್ನೆಗಳನ್ನು ಎತ್ತಲಾಗುತ್ತಿರುವುದು ಒಂದು ಆತಂಕ ಉಂಟು ಮಾಡುವ ಸಂಗತಿ.

ಚುನಾವಣಾ ಆಯೋಗ ಮಾದರಿ ಆಚಾರ ಸಂಹಿತೆಯನ್ನು ಜಾರಿಗೊಳಿಸಬೇಕು, ಆಳುವ ಪಕ್ಷ ಆಡಳಿತ ಯಂತ್ರದ ದುರುಪಯೋಗ ನಡೆಸದಂತೆ ವಿಶೇಷ ಜಾಗರೂಕತೆ ವಹಿಸಬೇಕು, ಎಲ್ಲ ಪಕ್ಷಗಳಿಗೆ ಸಮಾನ ನೆಲೆಯಲ್ಲಿ ಸ್ಪರ್ಧೆಗೆ ಅವಕಾಶ ಇರುವಂತೆ ನೋಡಿಕೊಳ್ಳಬೇಕು ಮತ್ತು ಚುನಾವಣೆಗಳನ್ನು ಕಲುಷಿತಗೊಳಿಸಲು ಹಣಬಲದ ಬಳಕೆ ಮುಂತಾದವನ್ನು ತಡೆಯಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ನಿರೀಕ್ಷಿಸಲಾಗುತ್ತದೆ.

ಈಗ ಮುಖ್ಯ ಚುನಾವಣಾ ಆಯುಕ್ತ ಸುನಿಲ್ ಅರೋರಾವರ ನೇತೃತ್ವದ ಮೂವರು ಸದಸ್ಯರಿರುವ ಚುನಾವಣಾ ಆಯೋಗ ಮೇಲೆ ಹೇಳಿದ ಕರ್ತವ್ಯಗಳಲ್ಲಿ ಕೆಲವನ್ನು ಪೂರೈಸುವಲ್ಲಿ ಹಿಂದೆ ಬಿದ್ದಿರುವುದು ಕಂಡು ಬಂದಿದೆ. ಹೆಚ್ಚಾಗಿ ಕೇಳಬಂದಿರುವ ದೂರು, ಮಾದರಿ ಆಚಾರ ಸಂಹಿತೆಯ ಜಾರಿ ಕುರಿತಾದ್ದು, ನಿರ್ದಿಷ್ಟವಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರನ್ನು ಕುರಿತಂತೆ. ನರೇಂದ್ರ ಮೋದಿ ಮತ್ತೆ–ಮತ್ತೆ ಆಚಾರ ಸಂಹಿತೆಯನ್ನು ಉಲ್ಲಂಘಿಸುವ ಚುನಾವಣಾ ಪ್ರಚಾರ ಭಾಷಣಗಳನ್ನು ಮಾಡುತ್ತಿದ್ದಾರೆ. ಒಂದು ಭಾಷಣದಲ್ಲಿ ಅವರು ಕಾಂಗ್ರೆಸ್ ಪಕ್ಷ ಹಿಂದೂಗಳನ್ನು ಅವಮಾನ ಮಾಡುತ್ತಿದೆ, ಅದಕ್ಕಾಗಿ ಅವರು ಚುನಾವಣೆಗಳಲ್ಲಿ ಅದನ್ನು ಶಿಕ್ಷಿಸುತ್ತಾರೆ ಎಂದಿದ್ದಾರೆ. ಮತ್ತೆ–ಮತ್ತೆ ಬಾಲಕೋಟ್‌ನಲ್ಲಿ ವಾಯುದಾಳಿ ಮತ್ತು ಪುಲ್ವಾಮ ಹುತಾತ್ಮರ ಹೆಸರಿನಲ್ಲಿ ಅವರು ಮತಗಳನ್ನು ಕೇಳಿದ್ದಾರೆ. ಸಶಸ್ತ್ರ ಪಡೆಗಳ ಕಾರ್ಯಾಚರಣೆಗಳನ್ನು ತನ್ನ ಸಾಧನೆಯೆಂಬಂತೆ ಪ್ರಸ್ತಾಪಿಸುವುದು ಅವರ ಭಾಷಣಗಳ ಸ್ಥಾಯೀ ರಾಗಾಲಾಪನೆಯೇ ಆಗಿ ಬಿಟ್ಟಿದೆ.

ಎಪ್ರಿಲ್ 2 ರಿಂದ ಚುನಾವಣಾ ಆಯೋಗಕ್ಕೆ ಮಾದರಿ ಆಚಾರ ಸಂಹಿತೆಯ ಉಲ್ಲಂಘನೆಗಳ ಬಗ್ಗೆ ಹಲವಾರು ದೂರುಗಳು ಹೋದರೂ, ಅದು ಈ ದೂರುಗಳನ್ನು ಗಮನಕ್ಕೆ ತಗೊಂಡಿಲ್ಲ ಮತ್ತು ಅವುಗಳ ಮೇಲೆ ಕ್ರಮ ಕೈಗೊಂಡಿಲ್ಲ.

ಎಪ್ರಿಲ್ 15ರಂದು ಸುಪ್ರಿಂ ಕೋರ್ಟ್ ದ್ವೇಷ ಪ್ರಚಾರ ಮತ್ತು ಭಾಷಣಗಳ ಬಗ್ಗೆ ಚುನಾವಣಾ ಆಯೋಗ ಏನು ಮಾಡುತ್ತಿದೆ ಎಂದು ಕೇಳಿದಾಗ, ಅದು ಆದಿತ್ಯನಾಥ, ಮಾಯಾವತಿ, ಆಝುಮ್ ಖಾನ್ ಮತ್ತು ಮನೇಕಾ ಗಾಂಧಿಯವರು ಎರಡರಿಂದ ಮೂರು ದಿನಗಳ ವರೆಗೆ ಪ್ರಚಾರ ನಡೆಸದಂತೆ ನಿಷೇಧಿಸುವ ಕ್ರಮ ಕೈಗೊಂಡಿತು. ಆದರೆ ನರೇಂದ್ರ ಮೋದಿಯ ವಿರುದ್ಧ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಅದೇ ಸಭೆಯಲ್ಲಿ ಮಾತಾಡಿದ್ದ ಗುಜರಾತ್ ಬಿಜೆಪಿ ಅಧ್ಯಕ್ಷ ವಘಾನಿಯವರ ಸಂಯಮಹೀನ ಭಾಷಣಕ್ಕಾಗಿ ಅವರು ಮೂರು ದಿನಗಳ ಕಾಲ ಪ್ರಚಾರ ಮಾಡದಂತೆ ನಿಷೇಧಿಸಲು ಆಯೋಗ ನಿರ್ಧರಿಸಿತು. ಒಂದೇ ಸಮಸ್ಯೆ ಎಂದರೆ ಈ ಕ್ರಮವನ್ನು ಗುಜರಾತಿನಲ್ಲಿ ಎಪ್ರಿಲ್ 23ರಂದು ಮತದಾನ ಮುಗಿದ ನಂತರ ಪ್ರಕಟಿಸಲಾಯಿತು.

ಮೋದಿಯಿಂದ ಮಾದರಿ ಆಚಾರ ಸಂಹಿತೆಯ ಉಲ್ಲಂಘನೆಗಳ ಬಗ್ಗೆ ಆಯೋಗದ ನಿಷ್ಕ್ರಿಯತೆಯ ಮೇಲೆ ಒಬ್ಬ ಕಾಂಗ್ರೆಸ್ ಸಂಸತ್ ಸದಸ್ಯರು ಸುಪ್ರಿಂ ಕೋರ್ಟಿನಲ್ಲಿ ಅರ್ಜಿ ಸಲ್ಲಿಸದ ಮೇಲೆಯೇ ಮೊದಲ ಬಾರಿಗೆ ಎಪ್ರಿಲ್ 30ರಂದು ಈ ಕುರಿತು ಆಯೋಗ ಸಭೆ ನಡೆಸಿತು ಮತ್ತು ಮೋದಿಯ ವಾರ್ಧಾ ಭಾಷಣದ ಮೇಲಿನ ದೂರನ್ನು ನಿಪಟಾಯಿಸಿತು. ಆ ಭಾಷಣ ಮಾದರಿ ಆಚಾರ ಸಂಹಿತೆ ಆಥವ ಜನತಾ ಪ್ರಾತಿನಿಧ್ಯ ಕಾಯ್ದೆಯ ಉಲ್ಲಂಘನೆಯಲ್ಲ ಎಂದು ಅದಕ್ಕೆ ಕಂಡು ಬಂತು.

ಸಶಸ್ತ್ರ ಪಡೆಗಳ ಪಾತ್ರವನ್ನು ಚುನಾವಣಾ ಪ್ರಚಾರದಲ್ಲಿ ತರಬಾರದು ಎಂದು ಆಯೋಗ ನಿರ್ದಿಷ್ಟ ನಿರ್ದೇಶನವನ್ನು ನೀಡಿದ್ದರೂ ನರೇಂದ್ರ ಮೋದಿ ಪ್ರಚಾರದಲ್ಲಿ ಸಶಸ್ತ್ರ ಪಡೆಗಳ ದುರುಪಯೋಗ ಮಾಡುತ್ತಿರುವ ಕುರಿತ ದೂರುಗಳನ್ನು ಕೈಗೆತ್ತಿಕೊಳ್ಳಲು ಆಯೋಗ ಸತತವಾಗಿ ನಿರಾಕರಿಸಿದೆ. ಎಪ್ರಿಲ್ 9ರಂದು ಲಾತೂರ್‌ನಲ್ಲಿ ಮೋದಿ ತನ್ನ ಭಾಷಣದಲ್ಲಿ ಆ ಬಗ್ಗೆ ಪ್ರಸ್ತಾಪಿಸಿದ ನಂತರ ನಾಲ್ಕು ಘಟ್ಟಗಳ ಮತದಾನ ಮುಗಿದಿದೆ, ಮತ್ತು ಚುನಾವಣಾ ಆಯೋಗ ತನ್ನ ನಿಷ್ಕ್ರಿಯತೆಯ ಮೂಲಕ ಮೋದಿಗೆ ಮುಕ್ತ ಅವಕಾಶ ನೀಡಿದೆ. ಅಂತಿಮವಾಗಿ ಮೇ 1 ರಂದು, ಈ ದೂರನ್ನು ಕೈಗೆತ್ತಿಕೊಂಡು, ಮೋದಿ ತನ್ನ ಪಕ್ಷಕ್ಕೆ ಮತ್ತು ತನಗೆ ನೇರವಾಗಿ ಮತ ಕೇಳಿಲ್ಲವಾದ್ದರಿಂದ ಯಾವುದೇ ಸಂಹಿತೆಯ ಉಲ್ಲಂಘನೆ ಮಾಡಿಲ್ಲ ಎಂದು ತೀರ್ಪು ನೀಡಿತು. ಇದು ಅಮಿತ್ ಷಾರಂತವರಿಗೆ ಮೋದಿಯಿಂದ ಸಶಸ್ತ್ರ ಪಡೆಗಳ ಬಳಕೆಯನ್ನು ನಾಚಿಕೆಯಿಲ್ಲದೆ ಹಾಡಿ ಹೊಗಳಲು ಹುರಿದುಂಬಿಸುತ್ತದೆ.

ಚುನಾವಣಾ ಆಯೋಗ ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ಆಳುವ ಪಕ್ಷವಾಗಿ ಬಿಜೆಪಿಯ ಕುಕೃತ್ಯಗಳ ವಿರುದ್ಧ ಒಂದು ದೃಢ ನಿಲುವನ್ನು ತಳೆಯಲು ಹಿಂದೇಟು ಹಾಕುತ್ತಿರುವುದು ಕಂಡು ಬರುತ್ತಿದೆ. ತ್ರಿಪುರಾದಲ್ಲಿ ಎಪ್ರಿಲ್ 11ರಂದು ತ್ರಿಪುರಾ **ಪುಟ 11 ಕ್ಕೆ**

ಮಾದರಿ ಆಚಾರ ಸಂಹಿತೆಯ ಅನುಷ್ಠಾನ – ನರೇಂದ್ರ ಮೋದಿಯವರಿಗೆ ಭಿನ್ನವಾಗಿದೆಯೇ? –ಮುಖ್ಯ ಚುನಾವಣಾ ಆಯುಕ್ತರಿಗೆ ಸೀತಾರಾಮ್ ಯೆಚುರಿ ಪತ್ರ

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಮತ್ತೆ–ಮತ್ತೆ ಮಾದರಿ ಆಚಾರ ಸಂಹಿತೆಯ ಉಲ್ಲಂಘನೆಗಳನ್ನು ಮಾಡುತ್ತಿದ್ದು, ಆ ಬಗ್ಗೆ ಬಹಳಷ್ಟು ದೂರುಗಳು ಭಾರತದ ಚುನಾವಣಾ ಆಯೋಗಕ್ಕೆ ಹೋಗಿದ್ದರೂ ಆಯೋಗ ಅವನ್ನು ಪರಿಶೀಲಿಸುತ್ತಿರುವ ರೀತಿಯ ಬಗ್ಗೆ ಆತಂಕ ಹೆಚ್ಚುತ್ತಿದೆ. ಈಗ ಅಧಿಕೃತವಾಗಿ ಆಡಳಿತ ಯಂತ್ರದ ದುರುಪಯೋಗ ನಡೆದಿದೆ ಎಂದೂ ವರದಿಯಾಗಿದೆ. ಈ ಬಗ್ಗೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಮೇ 1ರಂದು ಭಾರತದ ಮುಖ್ಯ ಚುನಾವಣಾ ಆಯುಕ್ತರಿಗೆ ಇನ್ನೊಂದು ಪತ್ರ ಬರೆದಿದ್ದಾರೆ.

"ಉತ್ತರಪ್ರದೇಶದ ವಾರಣಾಸಿ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿ ಮತ್ತು ಬಿಜೆಪಿಯ ಒಬ್ಬ ಸ್ಟಾರ್ ಪ್ರಚಾರಕರಾಗಿರುವ ಶ್ರೀ ನರೇಂದ್ರ ಮೋದಿಯವರನ್ನು ಮಾದರಿ ಆಚಾರ ಸಂಹಿತೆಯ ಅನುಷ್ಠಾನದಲ್ಲಿ, ಅವರು ಪ್ರಸ್ತುತ ಪ್ರಧಾನ ಮಂತ್ರಿಯಾಗಿದ್ದಾರೆ ಎಂಬ ಸರಳ ಕಾರಣಕ್ಕೆ, ಅವರೊಡನೆ ಭಿನ್ನವಾಗಿ ವರ್ತಿಸುವ ಅಗತ್ಯ ಇದೆಯೇ?" ಎಂಬ ಪ್ರಶ್ನೆಯನ್ನು ಯೆಚುರಿಯವರು ತಮ್ಮ ಪತ್ರದಲ್ಲಿ ದೇಶದ ಮುಖ್ಯ ಚುನಾವಣಾ ಆಯುಕ್ತರ ಮುಂದಿಟ್ಟಿದ್ದಾರೆ.

ಅಚಾರ ಸಂಹಿತೆಯ ಉಲ್ಲಂಘನೆಗಳ ವಿಷಯದಲ್ಲಿ ಆಯೋಗ ತಡೆ–ತಡೆದು ಮಾತ್ರವಲ್ಲ, ಇಂತಹ ಕೃತ್ಯಗಳನ್ನು ಎಸಗುವವರಿಗೆ ಧೈರ್ಯ ತುಂಬುವ ಗತಿಯಲ್ಲಿ ಸಾಗುತ್ತಿರುವಂತೆ ಕಾಣುತ್ತಿದೆ. ಮತ್ತು 'ವಿಳಂಬಗೊಂಡ ನ್ಯಾಯ' ವಾಸ್ತವವಾಗಿ ಅದರ 'ನಿರಾಕರಣೆ'ಯೇ ಆಗುತ್ತದೆ ಎಂಬ ಮಾತಿಗೆ ಉದಾಹರಣೆಯಾಗಿ ಕಾಣುತ್ತಿದೆ ಎಂದು ಯೆಚುರಿಯವರು ತಮ್ಮ ಪತ್ರದಲ್ಲಿ ಟಿಪ್ಪಣಿ ಮಾಡಿದ್ದಾರೆ. ಅವರ ಪತ್ರದ ಪೂರ್ಣ ಪಾಟವನ್ನು ಇಲ್ಲಿ ಕೊಡಲಾಗಿದೆ:

ಪ್ರಿಯ ಶ್ರೀ ಅರೋರಾ ಜೀ,

ದೇಶದೆಲ್ಲೆಡೆಗಳಲ್ಲಿ, ಭಾರತದ ಚುನಾವಣಾ ಆಯೋಗ ಶ್ರೀ ನರೇಂದ್ರ ಮೋದಿಯವರಿಂದ ಮಾದರಿ ಆಚಾರ ಸಂಹಿತೆಯ ಸ್ಪಷ್ಟ ಉಲ್ಲಂಘನೆಗಳನ್ನು ಕುರಿತಾದ ದೂರುಗಳನ್ನು ನಿರ್ವಹಿಸುತ್ತಿರುವ ರೀತಿಯ ಬಗ್ಗೆ ಆತಂಕ ಹೆಚ್ಚುತ್ತಿದೆ.

ಈಗ ಒಂದು ವೆಬ್ ಪತ್ರಿಕೆ ಪ್ರಧಾನ ಮಂತ್ರಿಗಳ ಕಚೇರಿ ಅವರ ಚುನಾವಣಾ ಭಾಷಣಗಳಿಗೆ ವಿಷಯಗಳನ್ನು ಒದಗಿಸಲು ವಿವಿಧ ಮಂತ್ರಾಲಯಗಳಿಂದ ಮತ್ತು ಸಂಬಂಧಪಟ್ಟ ರಾಜ್ಯ ಮತ್ತು ಜಿಲ್ಲಾ ಆಡಳಿತಗಳಿಂದ ಮಾಹಿತಿಗಳನ್ನು ಪಡೆಯಲು ಸರಕಾರದ ಮೂಲರಚನೆ ಮತ್ತು ಆಡಳಿತ ಯಂತ್ರವನ್ನು ಯಾವ ರೀತಿಯಲ್ಲಿ ಭಂಡತನದಿಂದ ಬಳಸಲಾಗುತ್ತಿದೆ ಎಂಬುದನ್ನು ತೋರಿಸುವ ಒಂದು ಲೇಖನವನ್ನು ಪ್ರಕಟಿಸಿದೆ. ಈ ಲೇಖನ ಈ ಬಗ್ಗೆ ದಸ್ತಾವೇಜುಗಳ ಪುರಾವೆಯನ್ನೂ ಒದಗಿಸುತ್ತದೆ(ಅನುಬಂಧ–1, ವೆಬ್ ಲಿಂಕ್: *: https://scroll.in/article/919512/model-code-collectors-being-asked-to*-ಜ...).

ಇನ್ನೊಂದು ವೆಬ್ ಪತ್ರಿಕೆ ಶ್ರೀಮತಿ ಇಂದಿರಾ ಗಾಂಧಿಯವರನ್ನು ಕೊನೆಗೂ ಅನರ್ಹಗೊಳಿಸಲು ಕಾರಣವಾದ ಆಧಾರಗಳನ್ನು ಒದಗಿಸುವ ಒಂದು ಲೇಖನವನ್ನು ಪ್ರಕಟಿಸಿದೆ. ಶ್ರೀಮತಿ ಗಾಂಧಿಯವರು ಮಾಡಿದರೆನ್ನಲಾದ ಉಲ್ಲಂಘನೆಗಳು ಶ್ರೀ ನರೇಂದ್ರ ಮೋದಿಯವರು ಮಾಡಿರುವ ಪ್ರಸಕ್ತ ಉಲ್ಲಂಘನೆಗಳಿಗೆ ಹೋಲಿಸಿದರೆ ಬಹಳ ಕಡಿಮೆ ಮಹತ್ವದ್ದಾಗಿ ಕಾಣುತ್ತವೆ (ಅನುಬಂಧ–2' ಲಿಂಕ್: : *https://thewire.in/politics/elections-2019-narendra-modi-indira-gandhi-mcc*).

ನಾವು ಈ ಹಿಂದೆ ನಿಮ್ಮ ಮುಂದಿಟ್ಟಿರುವ ಪ್ರಶ್ನೆಯನ್ನೇ ಮುಂದಿಡಬಯಸುತ್ತೇವೆ. ಮಾದರಿ ಆಚಾರ ಸಂಹಿತೆಯ ಉಲ್ಲಂಘನೆಗಳ ವಿಷಯದಲ್ಲಿ, ಭಾರತದ ಚುನಾವಣಾ ಆಯೋಗ ತಡೆ–ತಡೆದು ಮಾತ್ರವಲ್ಲ, ಇಂತಹ ಕೃತ್ಯಗಳನ್ನು ಎಸಗುವವರಿಗೆ ಧೈರ್ಯ ತುಂಬುವ ಗತಿಯಲ್ಲಿ ಸಾಗುತ್ತಿರುವಂತೆ **ಪುಟ 11 ಕ್ಕೆ**



ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ



ಪ್ರೊ. ಟಿ. ಆರ್. ಚಂದ್ರಶೇಖರ

ಈಗ ಚುನಾವಣೆ ಮುಗಿದಿದೆ. ನೀತಿ ಸಂಹಿತೆ ಜಾರಿಯಲ್ಲಿರಬಹುದು. ಏನೇ ಆಗಿಲಿ ಮುಖ್ಯಮಂತ್ರಿ ಈಗ ಆಡಳಿತ ಮತ್ತು ಅಭಿವೃದ್ಧಿಯತ್ತ ಗಮನ ನೀಡಬೇಕು. ಬೆಂಗಳೂರು ಮತ್ತು ಹಾಸನ–ಮಂಡ್ಯ ಜಿಲ್ಲೆಗಳು ಮಾತ್ರ ಕರ್ನಾಟಕವಲ್ಲ. ತೋರಿಕೆಯ ಗ್ರಾಮೀಣ ವಾಸ್ತವ್ಯ, ಹುಬ್ಬಳ್ಳಿಯಲ್ಲಿ ಮನೆ ಮಾಡಿದೆ ಮುಂತಾದವು ಕೇವಲ ಗಿಮ್ಮಿಕ್ ಎಂಬುದು ನಮಗೆ ಅರ್ಥವಾಗುತ್ತದೆ. ಬಡವರ, ಹಸಿವನ್ನು ಎದುರಿಸುತ್ತಿರುವವರ, ಜನರ ಬವಣೆಯ ಕಡೆ ಗಮನ ನೀಡುವುದು ಅಗತ್ಯ. ಜನರು ಅಂದರೆ ಒಕ್ಕಲಿಗರು, ಲಿಂಗಾಯತರು, ಬ್ರಾಹ್ಮಣರಲ್ಲ. ಅಭಿವೃದ್ಧಿಯ ದೃಷ್ಟಿಯಿಂದ ಜನರು ಅಂದರೆ ದಿನಗೂಲಿ ದುಡಿಮೆಗಾರರು, ದಲಿತರು, ಸಮಾಜದ ಅಂಚಿನಲ್ಲಿ ಬದುಕು ದೂಡುತ್ತಿರುವವರು, ಅಭಿವೃದ್ಧಿಯ ಫಲಗಳಿಂದ ವಂಚಿತರು. ಅವರಿಗೆ ಅಭಿವೃದ್ಧಿ ಅಭಿಮುಖಿಯಾಗಿರಬೇಕು. ಈ ಸಂಗತಿಗಳ ಕಡೆ ಗಮನ ನೀಡುವ ಸಮಯವೀಗ ಬಂದಿದೆ. ಏಳಿ, ಎದ್ದೇಳಿ, ಕರ್ನಾಟಕದ 30 ಜಿಲ್ಲೆಗಳು, 176 ತಾಲ್ಲೂಕುಗಳು ಮತ್ತು ಆರೂವರೆ ಕೋಟಿ ಜನರಿಗೆ ತಾವು ಮುಖ್ಯಮಂತ್ರಿ. ಅದರಂತೆ ಆಡಳಿತ ನಡೆಸಿ. ಅಭಿವೃದ್ಧಿಯ ಹರಿಕಾರರಾಗಿ.

ಕರ್ನಾಟಕದಲ್ಲಿ ಚುನಾವಣಾ ಸಂದೇಶವೇನು?

ಕರ್ನಾಟಕದಲ್ಲಿ ಲೋಕಸಭೆಗೆ ನಡೆದ ಚುನಾವಣೆ ಮುಗಿದಿದೆ. ರಾಜ್ಯದಲ್ಲಿನ ರಾಜಕೀಯ ಪಕ್ಷಗಳ ಮುಖಂಡರಿಗೆ ಮತ್ತು ಚುನಾವಣಾ ಹುರಿಯಾಳುಗಳಿಗೆ ಈಗ ವಿರಾಮದ ಸಮಯ. ಅತ್ಯಂತ ಜಿದ್ದಾಜಿದ್ದಿನ ಚುನಾವಣೆಯ ಫಲಿತಾಂಶಕ್ಕೆ ಮೇ 23 ರವರೆಗೆ ಕಾಯಬೇಕಾಗಿದೆ. ಈ ಚುನಾವಣೆಯಲ್ಲಿ ನಮ್ಮ ಶಬ್ದ ಭಂಡಾರದ ಕೊಳಕು ಪದಗಳನ್ನೆಲ್ಲ ರಾಜಕೀಯ ಪಕ್ಷಗಳು ಬಳಸಿಬಿಟ್ಟವು. ಯಾವ ಲಂಗೂ ಲಗಾಮಿಲ್ಲದ ರೀತಿಯಲ್ಲಿ ನಿಂದನೆಯ ಪದಗಳನ್ನು ಬಳಸಲಾಯಿತು. ನನ್ನ ಮುಂದಿರುವ ಪ್ರಶ್ನೆ ಎಂದರೆ ಪ್ರಸಕ್ತ ಚುನಾವಣೆಯ ಎದುರಿಗಿದ್ದ ಪ್ರಶ್ನೆಗಳಾವುವು? ದುರಂತವೆಂದರೆ ಅಭಿವೃದ್ಧಿಯ ಪ್ರಶ್ನೆಗಳನ್ನು ಜನರೂ ಎತ್ತಲಿಲ್ಲ, ರಾಜಕೀಯ ಪಕ್ಷಗಳು ಕೇಳಲಿಲ್ಲ ಮತ್ತು ಚುನಾವಣೆಗೆ ಸ್ಪರ್ಧಿಸಿದ್ದ ಅಭ್ಯರ್ಥಿಗಳೂ ಅವುಗಳ ಬಗ್ಗೆ ಮಾತನಾಡಲಿಲ್ಲ. ಕಾಂಗ್ರೆಸ್ಸನ್ನು ಬಯ್ಯುವುದನ್ನೇ ಉದ್ಯೋಗ ಮಾಡಿಕೊಂಡಿರುವ ಬಿ ಜೆ ಪಿ ಯು ಕಳೆದ ಐದು ವರ್ಷಗಳ ತನ್ನ ಸಾಧನೆಗಳ ಬಗ್ಗೆ ಮಾತನಾಡಲಿಲ್ಲ (ಸಾಧನೆಗಳೇ ಇಲ್ಲದಿದಾಗ ಅದರ ಬಗ್ಗೆ ಏನು ಮಾತನಾಡುತ್ತಾರೆ ಎಂದು ಅದರ ಟೀಕಾಕಾರರು ಅಣಕವಾಡಬಹುದು!). ಕಾಂಗ್ರೆಸ್ಸೇನೋ ಅಭಿವೃದ್ಧಿಯ ಬಗ್ಗೆ, ಜನರು ಎದುರಿಸುತ್ತಿರುವ ಆರ್ಥಿಕ ಸಮಸ್ಯೆಗಳ ಬಗ್ಗೆ ಮಾತನಾಡುತ್ತಿದೆ. ಆದರೆ ತಾನು ತನ್ನ ಹಿಂದಿನ ತಪ್ಪುಗಳಿಂದ ಪಾಠ ಕಲಿತಿರುವುದರ ಬಗ್ಗೆ ಚಕಾರವೆತ್ತಲಿಲ್ಲ. ಇದರ 2014ರ ಲೋಕಸಭಾ ಚುನಾವಣೆಯಲ್ಲಿನ ಸೋಲಿಗೆ ತನ್ನ ಮಂತ್ರಿಮಂಡಲದಲ್ಲಿದ್ದ ಭ್ರಷ್ಟರು ಕಾರಣ ಎಂಬುದನ್ನು ಅದು ಇನ್ನೂ ಒಪ್ಪಿಕೊಂಡಂತೆ ಕಾಣುತ್ತಿಲ್ಲ. ತಪ್ಪುಗಳನ್ನು ಒಪ್ಪಿಕೊಳ್ಳುವುದು ಧೈರ್ಯವಂತರ ಗುಣ. ಇದು ಎರಡೂ ಪ್ರಮುಖ ರಾಷ್ಟ್ರೀಯ ಪಕ್ಷಗಳಿಗೆ ಇದ್ದಂತೆ ಕಾಣುತ್ತಿಲ್ಲ. ಗಾಂಧೀಜಿಯನ್ನು ಒಂದು ಪಕ್ಷ ಮರೆತು ಬಿಟ್ಟಿದೆ ಮತ್ತು ಗಾಂಧೀಜಿ ಪರಂಪರೆಯನ್ನು ಅಳಿಸಿ ಹಾಕಲು ಅದು ಪ್ರಯತ್ನಸುತ್ತಿದೆ. ಮತ್ತೊಂದಕ್ಕೆ ಗಾಂಧೀಜಿ ಕೇವಲ ಒಂದು ಸಂಕೇತವಾಗಿದ್ದಾರೆ.

ಅತ್ಯಂತ ಆಶ್ಚರ್ಯದ ಸಂಗತಿಯೆಂದರೆ ದೇಶ ಹಿಂದೆಂದೂ ಕಂಡುಕಾಣದ ರೈತಾಪಿ ಸಮಸ್ಯೆಗಳು ರೈತರ ಬದುಕನ್ನು ಸ್ಮಶಾನಸದೃಶ ಮಾಡುತ್ತಿದ್ದರೂ ಚುನಾವಣೆಯಲ್ಲಿ ಅದಕ್ಕೆ ಪರಿಹಾರ ಹುಡುಕುವುದಿರಲಿ, ಅದರ ಬಗ್ಗೆ ಆಳುವ ಪಕ್ಷವು ಚರ್ಚೆಯನ್ನೂ ಮಾಡಲಿಲ್ಲ. ದೇಶಾದಾದ್ಯಂತ ರೈತರು ಎಷ್ಟೊಂದು ಜಾಥಗಳನ್ನು ನಡೆಸಿದರೂ ಅವರ ಕಷ್ಟಕಾರ್ಪಣ್ಯಗಳು ಸರ್ಕಾರದ ಕಣ್ಣಿಗೆ ಬೀಳಲಿಲ್ಲ. ಹತ್ತಾರು ರೈತರನ್ನು ಆಳುವ ಪಕ್ಷವು ಬಲಿ ತೆಗೆದುಕೊಂಡಿತು. ತಮಿಳುನಾಡು, ಮಧ್ಯಪ್ರದೇಶ, ಮಹಾರಾಷ್ಟ್ರ ಹೀಗೆ ಸಾಲು ಸಾಲು ರಾಜ್ಯಗಳಲ್ಲಿನ ರೈತರು ತಮ್ಮ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯಲು ಏನೆಲ್ಲ ಪ್ರಯತ್ನಪಟ್ಟರು ಎಂಬುದು ಇಂದು ಇತಿಹಾಸವಾಗಿದೆ. ಅದರ ಕಿಂಚಿತ್ತೂ ಸಂಗತಿಗಳು ಚುನಾವಣೆಯಲ್ಲಿ ಅಭಿವ್ಯಕ್ತಿಗೊಳ್ಳಲಿಲ್ಲ. ಅದು ಯಾವ ಯಾವ ಸಿನಿಮಾ ನಟನಟಿಯರನ್ನು ನಿಲ್ಲಿಸಿದರೆ ಚುನಾವಣೆಯಲ್ಲಿ ಗೆಲ್ಲಬಹುದು ಎಂಬ ಲೆಕ್ಕಾಚಾರದಲ್ಲಿದೆ ವಿನಾ ಸಮಾಜದ ವಿವಿಧ ವರ್ಗಗಳಿಗೆ ಪ್ರಾತಿನಿಧ್ಯವನ್ನು ನೀಡುವುದರ ಕಡೆ ಗಮನ ನೀಡಲಿಲ್ಲ. ಸನ್ನಿ ಡಿಯೋಲ್, ಹೇಮಮಾಲಿನಿ, ಜಯಪ್ರದ ಮುಂತಾದವರ ರಾಜಕೀಯ ಬದ್ಧತೆಯೇನು, ಜನರ ನಡುವೆ ಕೆಲಸ ಮಾಡಿದ ಅನುಭವವೇನು ಎಂಬುದು ಯಾವುದೂ ಇಲ್ಲಿ ಮುಖ್ಯವಾಗಲಿಲ್ಲ. ಎಲ್. ಕೆ. ಅದ್ವಾನಿ, ಮುರಳಿ ಮನೋಹರ ಜೋಷಿ ಮುಂತಾದ ಹಿರಿಯರಿಗಿಂತಲೂ ಸನ್ನಿ ಡಿಯೋಲ್, ಜಯಪ್ರದ ಮುಖ್ಯರಾದದ್ದು ನೈತಿಕತೆಯನ್ನು ಗಾಳಿಗೆ ತೂರಿಬಿಟ್ಟಿರುವ ಆಳುವ ಪಕ್ಷ ಯಾವ ಮಟ್ಟಕ್ಕೂ ಇಳಿಯುವುದಕ್ಕೆ ಸಿದ್ಧವಿದೆ ಎಂಬುದನ್ನು ಸ್ಪಷ್ಟಪಡಿಸಿದೆ. ಆಳುವ ಪಕ್ಷವು ಸ್ವಚ್ಛ ಭಾರತದ ಬಗ್ಗೆ ಅಬ್ಬರಿಸಿದ್ದೂ ಅಬ್ಬರಿಸಿದ್ದೇ. ಒಬ್ಬ ಸಫಾಯಿ ಕರ್ಮಚಾರಿಯನ್ನು ತನ್ನ ಪ್ರತಿನಿಧಿಯಾಗಿ ಚುನಾವಣೆಗೆ ನಿಲ್ಲಿಸುವ ಪ್ರೌಢಿಮೆಯನ್ನು ಅದು ಮರೆಯಲಿಲ್ಲ. ಅದು ಹೇಳುವ ನೀತಿಗಳಿಗೂ ಅದು ಚುನಾವಣೆಯಲ್ಲಿ ನಡೆದುಕೊಂಡ ರೀತಿಗೂ ನಡುವೆ ಅಜಗಜಾಂತರ ಕಂದರವಿರುವುದನ್ನು ಗುರುತಿಸುವುದು ನಮಗೆ ಕಷ್ಟವಾಗಬಾರದು.

ಚುನಾವಣೆಯಲ್ಲಿ ಗೆಲ್ಲುವುದಕ್ಕಾಗಿ ಏನು ಮಾಡಿದರೂ ಅದು ಮಾಫಿ ಎನ್ನುವಂತೆ ಆಳುವ ಪಕ್ಷವು ನಡೆದುಕೊಳ್ಳುತ್ತಿದೆ. ರಕ್ಷಣಾ ಪಡೆಗಳನ್ನು ಪಕ್ಷವೊಂದರ ಪ್ರಚಾರದ ಸರಕಾಗಿ ಬಳಸಿಕೊಳ್ಳಲು ಅದು ಹಿಂಜರಿಯುತ್ತಿಲ್ಲ. ಭಯೋತ್ಪಾದನೆ ಆರೋಪ ಎದುರಿಸುತ್ತಿರುವವರನ್ನು ತನ್ನ ಅಭ್ಯರ್ಥಿಗಳನ್ನಾಗಿ ಚುನಾವಣೆಗೆ ನಿಲ್ಲಿಸಲು ಅದು ಹಿಂದೆ ಮುಂದೆ ನೋಡುತ್ತಿಲ್ಲ. ಪರಮಾಣು ಬಾಂಬುಗಳನ್ನು ದೀಪಾವಳಿ ಪಟಾಕಿಗಳಿಗೆ ಹೋಲಿಸುತ್ತಾರೆ ಎಂದರೆ ಆಳುವ ಪಕ್ಷದ ನೈತಿಕ ಮಟ್ಟ ಯಾವ ಪಾತಾಳ ತಲುಪಿದೆ ಎಂಬುದನ್ನು ನಾವು ಊಹಿಸಿಕೊಳ್ಳಬಹುದು. ಸುಪ್ರೀಮ್ ಕೋರ್ಟಿನ ತೀರ್ಪಿಗೂ ಅದು ಗೌರವ ಸಲ್ಲಿಸುತ್ತಿಲ್ಲ. ಬಹಿರಂಗವಾಗಿಯೇ ಅದು ಅಯ್ಯಪ್ಪ ದೇವಾಲಯದೊಳಗೆ ಮಹಿಳೆಯರ ಪ್ರವೇಶದ ಮೇಲಿದ್ದ ನಿಷೇಧವನ್ನು ರದ್ದುಪಡಿಸಿದ ಸರ್ವೋಚ್ಛ ನ್ಯಾಯಾಲಯದ ತೀರ್ಪನ್ನು ಆಳುವ ಪಕ್ಷ ಧಿಕ್ಕರಿಸುತ್ತಿದೆ. 'ತ್ರಿಪಲ್ ತಲಾಕ್'ನ ನಿಷೇಧವು ಲಿಂಗ ಸಮಾನತೆಯ ಸಂಗತಿಯಾದರೆ ಶಬರಿಮಲೆ ಅಯ್ಯಪ್ಪ ದೇವಾಲಯಕ್ಕೆ ಮಹಿಳೆಯರ ಪ್ರವೇಶದ ನಿಷೇಧವು ಪರಂಪರೆಯ ಪ್ರಶ್ನೆ' ಎಂಬ ಆಳುವ ಪಕ್ಷದ ನಿಲುವು ಅದರ ನೈತಿಕತೆಯ ಅಧಃಪತನ ತಲುಪಿರುವುದನ್ನು ಸೂಚಿಸುತ್ತದೆ.

ಈ ಸರ್ಕಾರದ ಕಳೆದ ಐದು ವರ್ಷಗಳ ಸಾಧನೆಯೆಂದರೆ ಸಾಂವಿಧಾನಿಕ ಸಂಸ್ಥೆಗಳ ಸ್ವಾಯತ್ತೆಯನ್ನು ನಾಶಪಡಿಸಿದ್ದು. ಸರ್ವೋಚ್ಛ ನ್ಯಾಯಾಲಯದ ಹಿರಿಯ ನಾಲ್ಕು ನ್ಯಾಯಾಧೀಶರು ಸಾರ್ವಜನಿಕವಾಗಿ ನ್ಯಾಯಾಲಯಗಳು ಸ್ವತಂತ್ರವಾಗಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಇದು ನಮ್ಮ ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ ಎಂದು ಹೇಳಬೇಕಾಗಿ ಬಂದಿದೆ ಎಂದರೆ ದೇಶ ಯಾವ ಗಂಭೀರ ಅನಾಹುತದ ಕಡೆ ಸಾಗುತ್ತಿದೆ ಎಂಬುದನ್ನು ಊಹಿಸಿಕೊಳ್ಳಬಹುದು. ಭಾರತೀಯ ರಿಸರ್ವ ಬ್ಯಾಂಕಿನ ಇಬ್ಬರು ಗೌರ್ವನರುಗಳು ರಾಜೀನಾಮೆ ನೀಡುವ ಸ್ಥಿತಿ ನಿರ್ಮಾಣವಾದುದು ಏನನ್ನು ಸೂಚಿಸುತ್ತದೆ? ಸಿ.ಬಿ.ಐ.ನ ನಿರ್ದೇಶಕರನ್ನು ರಾತ್ರೋರಾತ್ರಿ ಸರ್ಕಾರ ಬದಲಾಯಿಸುತ್ತದೆ ಎಂದರೆ ಸರ್ಕಾರದ ಹಸ್ತಕ್ಷೇಪ ಎಲ್ಲಿಯವರೆಗೆ ಚಾಚಿದೆ ಎಂಬುದು ಖಚಿತವಾಗುತ್ತದೆ. ಚುನಾವಣಾ ಆಯೋಗದ ಕಾರ್ಯನಿರ್ವಹಣೆಯ ಬಗ್ಗೆ ಏನನ್ನೂ ಹೇಳದಿರುವುದೇ ವಾಸಿ!. ಆಳುವ ಪಕ್ಷದ ಅನುಕೂಲಕ್ಕೆ ತಕ್ಕಂತೆ ಚುನಾವಣಾ ದಿನಾಂಕಗಳನ್ನು ಅದು ಘೋಷಿಸುತ್ತದೆ ಎಂದರೆ ಅಲ್ಲಿ ಪಾರದರ್ಶಕತೆ ಎನ್ನುವುದು ಸರ್ಕಾರದ ಪದತಲದಲ್ಲಿ ಬಿದ್ದು ವಿಲವಿಲನೆ ಒದ್ದಾಡುತ್ತಿರುವಂತೆ ಕಾಣುತ್ತದೆ. ಇಡೀ ಆಡಳಿತ ವ್ಯವಸ್ಥೆಯನ್ನು ಮನುವಾದಿಗಳು ಗುತ್ತಿಗೆ ಹಿಡಿದುಕೊಂಡಂತೆ ಕಾಣುತ್ತದೆ. ಎಲ್ಲ ಸಾಂವಿಧಾನಿಕ ಹುದ್ದೆಗಳಲ್ಲಿ ಮನುವಾದಿ ವೈದಿಕರನ್ನು ತುಂಬಲಾಗಿದೆ. ಕರ್ನಾಟಕದಲ್ಲಿ ಬ್ರಾಹ್ಮಣರ ಜನಸಂಖ್ಯೆಯ ಪ್ರಮಾಣ ಶೇ 4 ಮೀರುವುದಿಲ್ಲ. ಅವರಿಗೆ ಒಟ್ಟು 21 ಸಾಮಾನ್ಯ ಕ್ಷೇತ್ರಗಳಲ್ಲಿ 3 ಸ್ಥಾನವನ್ನು(ಶೇ.14.28) ಬಿಜೆಪಿ ನೀಡಿದೆ. ಪ್ರಬಲ ಜಮೀನ್ದಾರಿ ಜಾತಿಗಳಾದ ಲಿಂಗಾಯತರು ಮತ್ತು ಒಕ್ಕಲಿಗರಿಗೆ 21 ಸಾಮಾನ್ಯ ಸ್ಥಾನಗಳಲ್ಲಿ ಕ್ರಮವಾಗಿ ಶೇ.42.86 ಮತ್ತು ಶೇ.28.57 ರಷ್ಟು ಸ್ಥಾನ ನೀಡಿದೆ. ರಾಜ್ಯದ ಜನಸಂಖ್ಯೆಯಲ್ಲಿ ಶೇ.60 ರಷ್ಟಿರುವ ಹಿಂದುಳಿದ ಒಬ್ಬರೇ ಒಬ್ಬರು ಉಮೇದುವಾರರಿಗೆ ಅದು ಸ್ಥಾನ ನೀಡಿಲ್ಲವೆಂದರೆ ಅದರ ಜಾತಿ ಸಮೀಕರಣ ಯಾವ ಕಡೆಗಿದೆ ಎಂಬುದನ್ನು ಊಹಿಸಿಕೊಳ್ಳಬಹುದು. ಜಾತಿ ಸಮೀಕರಣದಲ್ಲಿ ಸ್ವಲ್ಪ ಮಟ್ಟಿಗೆ ಸಮಾನತೆಯನ್ನು ಕಾಂಗ್ರೆಸ್ ಕಾಯ್ದುಕೊಂಡಿದೆ. ಒಕ್ಕಲಿಗರು ಮತ್ತು ಲಿಂಗಾಯತರಿಗೆ ಶೇ.47.72 ರಷ್ಟು ಸ್ಥಾನ ನೀಡಿ ಉಳಿದ ಶೇ.52.38ರಷ್ಟನ್ನು ಹಿಂದುಳಿದ, ಅಲ್ಪಸಂಖ್ಯಾತ ವರ್ಗಗಳಿಗೆ ನೀಡಿ ಕಾಂಗ್ರೆಸ್ಸು ವೈದಿಕರಿಗೆ ಒಂದೂ ಸ್ಥಾನ ನೀಡಿಲ್ಲ. ಲಿಂಗ ಸಮಾನತೆ ನ್ಯಾಯದ ದೃಷ್ಟಿಯಿಂದ ಎರಡೂ ಪಕ್ಷಗಳು ವಿಫಲವಾಗಿವೆ. ಬಿಜೆಪಿಯು ಒರ್ವ ಮಹಿಳೆಗೆ ಸ್ಥಾನ ನೀಡಿದ್ದರೆ ಕಾಂಗ್ರೆಸ್ಸು ಸಾಮಾನ್ಯ ಕ್ಷೇತ್ರದಲ್ಲಿ ಒಬ್ಬರಿಗೆ ಮತ್ತು ಮೀಸಲು ಕ್ಷೇತ್ರಗಳಲ್ಲಿ ಒಬ್ಬರಿಗೆ – ಒಟ್ಟು ಇಬ್ಬರಿಗೆ ಸೀಟು ನೀಡಿದೆ. ಚುನಾವಣೆಯಲ್ಲಿನ ಜಾತಿ ಸಮೀಕರಣದ ಬಗ್ಗೆ ಚರ್ಚೆ ಏಕೆ ಬೇಕು ಎಂದರೆ ಇದು ಮುಂದೆ ಆಡಳಿತ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ. ಬಿಜೆಪಿ ಪಕ್ಷವು ಸೀಟು ಹಂಚಿಕೆಯಲ್ಲಿ ರಾಜಕೀಯ ಪ್ರಾತಿನಿಧ್ಯದ ಸೂತ್ರವನ್ನು ಅನುಸರಿಸಿಲ್ಲ. ಪ್ರಬಲ ಜಮೀನ್ದಾರಿ ಮತ್ತು ಮನುವಾದಿ ವೈದಿಕರಿಗೆ ಶೇ.85ರಷ್ಟು ಸೀಟು ನೀಡಿ ಆಳುವ ಪಕ್ಷವು ಪ್ರಜಾಪ್ರಭುತ್ವದ ಮೂಲ ತತ್ವವಾದ ರಾಜಕೀಯ ಪ್ರಾತಿನಿಧ್ಯವನ್ನು ಪಾಲಿಸಿಲ್ಲ.



ಕೃಪೆ: ಪಿ. ಮಹಮ್ಮದ್

ಈ ಚುನಾವಣೆಯಲ್ಲಿ ನಮ್ಮ ಮುಖ್ಯಮಂತ್ರಿಗಳು ನಡೆದುಕೊಂಡ ರೀತಿ ಪ್ರಜಾಪ್ರಭುತ್ವಕ್ಕೆ ಮತ್ತು ನೈತಿಕತೆಗೆ ಕಳಂಕ ತರುವ ರೀತಿಯಲ್ಲಿತ್ತು. ಕುಟುಂಬ ರಾಜಕಾರಣವನ್ನು ಅವರು ಸಮರ್ಥಿಸಿಕೊಳ್ಳುವ ರೀತಿ, ರಕ್ತಸಂಬಂಧಿ ರಾಜಕೀಯದ ಹೆಸರಿನಲ್ಲಿ ಪ್ರತಿಸ್ಪರ್ಧಿಗಳನ್ನು ಹೀಯಾಳಿಸಿದ ರೀತಿ, ಸಾರ್ವಜನಿಕವಾಗಿ ಕಣ್ಣೀರಿಡುವುದು–ಇವೆಲ್ಲ ಒಬ್ಬ ಪ್ರೌಢ ರಾಜಕಾರಣಿಯ ಲಕ್ಷಣಗಳಲ್ಲ. ನಮ್ಮ ರಾಜಕೀಯ ಬದ್ಧತೆ ಏನೇ ಇರಲಿ ಸಿದ್ದರಾಮಯ್ಯ ನಡೆದುಕೊಳ್ಳುವ ರೀತಿ ರಾಜಕೀಯ ಔನ್ನತ್ಯಕ್ಕೆ ಹೆಗ್ಗುರುತಾದರೆ ಎಚ್.ಡಿ. ಕುಮಾರಸ್ವಾಮಿಗಳದ್ದು ಊಳಿಗಮಾನ್ಯ ಒಡೆಯರ ರೀತಿಯಲ್ಲಿದೆ.

ಈಗ ಚುನಾವಣೆ ಮುಗಿದಿದೆ. ನೀತಿ ಸಂಹಿತೆ ಜಾರಿಯಲ್ಲಿರಬಹುದು. ಏನೇ ಆಗಿಲಿ ಮುಖ್ಯಮಂತ್ರಿ ಈಗ ಆಡಳಿತ ಮತ್ತು ಅಭಿವೃದ್ಧಿಯತ್ತ ಗಮನ ನೀಡಬೇಕು. ಬೆಂಗಳೂರು ಮತ್ತು ಹಾಸನ–ಮಂಡ್ಯ ಜಿಲ್ಲೆಗಳು ಮಾತ್ರ ಕರ್ನಾಟಕವಲ್ಲ. ತೋರಿಕೆಯ ಗ್ರಾಮೀಣ ವಾಸ್ತವ್ಯ, ಹುಬ್ಬಳ್ಳಿಯಲ್ಲಿ ಮನೆ ಮಾಡಿದೆ ಮುಂತಾದವು ಕೇವಲ ಗಿಮ್ಮಿಕ್ ಎಂಬುದು ನಮಗೆ ಅರ್ಥವಾಗುತ್ತದೆ. ಬಡವರ, ಹಸಿವನ್ನು ಎದುರಿಸುತ್ತಿರುವವರ, ಜನರ ಬವಣೆಯ ಕಡೆ ಗಮನ ನೀಡುವುದು ಅಗತ್ಯ. ಸಿದ್ದರಾಮಯ್ಯ ಅವರ ಹೆಸರು ಮುಖ್ಯಮಂತ್ರಿಯಾಗಿದ್ದರು ಎಂಬುದಕ್ಕೆ ಚರಿತ್ರೆಯಲ್ಲಿ ಉಳಿಯುವುದಿಲ್ಲ. ಅನ್ನಭಾಗ್ಯದ ರೂವಾರಿ ಎನ್ನುವುದಕ್ಕೆ ಅವರ ಹೆಸರು ಚರಿತ್ರೆಯಲ್ಲಿ ಉಳಿಯುತ್ತದೆ. ದೇವರಾಜ್ ಅರಸರನ್ನು ಮುಖ್ಯಮಂತ್ರಿ ಎಂದು ಯಾರೂ ಇಂದು ನೆನೆಯುವುದಿಲ್ಲ. ಭೂಸುಧಾರಣೆಯ ಕ್ರಾಂತಿಕಾರಿ ಕ್ರಮಕ್ಕೆ ಅವರನ್ನು ಜನರು ನೆನೆಯುತ್ತಾರೆ. ಗೋದ್ರಾ ನರಮೇಧವನ್ನು ನರೇಂದ್ರಮೋದಿ ಅವರ ಚರಿತ್ರೆಯಿಂದ ಅಳಿಸಿ ಹಾಕುವುದು ಸಾಧ್ಯವಿಲ್ಲ. 'ಲಿಂಚಿಂಗ್' ಉಗ್ರವಾದಕ್ಕೆ ಅವರ ಹೆಸರು ಚರಿತ್ರೆಯಲ್ಲಿ ಉಳಿಯುತ್ತದೆ. ಆದ್ದರಿಂದ ಜನರಿಗೆ ಅನುಕೂಲವಾಗುವ ಕೆಲಸ ಮಾಡಿ. ಮಹಿಳೆಯರ ಬಗ್ಗೆ ಉಡಾಫೆಯ ಮಾತುಗಳನ್ನಾಡುವುದು ತಮಗೆ ಶೋಭೆ ತರುವುದಿಲ್ಲ. ಜನರು ಅಂದರೆ ಒಕ್ಕಲಿಗರು, ಲಿಂಗಾಯತರು, ಬ್ರಾಹ್ಮಣರಲ್ಲ. ಅಭಿವೃದ್ಧಿಯ ದೃಷ್ಟಿಯಿಂದ ಜನರು ಅಂದರೆ ದಿನಗೂಲಿ ದುಡಿಮೆಗಾರರು, ದಲಿತರು, ಸಮಾಜದ ಅಂಚಿನಲ್ಲಿ ಬದುಕು ದೂಡುತ್ತಿರುವವರು, ಅಭಿವೃದ್ಧಿಯ ಫಲಗಳಿಂದ ವಂಚಿತರು. ಅವರಿಗೆ ಅಭಿವೃದ್ಧಿ ಅಭಿಮುಖಿಯಾಗಿರಬೇಕು. ಈ ಸಂಗತಿಗಳ ಕಡೆ ಗಮನ ನೀಡುವ ಸಮಯವೀಗ ಬಂದಿದೆ. ಏಳಿ, ಎದ್ದೇಳಿ, ಕರ್ನಾಟಕದ 30 ಜಿಲ್ಲೆಗಳು, 176 ತಾಲ್ಲೂಕುಗಳು ಮತ್ತು ಆರೂವರೆ ಕೋಟಿ ಜನರಿಗೆ ತಾವು ಮುಖ್ಯಮಂತ್ರಿ. ಅದರಂತೆ ಆಡಳಿತ ನಡೆಸಿ. ಅಭಿವೃದ್ಧಿಯ ಹರಿಕಾರರಾಗಿ ●



ಬಿಜೆಪಿ ಅಭ್ಯರ್ಥಿಯಾಗಿ ಭಯೋತ್ಪಾದನಾ ಆರೋಪಿ

ಒಂದು ಕೇಡಿನ ಪ್ರತೀಕ

ಚುನಾವಣಾ ಅಭ್ಯರ್ಥಿಯಾಗಿ ಪ್ರಜ್ಞಾ ಠಾಕುರ್ ಆಯ್ಕೆ ಮತದಾರರಲ್ಲಿ ಧ್ರುವೀಕರಣ ತರುವ ಉದ್ದೇಶದಿಂದ ಕೋಮುವಾದವೇ ಮುಖ್ಯ ಒತ್ತು ಹಾಕಿರುವ ಬಿಜೆಪಿಯ ಚುನಾವಣಾ ಪ್ರಚಾರದ ಹಿನ್ನೆಲೆಯಲ್ಲಿ ಬಂದಿದೆ. ಇಂತಹ ಒಂದು ವಿಭಜನಕಾರೀ ಪ್ರಚಾರದಲ್ಲಿ, ಒಬ್ಬ ಕಾವಿಧಾರಿ ಭಯೋತ್ಪಾದನಾ-ಆರೋಪಿ ಮತ್ತು ಮುಸ್ಲಿಂ-ದ್ವೇಷಿ ಬಿಜೆಪಿಯ ಚುನಾವಣಾ ಅಜೆಂಡಾದ ಒಂದು ಪ್ರತೀಕವಾಗಿದ್ದಾರೆ. ಇದು ಕೂಡ ಬಹಳ ಹೊಸದೇನಲ್ಲ. ಇನ್ನೊಬ್ಬ ಮುಸ್ಲಿಂರ ವಿರುದ್ಧ ದ್ವೇಷ ಕಾರುವ, ಕಾವಿಧಾರಿ, ಆದಿತ್ಯನಾಥರನ್ನು ಉತ್ತರಪ್ರದೇಶದ ಮುಖ್ಯಮಂತ್ರಿಯಾಗಿ ಮಾಡಲಾಗಿದೆ ತಾನೇ?



ಪ್ರಕಾಶ ಕಾರಟ್

ಭೋಪಾಲ್ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಪ್ರಜ್ಞಾ ಸಿಂಗ್ ಠಾಕುರ್ ನಾಮಕರಣ 17ನೇ ಲೋಕಸಭಾ ಚುನಾವಣೆಗಳಲ್ಲಿ ಒಂದು ಮಹತ್ವದ, ಅಶುಭಕಾರೀ ಕ್ಷಣ. ಬಿಜೆಪಿಯ ಈ ನಿರ್ಧಾರ ಈ ಚುನಾವಣೆಯಲ್ಲಿ ಅದರ ನಿಜವಾದ ವೇದಿಕೆ ಏನೆಂಬುದರ ಒಂದು ಘೋಷಣೆಯಾಗಿದೆ. ಯಾವುದೇ ಮುಲಾಜಿಲ್ಲದ ಉಗ್ರ ಹಿಂದುತ್ವ, ಮತ್ತು ಅದರೊಂದಿಗೆ ಅದರ ಎಲ್ಲ ನಕಾರಾತ್ಮಕ ತೊಡಕುಗಳು–ಇದೇ ಆ ವೇದಿಕೆ.

ಪ್ರಜ್ಞಾ ಠಾಕುರ್ 2008ರ ಮಾಲೆಗಾಂವ್ ಸ್ಫೋಟದ ಒಬ್ಬ ಆರೋಪಿ. ಈ ಸ್ಫೋಟವನ್ನು ಸಂಘಟಿಸಿದ ಗುಂಪಿನ ಸೂತ್ರಧಾರಳು ಎಂಬ ಆಪಾದನೆ ಆಕೆಯ ಮೇಲಿದೆ. ಈ ಮೊಕದ್ದಮೆಯ ಆರೋಪ ಪತ್ರ ಆರು ಜನಗಳನ್ನು ಸಾಯಿಸಿದ ಈ ಸ್ಫೋಟವನ್ನು ಉಂಟು ಮಾಡುವಲ್ಲಿ ಬಳಸಿದ ಸ್ಫೋಟಕಗಳಿಂದ ತುಂಬಿದ್ದ ಮೋಟಾರ್ ಸೈಕಲ್ ಆಕೆಯದ್ದು ಎಂದು ಹೊರಗೆಡಹಿದೆ.

ಮೋದಿ ಸರಕಾರ ಅಧಿಕಾರಕ್ಕೆ ಬಂದ ನಂತರ, ಆಕೆಯ ವಿರುದ್ಧ ಇದ್ದ ಮೊಕದ್ದಮೆಯನ್ನು ವಿಫಲಗೊಳಿಸಲು ಸಕಲ ಪ್ರಯತ್ನಗಳೂ ನಡೆದವು. ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಆಕೆಯ ವಿರುದ್ಧ ಸಾಕಷ್ಟು ಸಾಕ್ಷ್ಯಗಳಿಲ್ಲ ಎಂದು ನ್ಯಾಯಾಲಯಕ್ಕೆ ಹೇಳಿತು. ಆದರೆ ನ್ಯಾಯಾಲಯ ಅದನ್ನು ಒಪ್ಪದೆ ಆಕೆಯನ್ನು 'ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ'(ಯುಎಪಿಎ) ಅಡಿಯಲ್ಲಿ ಆರೋಪಿಯಾಗಿಸಿದೆ. ಈಗ ಆಕೆ ವಿಚಾರಣೆಯ ನಡುವೆ ಜಾಮೀನಿನಲ್ಲಿ ಹೊರಗಿದ್ದಾರೆ.

ಇಂತಹ ಒಬ್ಬ ಭಯೋತ್ಪಾದನಾ ಆರೋಪಿಯನ್ನು ಭೋಪಾಲದಲ್ಲಿ ಬಿಜೆಪಿ ತನ್ನ ಅಭ್ಯರ್ಥಿಯಾಗಿ ಮಾಡಿದೆ. ಈ ಎಲ್ಲ ವರ್ಷಗಳಲ್ಲಿ ಆಕೆ ತನ್ನ ಉನ್ಮತ್ತ ಹಿಂದುತ್ವ ಮತ್ತು ಮುಸ್ಲಿಂ–ದ್ವೇಷಿ ಅಭಿಪ್ರಾಯಗಳನ್ನು ಎಂದೂ ಗುಟ್ಟಾಗಿ ಇಟ್ಟಿಲ್ಲ.

ನಾಮಪತ್ರ ಸಲ್ಲಿಸಿದ ಕೂಡಲೇ ಆಕೆ ಮಹಾರಾಷ್ಟ್ರ ಪೋಲೀಸ್ ಪಡೆಯ ಭಯೋತ್ಪಾದನಾ ನಿಗ್ರಹ ದಳ(ಎಟಿಎಸ್)ದ ಮುಖ್ಯಸ್ಥರಾಗಿದ್ದ ದಿವಂಗತ ಹೇಮಂತ ಕರ್ಕರೆ ಮೇಲೆ ಎರಗಿದರು. ಕರ್ಕರೆ ಮಾಲೆಗಾಂವ್ ಸ್ಫೋಟದ ತನಿಖೆ ಮಾಡಿದ್ದ, ಮತ್ತು ಪ್ರಜ್ಞಾ ಠಾಕುರ್ ಮತ್ತು ಆಕೆಯ ಸಹಯೋಗಿಗಳನ್ನು ಬಂಧಿಸಿದ್ದ ಪೋಲೀಸ್ ಅಧಿಕಾರಿ. ತಾನು ಕರ್ಕರೆಗೆ ಶಾಪ ಹಾಕಿದ್ದೆ, ಅದರಿಂದಾಗಿ 45 ದಿನಗಳೊಳಗೆ ಆತ ಭಯೋತ್ಪಾದಕ ಗುಂಡಿಗೆ ಬಲಿಯಾಗಿ ಸತ್ತರು ಎಂದು ಆಕೆ ಹೇಳಿದಳು. ಹೇಮಂತ ಕರ್ಕರೆ ಒಬ್ಬ ಧೀರ ಪೋಲೀಸ್ ಅಧಿಕಾರಿಯಾಗಿದ್ದು, ನವಂಬರ್ 2008ರ ಮುಂಬೈ ಭಯೋತ್ಪಾದಕ ದಾಳಿಯಲ್ಲಿ ಹುತಾತ್ಮರಾದವರು. ಇಂತಹ ಒಂದು ಆಘಾತಕಾರಿ ಹೇಳಿಕೆಯ ನಂತರವೂ, ಬಿಜೆಪಿ ಅದನ್ನು ಖಂಡಿಸುವ ಆಶಯವನ್ನು ತೋರಲಿಲ್ಲ, ಅದು ಆಕೆಯ ವೈಯಕ್ತಿಕ ಅಭಿಪ್ರಾಯವಷ್ಟೇ, ಬಹುಶಃ ಪೋಲೀಸರಿಂದ ಆಕೆ ಅನುಭವಿಸಿದ ಚಿತ್ರಹಿಂಸೆಯಿಂದಾಗಿ ಇರಬಹುದು ಎಂದಷ್ಟೇ ಹೇಳಿತು.

ಈ ಬಗ್ಗೆ ಬಂದ ಟೀಕೆಯಿಂದ ವಿಚಲಿತಳಾಗದ ಪ್ರಜ್ಞಾ ಠಾಕುರ್ ಇನ್ನೂ ಮುಂದೆ ಹೋಗಿ ಬಾಬ್ರಿ ಮಸೀದಿಯ ಧ್ವಂಸ ನಡೆಯುತ್ತಿದ್ದಾಗ ತಾನು ಗುಮ್ಮಟದ ತುದಿಯಲ್ಲಿದ್ದೆ, ಆ ಸ್ಥಳದಲ್ಲಿ ರಾಮ ದೇವಸ್ಥಾನ ಕಟ್ಟುವಾಗಲೂ ಆ ಸ್ಥಳದಲ್ಲಿ ಇರುತ್ತೇನೆ ಎಂದರು.

ಪ್ರಜ್ಞಾ ಠಾಕುರ್‌ನ್ನು ಅಭ್ಯರ್ಥಿಯಾಗಿ ನಿಲ್ಲಿಸಿದ್ದು ಒಂದು ಬಹಳ ಯೋಚನೆ ಮಾಡಿ ನಿರ್ಧರಿಸಿದ್ದ ನಡೆ ಎಂಬುದು ನರೇಂದ್ರ ಮೋದಿ ಅದನ್ನು ಸಮರ್ಥಿಸಿಕೊಂಡ ರೀತಿಯಲ್ಲೇ ಕಾಣುತ್ತದೆ. ಆಕೆ ಅಭ್ಯರ್ಥಿಯಾಗಿರುವುದು "ವಸುಧೈವ ಕುಟುಂಬಕಮ್ ನಲ್ಲಿ ನಂಬಿಕೆಯಿರುವ 5000 ವರ್ಷಗಳಷ್ಟು ಹಳೆಯ ನಾಗರಿಕತೆಯ ಹೆಸರುಗೆಡಿಸುವವರಿಗೆ, ಭಯೋತ್ಪಾದಕರು ಎಂದು ಕರೆದವರಿಗೆ" ನೀಡಿರುವ ಒಂದು ಉತ್ತರ ಎಂದು ಅವರು ಹೇಳಿದ್ದಾರೆ. ಇದಕ್ಕೆ ಮೊದಲು ಎಪ್ರಿಲ್ 1 ರಂದು ವರ್ಧಾದಲ್ಲಿ ಮಾತಾಡುತ್ತ ಮೋದಿ, ಹಿಂದು ಭಯೋತ್ಪಾದನೆಯ ಮಾತಾಡುವವರು ಇಡೀ ಹಿಂದೂ ಸಮುದಾಯವನ್ನು ಅವಮಾನ ಮಾಡುತ್ತಾರೆ ಎಂದು ಹೇಳಿದ್ದರು. "ಸಾವಿರ ವರ್ಷಗಳ ಇತಿಹಾಸದಲ್ಲಿ ಹಿಂದೂ ಭಯೋತ್ಪಾದನೆಯ ಕೃತ್ಯವನ್ನು ತೋರಿಸುವ ಒಂದೇ ಒಂದು ಘಟನೆ ನಡೆದಿಲ್ಲ" ಎಂದು ಅವರು ಸಾರಿದರು. ಇದು ಎಲ್ಲ ತರ್ಕಗಳನ್ನೂ ಹುಸಿಯಾಗಿಸಿರುವ ಅಸಂಬದ್ಧ ಹೇಳಿಕೆ. ನಾಥುರಾಂ ಗೋಡ್ಸೆಯಿಂದ ಹಿಡಿದು 2002ರ ಗುಜರಾತ್ ಹತ್ಯಾಕಾಂಡದ ವರೆಗೆ, ನಂತರ ದಭೋಲ್ಕರ್, ಪನ್ಸರೆ, ಕಲ್ಬುರ್ಗಿ, ಗೌರಿ ಹತ್ಯೆಗಳ ವರೆಗೆ ಹಿಂದುತ್ವ ಭಯೋತ್ಪಾದನೆಯ ಒಂದು ದೊಡ್ಡ ಸಾಲೇ ಇದೆ. ಈ ಎಲ್ಲ ಹೇಳಿಕೆಗಳ ಹಿಂದೆ ಇರುವ ತಿಳುವಳಿಕೆಯೆಂದರೆ, ಹಿಂದೂಗಳು ಭಯೋತ್ಪಾದಕರಾಗಲು ಸಾಧ್ಯವಿಲ್ಲ, ಕೇವಲ ಮುಸ್ಲಿಮರು ಮಾತ್ರವೇ ಹಾಗಾಗಲು ಸಾಧ್ಯ.



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಸಿಫಿ.ಕಾಂ

ಪ್ರಜ್ಞಾ ಠಾಕುರ್ ಒಬ್ಬ ಅಮಾಯಕ ಸಾಧ್ವಿ, ಆಕೆಯನ್ನು ಒಂದು ಸುಳ್ಳು ಕೇಸಿನಲ್ಲಿ ಸಿಗಿಸಲಾಗಿದೆ ಎಂಬುದು ಅಮಿತ್ ಷಾ ಮತ್ತು ಬಿಜೆಪಿಯ ನಿಲುವು. ಆದರೆ, ಅದೇ ವೇಳೆಗೆ, ಸಂಘ ಪಡೆಗಳು ಆಕೆ ಹಿಂದೂಗಳನ್ನು ಸಾಯಿಸಿದ್ದಕ್ಕೆ ಪ್ರತೀಕಾರ ತೀರಿಸಿರುವ ಧೀರೆ ಎಂದು ವೈಭವೀಕರಿಸುತ್ತಿವೆ.

ಚುನಾವಣಾ ಅಭ್ಯರ್ಥಿಯಾಗಿ ಪ್ರಜ್ಞಾ ಠಾಕುರ್ ಆಯ್ಕೆ ಮತದಾರರಲ್ಲಿ ಧ್ರುವೀಕರಣ ತರುವ ಉದ್ದೇಶದಿಂದ ಕೋಮುವಾದವೇ ಮುಖ್ಯ ಒತ್ತಾಗಿರುವ ಬಿಜೆಪಿಯ ಚುನಾವಣಾ ಪ್ರಚಾರದ ಹಿನ್ನೆಲೆಯಲ್ಲಿ ಬಂದಿದೆ. ನರೇಂದ್ರ ಮೋದಿ ಮತ್ತು ಅಮಿತ್ ಷಾ ರಿಂದ ಹಿಡಿದು ಎಲ್ಲ ಬಿಜೆಪಿ ಮುಖಂಡರುಗಳ ಭಾಷಣಗಳು ದಿನಗಳೆದಂತೆ ಹೆಚ್ಚೆಚ್ಚು ಕರ್ಕಶಗೊಳ್ಳುತ್ತಿವೆ. ಹಿಂದೂಗಳಿಗೆ ಹೊರಗಿನ ಮತ್ತು ಒಳಗಿನ ಶತ್ರುಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಬೇಕೆಂಬ ಕರೆ ನೀಡಲಾಗುತ್ತಿದೆ; ಅಲ್ಪಸಂಖ್ಯಾತರು ಬುಡಮೇಲು ಪಾತ್ರ ವಹಿಸುತ್ತಿದ್ದಾರೆ ಎಂದು ಸಾಕಷ್ಟು ಬಹಿರಂಗವಾಗಿಯೇ ಬೆದರಿಕೆ ಹಾಕಲಾಗುತ್ತಿದೆ; ತಮ್ಮ ರಾಷ್ಟ್ರೋನ್ಮಾದದ ಅಪಪ್ರಚಾರಕ್ಕೆ ಸಶಸ್ತ್ರ ಪಡೆಗಳ ಹೆಸರನ್ನು ಬಳಸಲಾಗುತ್ತಿದೆ; ಮತ್ತು ನಾಗರಿಕತ್ವ(ತಿದ್ದುಪಡಿ) ಮಸೂದೆ ಹಾಗೂ ರಾಷ್ಟ್ರೀಯ ನಾಗರಿಕರ ದಾಖಲೆ(ಎನ್‌ಆರ್‌ಸಿ) "ಹೊರಗಿನವರನ್ನು" ಹೊರಹಾಕುವ ಸಾಧನಗಳು ಎಂದು ಬಿಂಬಿಸಲಾಗುತ್ತಿದೆ.

ಇಂತಹ ಒಂದು ವಿಭಜನಕಾರೀ ಪ್ರಚಾರದಲ್ಲಿ, ಒಬ್ಬ ಕಾವಿಧಾರಿ ಭಯೋತ್ಪಾದನಾ–ಆರೋಪಿ ಮತ್ತು ಮುಸ್ಲಿಂ–ದ್ವೇಷಿ ಬಿಜೆಪಿಯ ಚುನಾವಣಾ ಅಜೆಂಡಾದ ಒಂದು ಪ್ರತೀಕವಾಗಿದ್ದಾರೆ. ಇದು ಕೂಡ ಬಹಳ ಹೊಸದೇನಲ್ಲ. ಇನ್ನೊಬ್ಬ ಮುಸ್ಲಿಂರ ವಿರುದ್ಧ ದ್ವೇಷ ಕಾರುವ, ಕಾವಿಧಾರಿ, ಆದಿತ್ಯನಾಥರನ್ನು ಉತ್ತರಪ್ರದೇಶದ ಮುಖ್ಯಮಂತ್ರಿಯಾಗಿ ಮಾಡಲಾಗಿದೆ ತಾನೇ?


'ಸಬ್ ಕಾ ಸಾಥ್ ಸಬ್ ಕಾ ವಿಕಾಸ್" ಘೋಷಣೆಯನ್ನು ನಿಜವಾಗಿಯೂ ಬಿಟ್ಟೇ ಬಿಡಲಾಗಿದೆ. ಅದರ ಜಾಗದಲ್ಲಿ ಒಂದು ಬಹಿರಂಗ ಹಿಂದುತ್ವ ಕೋಮುವಾದಿ–ಮಿಲಿಟರಿಶಾಹಿಮಾದರಿ–ಸಂಕುಚಿತವಾದೀ ಮನವಿ ಬಂದಿದೆ. ಇದು, ಮೋದಿ 'ವಿಕಾಸ'ದ ಮಾತಾಡುವವರು ಎಂಬ ನಂಬಿಕೆಗೆ ಜೋತು ಬಿದ್ದಿರುವವರನ್ನೂ ಬೆಚ್ಚಿ ಬೀಳಿಸುವಂತದ್ದು. ಇಂತಹ ಭ್ರಮೆಗಳಿಗೆ ಈಗ ಯಾವ ಅವಕಾಶವೂ ಉಳಿದಿಲ್ಲ. ದೇಶವನ್ನು ಉಳಿಸುವ ಏಕೈಕ ದಾರಿಯೆಂದರೆ, ಬಿಜೆಪಿ ಮತ್ತು ಮೋದಿ ಸೋಲುವಂತೆ ಮಾಡುವುದು. ●




ಕೋಪೋದ್ರಿಕ್ತ ಸಾಧ್ವಿ ಒಂದಿಷ್ಟು ಕೂದಲು ಕಿತ್ತು ನೆಲಕ್ಕಪ್ಪಳಿಸಿದಳು! ಆ ಕೂದಲುಗಳಿಂದ ಭಯಾನಕ ಕಸಬಾಸುರ ಎದ್ದು ಬಂದ, ಜನಗಳನ್ನು ಸಾಯಿಸುತ್ತ ನಡೆದ.......

ವ್ಯಂಗ್ಯಚಿತ್ರ: ಆರ್‌ಪ್ರಸಾದ್, ಇಕನಾಮಿಕ್ ಟೈಮ್ಸ್







ವ್ಯಂಗ್ಯಚಿತ್ರ: ಅಲೋಕ್ ನಿರಂತರ್

ಮಂಡ್ಯದ ವಳೆಗೆರೆಹಳ್ಳಿಯ ಆತ್ಮಹತ್ಯೆ ಮಾಡಿಕೊಂಡ ಐವರು ರೈತರ ಆತ್ಮಹತ್ಯೆಗಳನ್ನು 'ರಾಜಕೀಯ–ಆರ್ಥಿಕ ಪೋಸ್ಟ್ ಮಾರ್ಟಂ' ಮೂಲಕ ಕೃಷಿ ಸಂಕಟದ ಆಳ ಅಗಲಗಳನ್ನು ಇಲ್ಲಿ ಅಳೆಯಲಾಗಿದೆ. ಮಂಡ್ಯ ಮತ್ತು ಕೊಪ್ಪಳದ ಕೃಷಿ ಸಂಕಟಗಳನ್ನು ಕುರಿತು ಸಂಶೋಧನೆ ಮಾಡುತ್ತಿರುವ ದೀಪಾ ಕುರುಪ್ ಅದರ ಬೆಳಕಿನಲ್ಲಿ ಕಳೆದ ಐದು ವರ್ಷಗಳಲ್ಲಿ ಈ ಕುರಿತು ಮೋದಿ ಸರಕಾರದ ಘೋಷಣೆ ಮತ್ತು 'ಸಾಧನೆ'ಗಳ ನಡುವಿನ ಕಂದಕವನ್ನು ತೆರೆದಿಡುತ್ತಾರೆ. ಅದಕ್ಕೆ ಪ್ರತಿಕ್ರಿಯೆಯಾಗಿ ಬಂದಿರುವ ರೈತರ ಚಳುವಳಿಯ ಬಗೆಗೂ ಬರೆಯುತ್ತಾರೆ. ಲೋಕಸಭಾ ಚುನಾವಣೆಗಳ ಹಿನ್ನೆಲೆಯಲ್ಲಿ ಕೃಷಿ ಸಂಕಟಗಳ ತೀವ್ರ ನಿರ್ಲಕ್ಷ ಮೋದಿಯನ್ನು ಸೋಲಿಸಬಲ್ಲದು ಎಂದು ಅಂತರ್ರಾಷ್ಟ್ರೀಯ ಓದುಗರಿಗೆ ತಿಳಿಸುವ ಈ ಲೇಖನ 'ಅಲ್ ಜಜೀರಾ' ವೆಬ್ ಮ್ಯಾಗಜೀನ್ ನಲ್ಲಿ ಪ್ರಕಟವಾಗಿದೆ. ಇಲ್ಲಿ ಬರುವ ಕೃಷಿ ಸಂಕಟದ ಹಲವು ಆಯಾಮಗಳ ಬಗ್ಗೆ ಈ ಪತ್ರಿಕೆಯಲ್ಲಿ ಹಲವು ಬರಹಗಳು ಪ್ರಕಟವಾಗಿದ್ದರೂ, ಕ್ಷೇತ್ರ ಸಮೀಕ್ಷೆಯ ಪ್ರಕರಣಗಳ ಆಧಾರವಿರುವುದರಿಂದ ಈ ಲೇಖನವನ್ನು ಇಡಿಯಾಗಿ ಪ್ರಕಟಿಸಲಾಗುತ್ತಿದೆ. ಇದನ್ನು ಈ ಕ್ಷೇತ್ರ ಸಮೀಕ್ಷೆಯಲ್ಲಿ ಭಾಗವಹಿಸಿದ ಕರ್ನಾಟಕ ಪ್ರಾಂತ ರೈತ ಸಂಘದ ನಾಯಕ ಟಿ. ಯಶವಂತ ಅನುವಾದಿಸಿದ್ದಾರೆ.

–ದೀಪಾ ಕುರುಪ್ (ಕನ್ನಡಕ್ಕೆ : ಟಿ.ಯಶವಂತ) ಕೃಪೆ: ಅಲ್ ಜಜೀರಾ

ಕೃಷಿ ಬಿಕ್ಕಟ್ಟಿನ ನಿರ್ಲಕ್ಷ್ಯ ಮೋದಿ ಸೋಲಿಸೀತೆ?

ಮಂಡ್ಯದ ವಳಗೆರೆಹಳ್ಳಿಯ ರೈತ ಆತ್ಮಹತ್ಯೆಗಳ 'ಪೋಸ್ಟ್ ಮಾರ್ಟಂ'



ಮಧುಕರ ತಾಯಿ ಜಯಮ್ಮ, ಪತ್ನಿ ಸುನಂದ

"ನಿಮ್ಮ ಗ್ರಾಮದಲ್ಲಿ ಏಕೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ" ಎಂದು ಮುಜಗರದಿಂದಲೇ ವಳೆಗೆರಹಳ್ಳಿ ಗ್ರಾಮಸ್ಥರನ್ನು ಪ್ರಶ್ನಿಸಿದೆ. ಮಂಡ್ಯ ಜಿಲ್ಲೆ ಮದ್ದೂರು ತಾಲೂಕಿಗೆ ಸೇರಿರುವ ವಳೆಗೆರೆಹಳ್ಳಿ ಗ್ರಾಮದ ಬಹಳಷ್ಟು ಜನರಿಗೆ 2015 ಹಾಗೂ 2017 ರ ನಡುವಿನ ಎರಡು ವರ್ಷದಲ್ಲಿ ತನ್ನ ಗ್ರಾಮದ ಐವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದು ಆಶ್ಚರ್ಯವನ್ನೇನೂ ಹುಟ್ಟಿಸಲಿಲ್ಲ.

ಆದರೆ ಏಪ್ರಿಲ್ 1ರಂದು ನಡೆದ ಶ್ರೀನಿವಾಸ್ ರವರ ಆತ್ಮಹತ್ಯೆ ಅವರ ಮನಸ್ಸಿನಲ್ಲಿ ಹಸಿರಾಗಿದೆ. 45 ವರ್ಷ ವಯಸ್ಸಿನ ರೈತ ಸುಮಾರು ಐದು ಲಕ್ಷ ರೂ ನಷ್ಟಿದ್ದ ಸಾಲದಿಂದ ಮುಕ್ತನಾಗದೆ ವೃದ್ಧೆ ತಾಯಿ, ಪತ್ನಿ ಮತ್ತು ಮಗನನ್ನು ಬಿಟ್ಟು ಅಗಲಿದ್ದಾರೆ. ಕಳೆದ ವರ್ಷವಷ್ಟೇ ಬಂಧು, ಸ್ನೇಹಿತರು ಹಾಗೂ ಗ್ರಾಮದ ಲೇವಾದೇವಿದಾರರಿಂದ ಮಗಳ ಮದುವೆ ವೆಚ್ಚ ಭರಿಸಲು ಸಾಲ ಪಡೆದಿದ್ದರು. ಮತ್ತೇ ಈ ವರ್ಷ ತನ್ನ ಒಂದು ಎಕರೆ ಜಮೀನಿನಲ್ಲಿ ಭತ್ತ ಬೆಳೆಯಲು ಮತ್ತಷ್ಟು ಸಾಲ ಮಾಡಿದ್ದರು. ಹಾಕಿದ್ದ ಬಂಡವಾಳಕ್ಕಿಂತ ಸಾಕಷ್ಟು ಕಡಿಮೆ ಬೆಲೆಗೆ ಭತ್ತ ಮಾರಾಟ ಆಗಿದ್ದು, ಸಾಲ ತೀರಿಸುವ ಅವನ ನಿರೀಕ್ಷೆಯನ್ನು ಮಣ್ಣುಪಾಲು ಮಾಡಿತು.

ಆದರೆ ಶ್ರೀನಿವಾಸ್ ರವರ ಸಾವು ರೈತ ಆತ್ಮಹತ್ಯೆ ಯ ಕೃಷಿ ಇಲಾಖೆ ಅಂಕಿ ಸಂಖ್ಯೆ ಪಟ್ಟಿಯಲ್ಲಿ ಸೇರ್ಪಡೆ ಆಗಿಲ್ಲ. ಲೆಕ್ಕಕ್ಕೆ ಹಾಗೂ ಪರಿಹಾರ ಸೌಲಭ್ಯಗಳ ಕ್ರಮಕ್ಕೆ ಒಳಪಡಬೇಕಾದರೆ, ಮರಣೋತ್ತರ ಪರೀಕ್ಷೆ ಮಾಡಿಸಬೇಕು. ಅವರ ಕುಟುಂಬದಂತೆ ಬಹಳಷ್ಟು ಇತರರು ಸಾಂಸ್ಕೃತಿಕ ಮತ್ತು ಭಾವನಾತ್ಮಕ ಕಾರಣಗಳಿಗಾಗಿ ಇಂತಹ ಪ್ರಕ್ರಿಯೆಯನ್ನು ನಿರಾಕರಿಸಿರುತ್ತಾರೆ. ಶ್ರೀನಿವಾಸ್ ರವರ ರೀತಿ ಎಣಿಕೆಗೆ ಪರಿಗಣಿಸದ ಆತ್ಮಹತ್ಯೆಗಳು ವಾರ್ಷಿಕವಾಗಿ ರಾಷ್ಟ್ರೀಯ ಅಪರಾಧ ರೆಕಾರ್ಡ್ಸ್ ಬ್ಯೂರೋ (NCRB) ಪ್ರಕಟಿಸುವ ರೈತ ಆತ್ಮಹತ್ಯೆಗಳ ಸಂಖ್ಯೆಗಿಂತ ವಾಸ್ತವವಾಗಿ ಜರುಗುತ್ತಿರುವ ಅತ್ಮಹತ್ಯೆಗಳು ಹೆಚ್ಚಿರುವುದನ್ನು ತೋರಿಸುತ್ತದೆ.

ನಿಖರವಲ್ಲದಿದ್ದರೂ 2016ರ ತನಕ ಸಾಮಾಜಿಕ ಕಾರ್ಯಕರ್ತರು ಹಾಗೂ ನೀತಿ ನಿರೂಪಕರು ಉಲ್ಲೇಖಿಸಬಹುದಾಗಿದ್ದು NCRB ದತ್ತಾಂಶ ಮಾತ್ರವಾಗಿತ್ತು. ಆ ನಂತರದಿಂದ ಬಿಜೆಪಿ ಸರ್ಕಾರ ಆತ್ಮಹತ್ಯೆ ಅಂಕಿಸಂಖ್ಯೆಗಳನ್ನು ಪ್ರಕಟಿಸಲು ನಿರಾಕರಿಸಿದೆ. ಅದರ ಒಟ್ಟು ರಾಜಕೀಯ ಕಥನಕ್ಕೆ ಅನುಕೂಲವಾಗುವಂತೆ, ನಿರುದ್ಯೋಗ ಮಟ್ಟ ಅಥವಾ ಆರ್ಥಿಕ ಬೆಳವಣಿಗೆಗೆ ಸಂಬಂಧಿಸಿದ ತನಗೆ 'ಮುಜುಗರ ಉಂಟುಮಾಡುವ' ಅಂಕಿ ಸಂಖ್ಯೆಗಳನ್ನು ಮರೆಮಾಚುವ ಇಲ್ಲವೆ ತಿರುಚುವ ಕಾರ್ಯತಂತ್ರದ ಭಾಗವಾಗಿಯೇ ಇದನ್ನು ಮಾಡಲಾಗಿದೆ.

ಜನಸಂಖ್ಯೆಯ ಶೇಕಡಾ 69 ರಷ್ಟು ಅಂದರೆ 83 ಕೋಟಿ ಜನ ಇರುವ ಗ್ರಾಮೀಣ ಪ್ರದೇಶದ ಸಂಕಷ್ಟ ಅಳೆಯುವ ಸೂಚಕವಿದು. NCRB ಪ್ರಕಾರ 2015 ರ ಹಿಂದಿನ ಎರಡು ದಶಕಗಳಲ್ಲಿ ಕನಿಷ್ಠ 3.21 ಲಕ್ಷ ರೈತರು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಬಿಜೆಪಿ ಆಡಳಿತದ ಹಿಂದೆಯೂ ಬಿಕ್ಕಟ್ಟು ಇರುವ ಬಗ್ಗೆ ಕೂಡ ಓಅಖಃ ಬೆಳಕು ಚೆಲ್ಲುತ್ತಿದೆ. 2014 ರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ 'ಕ್ರಾಂತಿ' ಮಾಡುವುದಾಗಿ ರೈತ–ಕೃಷಿ ಕೂಲಿಕಾರರನ್ನು ನಂಬಿಸಿ ಮೋದಿ ಸರ್ಕಾರ ಅಧಿಕಾರಕ್ಕೆ ಬಂದಿದ್ದರೂ ಗ್ರಾಮೀಣ ಬಿಕ್ಕಟ್ಟು ಮಾತ್ರ ಮತ್ತಷ್ಟು ಉಲ್ಬಣಿಸಿದೆ.

2014 ರ ಬಿಜೆಪಿ ಪ್ರಣಾಳಿಕೆ ರೈತರಿಗೆ ಉತ್ಪಾದನಾ ವೆಚ್ಚದ ಶೇಕಡಾ 50 ರಷ್ಟು ಲಾಭಾಂಶದ ಭರವಸೆ ನೀಡಿತ್ತು. ಮತ್ತೊಂದು ಅವಧಿಗೆ ಅಧಿಕಾರ ನಿರೀಕ್ಷಿಸುತ್ತಿರುವ ಮೋದಿ, 2019ರ ಬಿಜೆಪಿ ಪ್ರಣಾಳಿಕೆಯಲ್ಲಿ ಪುನುರುಚ್ಚರಿಸಿರುವ ಕೃಷಿ ಆದಾಯವನ್ನು ದುಪ್ಪಟ್ಟುಗೊಳಿಸಲು 2022 ರವರೆಗೆ ಅವಕಾಶ ನೀಡುವಂತೆ ಮತದಾರರನ್ನು ಕೇಳುತ್ತಿದ್ದಾರೆ. ಆದರೆ ಕೃಷಿ ಕ್ಷೇತ್ರದ ಒಟ್ಟಾರೆ ಚಿತ್ರಣ ಈ ಭರವಸೆಯ ವಿರುದ್ಧ ದಿಕ್ಕಿನಲ್ಲಿದೆ.

ಕೃಷಿಕ್ಷೇತ್ರದ ಆರ್ಥಿಕ ಚಟುವಟಿಕೆಯ ಮಾಪಕವಾದ ಒಟ್ಟು ಮೌಲ್ಯ ವರ್ದನೆಯು(ಉಗಿಂ)2014–19 ರ ಪ್ರಸ್ತುತ ಬಿಜೆಪಿ ನೇತೃತ್ವದ ಎನ್.ಡಿ.ಎ. ಅವಧಿಯ ಸ್ಥಿರ ದರದಲ್ಲಿ ಸರಾಸರಿ ಶೇಕಡಾ 2.8 ರಷ್ಟು ಬೆಳವಣಿಗೆ ಕಂಡಿದೆ. ಹಿಂದಿನ ನಿರಂತರ ಎರಡು ಅವಧಿಯ ಕಾಂಗ್ರೆಸ್ ನೇತೃತ್ವದ ಸರ್ಕಾರಗಳಾದ ಯುಪಿಎ–1 (2004–09) ಹಾಗೂ ಯುಪಿಎ–2 (2009–14) ಗಳಿಗೆ ಹೋಲಿಸಿದರೆ ಇದು ಗಮನಾರ್ಹವಾಗಿ ಕಡಿಮೆ. ಇತ್ತೀಚಿನ ವರ್ಷಗಳಲ್ಲಿ ಕೃಷಿಯಲ್ಲಿ ತೊಡಗಿರುವ ಪುರುಷ ಹಾಗೂ ಮಹಿಳೆಯರ ಗ್ರಾಮೀಣ ಕೂಲಿಯ ಪ್ರಮಾಣ ಸಹ ಕುಂಠಿತಗೊಂಡಿದೆ.

ವಳೆಗೆರಹಳ್ಳಿ ಆತ್ಮಹತ್ಯೆಗಳು

ಗ್ರಾಮಗಳಲ್ಲಿನ ಬಿಕ್ಕಟ್ಟಿನ ಲಕ್ಷಣಗಳು ಹಾಗೂ ಹೊರಬಿದ್ದಿರುವ ಅಂಕಿಸಂಖ್ಯೆಗಳು, ಬಿಜೆಪಿಯ ಭರವಸೆಗಳಿಗೂ 'ಸಾಧನೆ'ಗಳಿಗ ಇರುವ ಕಂದಕವನ್ನು ತೋರಿಸುತ್ತಿವೆ. ಬಿಜೆಪಿ ಗ್ರಾಮೀಣ ಬಿಕ್ಕಟ್ಟನ್ನು ಒಂದು ರಚನಾತ್ಮಕ ಬಿಕ್ಕಟ್ಟು ಎಂದು ಗ್ರಹಿಸುವುದಿಲ್ಲ. ಬಹುತೇಕ ಕೃಷಿ ಭೂಮಿಗೆ ಕಾಲುವೆ ನೀರಾವರಿ ಹೊಂದಿರುವ ಹಾಗೂ ಭತ್ತ, ಕಬ್ಬು, ರೇಷ್ಮೆ ಬೆಳೆಯುವ ವಳೆಗೆರಹಳ್ಳಿಯಲ್ಲಿನ ಪರಿಸ್ಥಿತಿ ಇದಕ್ಕೆ ಕನ್ನಡಿಯಾಗಿದೆ. 2015 ಮತ್ತು 2017 ರ ನಡುವೆ ಆತ್ಮಹತ್ಯೆ ಮಾಡಿಕೊಂಡಿರುವ ಐದು ಕುಟುಂಬಗಳ ಜೊತೆಗಿನ ಸಂವಾದವು ಗ್ರಾಮೀಣ ಭಾರತದ ರಾಜಕೀಯ ಆರ್ಥಿಕತೆಯಲ್ಲಿನ ಬಿಕ್ಕಟ್ಟಿಗೆ ಸಾಕ್ಷಿ ಒದಗಿಸುವ ಮಾನವ ದುರಂತವನ್ನು ಅನಾವರಣಗೊಳಿಸಿದೆ.

ಜಯರಾಮು ಎಂ.(36), ಮಧುಕರ್ (40), ನಾಥಪ್ಪ,(46), ಸಿ.ಎಂ.ಸಂಪತ್(37) ಮತ್ತು ಮರಿಗೌಡ (50) – ಆತ್ಮಹತ್ಯೆ ಮಾಡಿಕೊಂಡ ಈ ಐವರ ಕುಟುಂಬಗಳು ಎರಡು ಎಕರೆಗಿಂತ ಕಡಿಮೆ ಹಿಡುವಳಿ ಹೊಂದಿದ್ದು, ಕೃಷಿ ಕೂಲಿಗಾರರಾಗಿಯೂ ಸಹ ಕೆಲಸ ಮಾಡುತ್ತಿದ್ದರು. ರಾಷ್ಟ್ರೀಯ ಸರಾಸರಿ ಹಿಡುವಳಿ 2.7 ಎಕರೆ. ಈ ಎಲ್ಲಾ ಐದು ರೈತರು ಲಾಭಗಳಿಸುವಲ್ಲಿ ವಿಫಲರಾಗಿದ್ದು ಕುತ್ತಿಗೆಮಟ್ಟ ಸಾಲದಲ್ಲಿ ಮುಳುಗಿದವರು. ಅನಾರೋಗ್ಯ, ಮದುವೆ, ಕೃಷಿ ಲಾಗುವಾಡು ಮತ್ತಿತರೆ ವೆಚ್ಚ ನಿಭಾಯಿಸುವ ಕಾರಣದಿಂದಾಗಿ ಸಾಲಗಾರರಾಗಿದ್ದರು.

ಈ ಸಾಲದ ಗಣನೀಯ ಮೊತ್ತವನ್ನು ಸ್ಥಳೀಯ ಲೇವಾದೇವಿದಾರರಿಂದ ಪಡೆಯಲಾಗಿತ್ತೇ ವಿನಃ ಬ್ಯಾಂಕ್‌ನಿಂದಲ್ಲ. ಮಾಸಿಕ ಶೇಕಡಾ 5 ರ ದುಬಾರಿ ಬಡ್ಡಿ ದರ. ಜುಲೈ 2015 ರಲ್ಲಿ ಆತ್ಮಹತ್ಯೆಗೀಡಾದ ಜಯರಾಮು ತಾಯಿ 58 ವರ್ಷದ ಸಣ್ಣಮ್ಮ, ರಾಜ್ಯ ಸರ್ಕಾರ ಕೊಟ್ಟ ಪರಿಹಾರ ಧನ ಅವಳ ಮಗನ ಸುಸ್ಥಿ ಸಾಲದ ಬಡ್ಡಿಗೆ ಸರಿ ಹೋಯಿತು ಎಂದು ನಿಟ್ಟುಸಿರು ಬಿಟ್ಟರು.

ಮಧುಕರ್, ಒಬ್ಬ ದಲಿತ ರೈತ, ಸುಮಾರು ಶೇಕಡಾ 9 ರಷ್ಟು ಮಾಸಿಕ ದುಬಾರಿ ಬಡ್ಡಿ ದರದ ಸಾಲಗಾರ. ಆಗಷ್ಟೇ ಗುತ್ತಿಗೆ ಪಡೆದಿದ್ದ ಒಂದು ಎಕರೆ ಭೂಮಿಗೆ ಬಾಡಿಗೆ ಪಾವತಿಸಲು ಸಾಲ ಮಾಡಿದ್ದ. ಲೇವಾದೇವಿದಾರರು ತಮ್ಮ ಹಣದ ಸುರಕ್ಷತೆಗಾಗಿ ಸಾಮಾನ್ಯವಾಗಿ ದಲಿತರನ್ನು ಹಾಗೂ ಇತರೆ ಭೂ ಹೀನಾ ಬಡವರನ್ನು, ಅವರ ಹತ್ತಿರ ಈ ಸಣ್ಣ ಮೊತ್ತಕ್ಕೆ ಗ್ಯಾರಂಟಿ ನೀಡಬಹುದಾದ



ಜಯರಾಮ ತಾಯಿ ಸಣ್ಣಮ್ಮ

ಯಾವುದೇ ಆಸ್ತಿ ಇರದೇ ಇರುವುದರಿಂದ, ಹೆಚ್ಚಿನ ನಷ್ಟ ಉಂಟು ಮಾಡಬಹುದಾದ ಸಾಲಗಾರರೆಂದು ಪರಿಗಣಿಸುತ್ತಾರೆ.

ಮಧುಕರ್ ಆತ್ಮಹತ್ಯೆ ಮಾಡಿಕೊಂಡ ಮೇಲೆ ಆತನ ವಿಧವೆ ಪತ್ನಿ, ಸುನಂದಾ (30), ಸಾಲ ತೀರಿಸಲು ಇದ್ದ ಅರ್ಧ ಎಕರೆ ಜಮೀನು ಮಾರಾಟ ಮಾಡಿದ್ದಾಗಿ ಹೇಳಿದರು. ಈಗ ಈ ಕುಟುಂಬಕ್ಕೆ ಯಾವುದೇ ಭೂಮಿ ಇಲ್ಲ. ಕುಟುಂಬ ನಿರ್ವಹಣೆಗಾಗಿ ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಕೃಷಿ ಇಲಾಖೆ, ಆತ್ಮಹತ್ಯೆಗೀಡಾದ ವಳೆಗೆರಹಳ್ಳಿ ರೈತರನ್ನು ಸಣ್ಣ ಮತ್ತು ಅಂಚಿನ ರೈತರೆಂದು ವರ್ಗೀಕರಿಸಿದೆ. ಇಂತಹವರ ಪ್ರಮಾಣ ದೇಶದಲ್ಲಿ ಶೇಕಡಾ 86 ರಷ್ಟಿದ್ದರೂ, ಗಣತಿ ಪ್ರಕಾರ ಕೇವಲ ಶೇಕಡಾ 47 ರಷ್ಟು ಕೃಷಿ ಭೂಮಿ ಹೊಂದಿದ್ದಾರೆ. ಈ ಶೇಕಡಾ 86 ಜನರೇ ಭಾರತದ ಕೃಷಿ ಬಿಕ್ಕಟ್ಟಿನ ಬಹು ಭಾರ ಹೊತ್ತಿರುವವರು. ಕೃಷಿ ಸಂಕಟವು ಭಾರತೀಯ ರೈತರನ್ನು ತಲೆಮಾರಿನಿಂದ ತಲೆಮಾರಿಗೆ ಹೆಚ್ಚು ಹೆಚ್ಚು ತುಂಡು ಹಿಡುವಳಿದಾರರನ್ನಾಗಿಸುತ್ತಿದೆ. ಭೂ ಹಂಚಿಕೆಯ ಅಸಮಾನತೆ ಕೂಡ ತೀವ್ರಗೊಂಡಿದೆ.

ಬರಗಾಲ, ಬೆಳೆ ವಿಮೆ ಇತ್ಯಾದಿ

ಮಂಡ್ಯವೂ ಸೇರಿದಂತೆ ಭಾರತದ ಬಹುತೇಕ ಭಾಗ 2014 ರಿಂದ ಸತತ ಎರಡು ವರ್ಷಗಳ ಬರಗಾಲವನ್ನು ಅನುಭವಿಸಿದ್ದರೂ, ಈ ಯಾವ ಕುಟುಂಬಗಳು ಕೇಂದ್ರ ಸರ್ಕಾರದಿಂದ ಬರ ಪರಿಹಾರ ಪಡೆದಿಲ್ಲ. ಅಸಮರ್ಪಕ ಭೂ ದಾಖಲಾತಿ ಅಥವಾ ಆಧಾರ್ ಜೊತೆ ಬ್ಯಾಂಕ್ ಖಾತೆ ಜೋಡಣೆ ಆಗದಿರುವ ಕಾರಣದಿಂದ ಬರ ಪರಿಹಾರ ಪಟ್ಟಿಯಿಂದ ಅವರು ಹೊರಗುಳಿದಿದ್ದರು ಎಂದು ವಳೆಗೆರಹಳ್ಳಿ ಗ್ರಾಮ ಲೆಕ್ಕಾಧಿಕಾರಿ ಆರೋಪಿಸಿದರು.

ರೈತನ ಜೊತೆ ಪ್ರಿಮಿಯಂ ನ ಒಂದು ಭಾಗವನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಪಾವತಿಸುವ, ಮೋದಿ ಸರ್ಕಾರದ ಮಹತ್ವಕಾಂಕ್ಷಿ ಬೆಳೆ ವಿಮೆ ಯೋಜನೆಯಾದ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯೂ, ಅವರನ್ನು ಒಳಗೊಂಡಿಲ್ಲ. ಇಡೀ ಊರಿನ ಎಲ್ಲಾ ಬೆಳೆಗಳು ನಾಶವಾದರೆ ಮಾತ್ರ ವಿಮೆ ದಾವೆಗೆ ಅವಕಾಶ ಇರುವ ಈ ಯೋಜನೆ ಉಪಯೋಗಿಯಾಗಿಲ್ಲ ಎಂದು ವಳೆಗೆರಹಳ್ಳಿ ರೈತರು ತಿಳಿಸಿದರು. ಮಿಗಿಲಾಗಿ ವಾಣಿಜ್ಯ ಬೆಳೆಗಳನ್ನು ಈ ವಿಮೆ ಯೋಜನೆ ಒಳಗೊಂಡಿಲ್ಲವಾದ್ದರಿಂದ ಕಬ್ಬು ಬೆಳೆಯುವ ಎಲ್ಲರನ್ನೂ ಹೊರಗಿಟ್ಟಿದೆ.

ಸತತ ಎರಡು ವರ್ಷಗಳ ಬೆಳೆ ವಿಫಲತೆ ಕಾರಣದಿಂದ ತನ್ನ ಹೊಲದಲ್ಲಿ ಸಣ್ಣಮ್ಮನ 30 ವರ್ಷದ ಮಗ ಜಯರಾಮು 2015 ರಲ್ಲಿ ಆತ್ಮಹತ್ಯೆಗೀಡಾದರು. ಆದರೆ ಆತನಿಗೆ ಬೆಳೆ ವಿಮೆ ಸಹಾಯಕ್ಕೆ ಬಂದಿಲ್ಲ. ಈ ಯೋಜನೆ ಮೋದಿರವರ 2018–19 ರ ಕೃಷಿ ಬಜೆಟ್ ನ ಕಾಲು ಭಾಗದಷ್ಟು ಅಂದರೆ 57,600 ಕೋಟಿ ರೂಗಳ ಅನುದಾನವನ್ನು ಪಡೆದಿದ್ದರೂ, ಹೇಗೆ ಸರ್ಕಾರಿ ವೆಚ್ಚದ ಹೆಚ್ಚಳ ಅಂತಿಮವಾಗಿ ಕಾರ್ಪೋರೇಟ್ ಗಳಿಗೆ ಅನುಕೂಲವಾಗುತ್ತದೆ ಎಂಬುದಕ್ಕೆ ಇದು ಒಂದು ಉದಾಹರಣೆ. ಈ ಯೋಜನೆಯ ಅಡಿಯಲ್ಲಿ ಬರುವ 18 ವಿಮಾ ಕಂಪನಿಗಳಲ್ಲಿ 13 ಖಾಸಗಿಯಾಗಿದ್ದು, ಈ ಎಲ್ಲವೂ ರಿಲಯನ್ಸ್ ಗ್ರೂಪ್, ಟಾಟಾ ಸನ್ಸ್, ಬಜಾಜ್ ಗ್ರೂಪ್ ಹಾಗೂ ಭಾರತಿ ಎಂಟರ್‌ಪ್ರೈಸಸ್ ನಂತಹ ಭಾರತದ ದೈತ್ಯ ಕಾರ್ಪೋರೇಟ್ ಉದ್ಯಮಗಳ ಒಡೆತನಕ್ಕೆ ಒಳಪಟ್ಟಂತಹವು.

ಬಿಜೆಪಿ ಯೇತರ ನೇತೃತ್ವದ ರಾಜ್ಯ ಸರ್ಕಾರಗಳು ಬರಪರಿಹಾರದಲ್ಲಿ ಕೇಂದ್ರ ರಾಜಕೀಯ ಮಾಡುತ್ತಿದೆ ಎಂದು ಆರೋಪಿಸಿವೆ. "2018–19 ರಲ್ಲಿ ಬರ ಪರಿಹಾರವಾಗಿ ಬಿಜೆಪಿ ಅಧಿಕಾರದಲ್ಲಿದ್ದ ಮಹಾರಾಷ್ಟ್ರ ವು 4700 ಕೋಟಿ ರೂ ಅನುದಾನ ಪಡೆದಿದೆ. ಆದರೆ ಕರ್ನಾಟಕ ಅತ್ಯಂತ ತೀವ್ರ ಹಾಗೂ ವಿಶಾಲ ವ್ಯಾಪ್ತಿಯಲ್ಲಿ ಬರಗಾಲದ ಬವಣೆಯಲ್ಲಿದ್ದರೂ ಕೇವಲ 949 ಕೋಟಿ ರೂ ಮಾತ್ರ ಪಡೆಯಿತು. ಇದು ಕಣ್ಣಿಗೆ ರಾಚುವ ತಾರತಮ್ಯ. ಬರಪರಿಹಾರದಲ್ಲಿ ರಾಜಕೀಯ ಮಾಡುವುದು ಅಮಾನವೀಯ" ಎನ್ನುತ್ತಾರೆ ಗ್ರಾಮೀಣಾಭಿವೃದ್ಧಿ ಮಂತ್ರಿ ಹಾಗೂ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೃಷ್ಣ ಭೈರೇಗೌಡ.

ಬಿಜೆಪಿ ಯ ಡಿ.ವಿ.ಸದಾನಂದ ಗೌಡ ಕೇಂದ್ರ ಸರ್ಕಾರದ ಸಾಂಖ್ಯಿಕ ಹಾಗೂ ಯೋಜನೆ ಮಂತ್ರಿಗಳು ಮತ್ತು ಮಾಜಿ ಮುಖ್ಯಮಂತ್ರಿ ಗಳು "ಇದೊಂದು ಸುಳ್ಳಿನ ಕಂತೆ. ಕಳೆದ ಐದು ವರ್ಷಗಳಲ್ಲಿ ಕೇಂದ್ರ ಸರ್ಕಾರ ಕರ್ನಾಟಕಕ್ಕೆ 2.4 ಲಕ್ಷ ಕೋಟಿ ಕೊಟ್ಟಿದೆ. ಇದು ಕಾಂಗ್ರೆಸ್ ಕೊಟ್ಟಿದ್ದಕ್ಕಿಂತ ಮೂರು ಪಟ್ಟು ಹೆಚ್ಚು "ಎಂದು ಆರೋಪಗಳನ್ನು ಅಲ್ಲಗಳೆಯುತ್ತಾರೆ.

ಬೆಲೆಗಳ ಸಮಸ್ಯೆ

ರೈತರ ಪ್ರಕಾರ ಇತ್ತೀಚಿನ ವರ್ಷಗಳಲ್ಲಿ ತಾವು ಪಡೆಯುವ ಕೃಷಿ ಉತ್ಪನ್ನಗಳ ದರದಲ್ಲಿ ಯಾವುದೇ ಬದಲಾವಣೆ ಇಲ್ಲ. ರೈತರಿಗೆ ಸಿಗುವ ಬೆಲೆಯ ಮಾಪಕವಾದ ಪ್ರಾಥಮಿಕ ಆಹಾರ ಸರಕಿನ ಸಗಟು ದರ ಸೂಚ್ಯಂಕ (WPI) ದ ಪ್ರಕಾರ 2013 –2014 ರಿಂದ ಸಗಟು ದರ ಸೂಚ್ಯಂಕ ಇಳಿಕೆ ಅಥವಾ ನಿಶ್ಚಲ ಸ್ಥಿತಿಯಲ್ಲಿದೆ. ಬೆಲೆಗಳ ಸಮಸ್ಯೆಗೆ ರಾಜಕಾರಣಿಗಳು ಆಗ್ಗಾಗ್ಗೆ ಆರೋಪಿಸುವಂತೆ ಮಳೆ ಕಾರಣ ಎನ್ನುತ್ತಿದ್ದರೆ, ಕರ್ನಾಟಕದ ಮಂಡ್ಯ, ಕೊಪ್ಪಳ ಹಾಗೂ ಕೋಲಾರ ಜಿಲ್ಲೆಗಳ ರೈತರ ಪ್ರಕಾರ ಕೃಷಿ ಬಿಕ್ಕಟ್ಟಿನ ಮೂಲ ಬೆಲೆಗಳಲ್ಲಿದೆ. ರೈತರು ಪಡೆಯುವ ದರ ವಿರಳವಾಗಿ ಲಾಭದಾಯಕವಾಗಿದ್ದು, ಅದರ ಏರಿಳಿತವು ರೈತರ ಜೀವನವನ್ನು ಹೆಚ್ಚು ಅನಿಶ್ಚಿತೆಗೊಳಿಸಿದೆ.

ಭತ್ತದ ಗದ್ದೆಯಲ್ಲಿ **ಪುಟ 14 ಕ್ಕೆ**

ಕಾರ್ಮಿಕ ವರ್ಗದ ಪ್ರಾಣ ಮಿತ್ರ – ಜನಶಕ್ತಿ ವಾರಪತ್ರಿಕೆಯು ವಿಶ್ವದ ಕಾರ್ಮಿಕ ವರ್ಗಕ್ಕೆ ಹಾರ್ದಿಕವಾದ ಮೇ ದಿನದ ಶುಭಾಶಯಗಳನ್ನು ಸಲ್ಲಿಸುತ್ತದೆ. ಕೂಲಿ ಗುಲಾಮಗಿರಿ ವಿರುದ್ಧ ಅವರು ನಡೆಸುತ್ತಿರುವ ಹೋರಾಟ ಯಶಸ್ವಿಯಾಗಲಿ ಎಂದು ಹಾರೈಸುತ್ತಾ ಕಾರ್ಮಿಕ ವರ್ಗದ ಐಕ್ಯತೆಯನ್ನು ಧ್ವಂಸಗೊಳಿಸಲು ಹೊಂಚು ಹಾಕುತ್ತಿರುವ ಮನುವಾದಿ, ಮತೀಯವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸುವ ಸಮರ ಬಲಗೊಳ್ಳಲಿ ಎಂದು ಹಾರೈಸುತ್ತಾ ಭಾರತದ ಕಾರ್ಮಿಕ ವರ್ಗದ ಸಮರಶೀಲ ಸಂಘಟನೆಯಾಗಿರುವ ಸಿಐಟಿಯುನ 'ಮೇ ದಿನದ ಪ್ರಣಾಳಿಕೆಯನ್ನು ಅವರ ಮುಂದಿಡುತ್ತದೆ.



ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ ಮೇ ದಿನ ಪ್ರಣಾಳಿಕೆ 2019

ಕಾರ್ಮಿಕ ವರ್ಗದ ಅಂತರರಾಷ್ಟ್ರೀಯ ಸೌಹಾರ್ದತೆಯ ಈ ದಿನ, ಮೇ ದಿನ, ಸಿಐಟಿಯು

ಜಗತ್ತಿನ ಎಲ್ಲಾ ದುಡಿಯುವ ಜನತೆಗೆ ನಲ್ಮೆಯ ಭ್ರಾತೃತ್ವದ ಶುಭಾಶಯಗಳನ್ನು ಹೇಳ ಬಯಸುತ್ತದೆ.

ಒಂದು ದಶಕಕ್ಕೂ ಹೆಚ್ಚಿನ ಕಾಲದಿಂದ ಮುಂದುವರೆದಿರುವ,ನಿರ್ದಿಷ್ಟವಾಗಿ ಬಂಡವಾಳಶಾಹಿ ವ್ಯವಸ್ಥೆಯ ಜಾಗತಿಕ ಬಿಕ್ಕಟ್ಟಿನ ನಂತರದಲ್ಲಿ, ನವ ಉದಾರೀಕರಣದ ನಿರಂತರವಾದ ದಾಳಿಗಳಿಂದ, ಅಪಾರ ಶ್ರಮದಿಂದ ಗಳಿಸಿರುವ ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಕಾರ್ಮಿಕರು ನಡೆಸಿರುವ ಹೋರಾಟಗಳ ಜೊತೆ ನಿಲ್ಲುತ್ತದೆ.

ಈ ಮೇ ದಿನದಂದು, ಸಿಐಟಿಯು

ವೆನಿಜುವೆಲಾ, ಸಿರಿಯಾ, ಪ್ಯಾಲೆಸ್ತೀನ್, ಇರಾಕ್, ಯೆಮೆನ್, ಆಫ್ಘನಿಸ್ತಾನ ಮತ್ತಿತರ ದೇಶಗಳ ಮೇಲೆ ಸಾಮ್ರಾಜ್ಯಶಾಹಿ ಪ್ರೇರಿತ ಮಧ್ಯಪ್ರವೇಶಗಳು, ವಿಧ್ವಂಸಕ ಚಟುವಟಿಕೆಗಳು, ದಾಳಿಗಳು ಮತ್ತು ಯುದ್ಧಗಳನ್ನು ಬಲವಾಗಿ ಖಂಡಿಸುತ್ತದೆ;ಈ ದೇಶಗಳಲ್ಲಿ ಅಮೇರಿಕದ ಸಾಮ್ರಾಜ್ಯಶಾಹಿ ಪಿತೂರಿಗಳನ್ನು ಎದುರಿಸುತ್ತಿರುವ ಜನತೆಗೆ ಮತ್ತು ಎಲ್ಲಾ ಪ್ರಗತಿಪರ ಶಕ್ತಿಗಳಿಗೆ ತನ್ನ ಸೌಹಾರ್ದತೆಯನ್ನು ವ್ಯಕ್ತಪಡಿಸುತ್ತದೆ; ಅಮೇರಿಕನ್ ಸಾಮ್ರಾಜ್ಯಶಾಹಿ ಜೊತೆ ಬಹಿರಂಗವಾಗಿ ಸೇರಿಕೊಂಡು ಪ್ಯಾಲೆಸ್ತೀನ್ ಪ್ರದೇಶಗಳನ್ನು ವಶಪಡಿಸಿಕೊಳ್ಳುವ ಇಸ್ರೇಲ್‌ನ ಪ್ರಯತ್ನಗಳನ್ನು ವಿರೋಧಿಸುತ್ತದೆ; 1967 ರ ಗಡಿಗಳೊಂದಿಗೆ ಮತ್ತು ಪೂರ್ವ ಜೆರೂಸಲೆಂ ರಾಜಧಾನಿಯಾಗಿರುವ ಸ್ವತಂತ್ರ ಹಾಗೂ ಸಾರ್ವಭೌಮ ಪ್ಯಾಲೆಸ್ತೀನ್ ರಾಜ್ಯವನ್ನು ಅಂಗೀಕರಿಸಲು ಒತ್ತಾಯಿಸುತ್ತದೆ.

ಬಂಡವಾಳಶಾಹಿ ಶೋಷಣಾ ವ್ಯವಸ್ಥೆಯನ್ನು ಸೋಲಿಸಲು ಮತ್ತು ಸಿಐಟಿಯು ದೃಢವಾಗಿ ಬದ್ಧವಾಗಿರುವ ಶೋಷಣಾರಹಿತ ಸಮಾಜವಾದಿ ವ್ಯವಸ್ಥೆಯನ್ನು ಜಾರಿಗೆ ತರಲು ಸಾಮ್ರಾಜ್ಯಶಾಹಿ ವಿರೋಧಿ ಹೋರಾಟವು ವರ್ಗ ಹೋರಾಟದ ಅವಿಭಾಜ್ಯ ಅಂಗವೆಂದು ದೃಢವಾಗಿ ಪ್ರತಿಪಾದಿಸುತ್ತದೆ.

ಸಮಾಜವಾದಿ ದೇಶಗಳಲ್ಲಿ ಸಮಾಜವಾದವನ್ನು ರಕ್ಷಿಸುತ್ತಿರುವ ಮತ್ತು ಯಾವುದೇ ಬಾಹ್ಯ ಮಧ್ಯಪ್ರವೇಶ ಮತ್ತು ಆಕ್ರಮಣಗಳಿಲ್ಲದೆ ತಮ್ಮ ಆಯ್ಕೆಯ ಸಮಾಜ ವ್ಯವಸ್ಥೆಯನ್ನು ಸ್ವತಂತ್ರವಾಗಿ ಮತ್ತು ಮುಕ್ತವಾಗಿ ಆಯ್ಕೆ ಮಾಡಿಕೊಳ್ಳಲು ಬಯಸುವ ಜನರೊಂದಿಗೆ ಸಿಐಟಿಯು ನಿಲ್ಲುತ್ತದೆ; ಅಮೇರಿಕನ್ ಸಾಮ್ರಾಜ್ಯಶಾಹಿ ಕುತಂತ್ರಗಳ ವಿರುದ್ಧ ಸಮಾಜವಾದಿ ಕ್ಯೂಬಾ ನಡೆಸುತ್ತಿರುವ ಹೋರಾಟದೊಂದಿಗೆ ತನ್ನ ಸೌಹಾರ್ದತೆಯನ್ನು ಪುನರ್‌ಪ್ರತಿಪಾದಿಸುತ್ತದೆ ಮತ್ತು ಅದರ ಮೇಲೆ ಅಕ್ರಮವಾಗಿ ಹೇರಲಾಗಿರುವ ನಿರ್ಬಂಧಗಳನ್ನು ತೆಗೆದುಹಾಕಲು ಒತ್ತಾಯಿಸುತ್ತದೆ.

ಅಂತರರಾಷ್ಟ್ರೀಯ ಹಣಕಾಸು ಮತ್ತು ಕಾರ್ಪೊರೇಟ್ ವರ್ಗಗಳ ಬೆಂಬಲದೊಂದಿಗೆ ನವಉದಾರವಾದದ ವಿರುದ್ಧದ ಐಕ್ಯ ಚಳುವಳಿಗಳನ್ನು ಮುರಿಯಲು, ಜಗತ್ತಿನ ವಿವಿಧ ಪ್ರದೇಶಗಳಲ್ಲಿ ಬಲಪಂಥೀಯ, ಹಿಂದುಳಿದ, ಪ್ರತಿಗಾಮಿ, ಜನಾಂಗೀಯ, ನವ–ಫ್ಯಾಸಿಸ್ಟ್ ಮತ್ತು ಭಯೋತ್ಪಾದಕ ಶಕ್ತಿಗಳ ಹೆಚ್ಚಳದ ಬಗ್ಗೆ ತನ್ನ ಗಂಭೀರವಾದ ಎಚ್ಚರಿಕೆಯನ್ನು ವ್ಯಕ್ತಪಡಿಸುತ್ತದೆ; ನವಉದಾರವಾದಕ್ಕೆ ಯಾವುದೇ ಪರ್ಯಾಯವನ್ನು ಒದಗಿಸದ ಆದರೆ ಜನತೆಯ ಅತೃಪ್ತಿಯನ್ನು ಬಳಸಿಕೊಂಡು ಅದನ್ನು fratricidal fights ಗೆ ತಿರುಗಿಸುವ ಮೂಲಕ ತಮ್ಮ ಕಾರ್ಪೊರೇಟ್ ಧಣಿಗಳಿಗೆ ಸೇವೆ ಸಲ್ಲಿಸುವ ಈ ಶಕ್ತಿಗಳನ್ನು ಎದುರಿಸುತ್ತಿರುವ ಜಗತ್ತಿನ ಎಲ್ಲಾ ಜನತೆಯೊಂದಿಗೆ ಅತ್ಯಂತ ದೃಢವಾದ ಐಕ್ಯತೆಯೊಂದಿಗೆ ಸಿಐಟಿಯು ನಿಲ್ಲುತ್ತದೆ; ಜನತೆಯ ಈ ಶತೃಗಳನ್ನು ಗುರುತಿಸಿ ಅವರನ್ನು ಪ್ರತ್ಯೇಕಿಸಲು ಮತ್ತು ಜನತೆಯ ಐಕ್ಯತೆಯನ್ನು ತನ್ನೆಲ್ಲಾ ಶಕ್ತಿಯೊಂದಿಗೆ ರಕ್ಷಿಸಿಕೊಳ್ಳಲು ಜಗತ್ತಿನ ಎಲ್ಲಾ ಭಾಗದ ಕಾರ್ಮಿಕ ವರ್ಗ ಮತ್ತು ದುಡಿಯುವ ಜನತೆಯಲ್ಲಿ ವಿನಂತಿ ಮಾಡುತ್ತದೆ.

ತಮ್ಮ ಹಕ್ಕುಗಳನ್ನು, ವೇತನಗಳನ್ನು, ದುಡಿಯುವ ಮತ್ತು ಜೀವಿಸುವ ಪರಿಸ್ಥಿತಿಗಳನ್ನು ಕಾಪಾಡಿಕೊಳ್ಳಲು "ವೆಚ್ಚ ಕಡಿತ ನೀತಿಗಳ" ವಿರುದ್ಧದ ಹೋರಾಟಗಳಲ್ಲಿ ಹೆಚ್ಚೆಚ್ಚು ಪಾಲ್ಗೊಳ್ಳುತ್ತಿರುವ ಮುಂದುವರಿದ ದೇಶಗಳಲ್ಲೂ ಒಳಗೊಂಡಂತೆ, ಜಗತ್ತಿನ ಕಾರ್ಮಿಕ ವರ್ಗವನ್ನು ಅಭಿನಂದಿಸುತ್ತದೆ; ನಮ್ಮ ದೇಶದಲ್ಲಿ ನವಉದಾರವಾದ ಪ್ರವೇಶಿಸಿದ ನಂತರ, ಜನವರಿ 8–9, 2019 ರಂದು ಎರಡು ದಿನಗಳು, ನಡೆದ 18 ನೇ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರವನ್ನು ಅಭೂತಪೂರ್ವವಾಗಿ ಯಶಸ್ವಿಗೊಳಿಸಿದ ಭಾರತದ ಕಾರ್ಮಿಕ ವರ್ಗವನ್ನು ಹೃದಯಪೂರ್ವಕವಾಗಿ ಅಭಿನಂದಿಸುತ್ತದೆ; ಮುಷ್ಕರಕ್ಕೆ ಸೌಹಾರ್ದ ಬೆಂಬಲ ನೀಡಿದ ರೈತರು, ಕೃಷಿ ಕೂಲಿಕಾರರು ಮತ್ತು ಎಲ್ಲಾ ಪ್ರಗತಿಪರ ಜನವಿಭಾಗಗಳಿಗೆ ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತದೆ; ರಕ್ಷಣಾ ಉತ್ಪಾದನೆ, ಟೆಲಿಕಾಂ ಮುಂತಾದವು ಸೇರಿದಂತೆ ಅಲ್ಲಿನ ಕಾರ್ಮಿಕರು ನಡೆಸಿದ ಮೂರು ದಿನಗಳ ಮುಷ್ಕರಕ್ಕೆ ಬೆಂಬಲ; ದೇಶದ ವಿವಿಧ ಭಾಗಗಳಲ್ಲಿರುವ ಡೈಕಿನ್, ಟೊಯೋಟ, ಯಮಾಹಾ, ಪ್ರಿಕಾಲ್, ಮುಂತಾದ ಹಲವು ಬಹುರಾಷ್ಟ್ರೀಯ ಕಂಪನಿ ಘಟಕಗಳಲ್ಲಿನ ಹೋರಾಟ ನಿರತ ಕಾರ್ಮಿಕರಿಗೆ ಸೌಹಾರ್ದತೆಯನ್ನು ನೀಡುತ್ತದೆ.

ಪಶ್ಚಿಮ ಬಂಗಾಳ, ತ್ರಿಪುರ, ಕೇರಳ ಮತ್ತಿತರ ರಾಜ್ಯಗಳಲ್ಲಿ ತಮ್ಮ ಮೂಲ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಆಳುವ ವರ್ಗಗಳು ನಡೆಸುತ್ತಿರುವ ದಾಳಿಗಳನ್ನು ಧೈರ್ಯವಾಗಿ ಎದುರಿಸುತ್ತಿರುವ ಅಲ್ಲಿನ ಕಾರ್ಮಿಕ ವರ್ಗ ಮತ್ತು ಜನತೆಯನ್ನು ಗೌರವಿಸುತ್ತದೆ. ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸಿನ ಮತ್ತು ತ್ರಿಪುರಾದಲ್ಲಿ ಬಿಜೆಪಿಯ ಗೂಂಡಾಗಳು ಜನರ ಮೇಲೆ, ಮುಖ್ಯವಾಗಿ ಎಡ ಬೆಂಬಲಿಗರ ಮೇಲೆ, ದಾಳಿಗಳನ್ನು ನಡೆಸುತ್ತಿದ್ದಾರೆ; ಮುಕ್ತವಾಗಿ ಮತದಾನ ಮಾಡಲಾರದಂತೆ ಜನತೆಯನ್ನು ನಿರ್ಬಂಧಿಸಿ ರಾಜ್ಯ ಸರ್ಕಾರಗಳು ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನು ಅಪಹಾಸ್ಯಕ್ಕೀಡು ಮಾಡಿವೆ. ಹಲವಾರು ಎಡ ಕಾರ್ಯಕರ್ತರು ಮತ್ತು ಬೆಂಬಲಿಗರನ್ನು ದೈಹಿಕವಾಗಿ ದಾಳಿ ಮಾಡಲಾಗಿದೆ, ಗಾಯಗೊಳಿಸಲಾಗಿದೆ ಮತ್ತು ಕೊಲ್ಲಲಾಗಿದೆ. ಇದೇನೇ ಆದರೂ ಈ ರಾಜ್ಯಗಳ ಕಾರ್ಮಿಕ ವರ್ಗವು ಇಂತಹ ದಾಳಿಗಳನ್ನು ಹೆಚ್ಚೆಚ್ಚು ಪ್ರತಿರೋಧಿಸುತ್ತಿದೆ. ಸುಪ್ರೀಂ ಕೋರ್ಟ್ ಸೇರಿದಂತೆ ಸಂವಿಧಾನಿಕ ಸಂಸ್ಥೆಗಳನ್ನು ಕಡೆಗಣಿಸಿ ಬಿಜೆಪಿಯು ಕೇರಳದಲ್ಲಿ ತನ್ನ ಪ್ರತಿಗಾಮಿ ಮತ್ತು ಹಿಮ್ಮುಖಿ "ಹಿಂದುತ್ವ" ಸಿದ್ಧಾಂತವನ್ನು ಅವಕಾಶವಾದಿತನದಿಂದ ಮುನ್ನೆಲೆಗೆ ತರಲು ಪ್ರಯತ್ನಿಸುತ್ತಿದೆ. ಎಡ ಕಾರ್ಯಕರ್ತರ ಮೇಲೆ ದಾಳಿ ಮಾಡಲು ಮತ್ತು ಕೊಲ್ಲಲು, ದ್ವೇಷ ಮತ್ತು ಹಿಂಸೆಯನ್ನು ಹಬ್ಬಿಸಲು ಆರ್‌ಎಸ್‌ಎಸ್ ಗೂಂಡಾಗಳು ಪ್ರಯತ್ನಿಸುತ್ತಿದ್ದಾರೆ.

ದೇಶದ ವಿವಿಧ ಭಾಗಗಳಲ್ಲಿ, ಮುಖ್ಯವಾಗಿ ಬಿಜೆಪಿ ಆಡಳಿತ ರಾಜ್ಯಗಳಲ್ಲಿ, ದಲಿತರು ಮತ್ತು ಅಲ್ಪಸಂಖ್ಯಾತರ ಮೇಲೆ ಹೆಚ್ಚುತ್ತಿರುವ ದಾಳಿಗಳ ಬಗ್ಗೆ ಸಿಐಟಿಯು ಆಕ್ರೋಶವನ್ನು ವ್ಯಕ್ತಪಡಿಸುತ್ತದೆ; ಒಂದು ಕಡೆ ದಲಿತರು, ಆದಿವಾಸಿಗಳು ಮತ್ತು ಮಹಿಳೆಯರನ್ನು ದಮನಿಸುವ, ಪ್ರತಿಗಾಮಿಯಾದ ಮತ್ತು ಅನುವಂಶಿಕವಾದ ಮನುಸ್ಮೃತಿಗೆ ಸೈದ್ಧಾಂತಿಕವಾಗಿ ಬದ್ಧವಾಗಿರುವ ಬಿಜೆಪಿ ಮತ್ತು ಆರ್‌ಎಸ್‌ಎಸ್, ಕೇವಲ ಚುನಾವಣಾ ಲಾಭಕ್ಕಾಗಿ ದಲಿತರನ್ನು ಓಲೈಸುತ್ತಿದೆ.

ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತ ಕೋಮುವಾದ ಮತ್ತು ಮೂಲಭೂತವಾದಗಳು ಪರಸ್ಪರ ಪೂರಕವಾಗಿ ಬೆಳೆಯುತ್ತವೆ ಎಂದು ಸಿಐಟಿಯು ಭಾವಿಸುತ್ತದೆ; ಕೋಮುವಾದಗಳು ಯಾವುದೇ ಬಣ್ಣದವಾಗಲೀ ಬಾವುಟದವಾಗಲೀ, ಅವು ಜನತೆಯನ್ನು ವಿಭಜಿಸುತ್ತವೆ, ಅವರ ಐಕ್ಯತೆಯನ್ನು ಹಾಳು ಮಾಡುತ್ತದೆ, ತಮ್ಮ ದಿನ ನಿತ್ಯದ ನೈಜ ಸಮಸ್ಯೆಗಳಿಂದ ಗಮನವನ್ನು ಬೇರೆಡೆ ಹರಿಸುತ್ತದೆ, ತಮ್ಮ ನಿಜವಾದ ಶತ್ರುವಿನ – ನವಉದಾರವಾದ ಮತ್ತು ಶೋಷಣಾ ವ್ಯವಸ್ಥೆ – ವಿರುದ್ಧದ ಹೋರಾಟವನ್ನು ದುರ್ಬಲಗೊಳಿಸುತ್ತದೆ; ಅಂತಿಮವಾಗಿ ಎಲ್ಲಾ ರೀತಿಯ ಕೋಮುವಾದಗಳೂ ಶೋಷಣೆ ಮಾಡುವ ವರ್ಗಗಳ ಹಿತ ಕಾಪಾಡುತ್ತವೆ.

ಸರ್ಕಾರಗಳ ಕಾರ್ಮಿಕ ವಿರೋಧಿ ನೀತಿಗಳನ್ನು ಬಯಲು ಮಾಡುತ್ತಾ, ಕಾರ್ಮಿಕರ ಐಕ್ಯ ಹೋರಾಟಗಳನ್ನು ಮತ್ತು ದೇಶದ ಜಾತ್ಯತೀತ ಮೌಲ್ಯಗಳನ್ನು ರಕ್ಷಿಸುತ್ತಾ, ಚರ್ಚೆಯ ವಿಷಯಗಳನ್ನು ಜೀವನದ ಪ್ರಶ್ನೆಗಳ ಸುತ್ತಲೇ ಜೀವಂತವಾಗಿರಿಸುತ್ತಾ, ಈ ಎಲ್ಲಾ ರಾಜ್ಯಗಳಲ್ಲಿ ಕಾರ್ಮಿಕರ ಐಕ್ಯತೆಯನ್ನು ಕಾಪಾಡಲು ಬದ್ಧತೆಯಿಂದ ಮತ್ತು ನಿರಂತರವಾಗಿ ಶ್ರಮಿಸುತ್ತಿರುವ ತನ್ನ ಕಾರ್ಯಕರ್ತರನ್ನು ಅಭಿನಂದಿಸುತ್ತದೆ.

ದುಡಿಯುವ ಜನತೆಯ ಬೆವರು ಮತ್ತು ರಕ್ತದಿಂದ ಉತ್ಪತ್ತಿಯಾದ ಸಂಪತ್ತು ಕೆಲವೇ ಜನರ ಬಳಿ ಕೇಂದ್ರೀಕರಣವಾಗುತ್ತಾ ಅಸಮಾನತೆಗಳು ಹೆಚ್ಚಾಗುತ್ತಿರುವ ಬಗ್ಗೆ ತೀವ್ರವಾದ ಆತಂಕವನ್ನು ಸಿಐಟಿಯು ವ್ಯಕ್ತಪಡಿಸುತ್ತದೆ; ದುಡಿಯುವ ಜನರ ಮೇಲಿನ ಶೋಷಣೆಯ ಹೆಚ್ಚಳ, ಚಮಚಾಗಿರಿ, ತೆರಿಗೆ ವಂಚನೆ, ಭೂಮಿ–ಅರಣ್ಯ–ಗಣಿಗಳು–ನೀರು ಮುಂತಾದವುಗಳಿಂದ ಬಡ ರೈತರು, ಆದಿವಾಸಿಗಳು ಮತ್ತಿತರರನ್ನು ಹೊರದೂಡುವ ಮೂಲಕ ಸಾರ್ವಜನಿಕ ಆಸ್ತಿಗಳು ಮತ್ತು ನೈಸರ್ಗಿಕ ಸಂಪನ್ಮೂಲಗಳ ಕಬಳಿಕೆಗಳ ಮೂಲಕ ಈ ಸಂಪತ್ತನ್ನು ಲೂಟಿ ಮಾಡಲಾಗುತ್ತಿದೆ.

"ಯಾರು ಸಂಪತ್ತನ್ನು ಸೃಷ್ಟಿಸುತ್ತಾರೋ ಅವರಿಗೇ ಅದು ಸೇರಬೇಕು" ಎಂಬ ಘೋಷಣೆಯೊಂದಿಗೆ ಈ ವರ್ಷದ ಮೇ ದಿನಾಚರಣೆಯನ್ನು ಆಚರಿಸಬೇಕೆಂಬ ಕಾರ್ಮಿಕ ಸಂಘಗಳ ವಿಶ್ವ ಒಕ್ಕೂಟ (WFTU) ಕರೆಯನ್ನು ಸಿಐಟಿಯುಪೂರ್ಣವಾಗಿ ಬೆಂಬಲಿಸುತ್ತದೆ; ಮತ್ತಷ್ಟು ವರ್ಗ ದೃಷ್ಟಿಕೋನದೊಂದಿಗೆ ಬಂಡವಾಳಶಾಹಿ ಶೋಷಣಾ ವ್ಯವಸ್ಥೆಯ ವಿರುದ್ಧ ಸಂಘರ್ಷವನ್ನು ಗಟ್ಟಿಗೊಳಿಸುವ ತನ್ನ ಪ್ರಯತ್ನಗಳ ಭಾಗವಾಗಿ WFTU ಯನ್ನು ಗಟ್ಟಿಗೊಳಿಸಲು ಸಿಐಟಿಯು ಬದ್ಧವಾಗಿದೆ.

ಮಾನವ ಕುಲದ ಸಾಮೂಹಿಕ ಪ್ರಯತ್ನಗಳ ಮೂಲಕ ಸಾಧಿಸಲಾದ ಅಪಾರ ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಗಳನ್ನು ಕೆಲವೇ ದೇಶಗಳು ಮತ್ತು ಕೆಲವೇ ಕಾರ್ಪೊರೇಟ್‌ಗಳು ಕಬಳಿಸಿವೆ ಮತ್ತು ಇವುಗಳನ್ನು ಜನತೆಯ ಅನುಕೂಲಕ್ಕಾಗಿ ಬಳಸುತ್ತಿಲ್ಲ ಬದಲಿಗೆ ತಮ್ಮ ಲಾಭಗಳನ್ನು ಹೆಚ್ಚಿಸಿಕೊಳ್ಳಲು ಮತ್ತು ದುಡಿಯುವ ಜನತೆಯನ್ನು ದಿವಾಳಿ ಮಾಡಲು ಬಳಸಲಾಗುತ್ತಿದೆ. ಇಂತಹ ಲಾಭಕೋರ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಸಿಐಟಿಯು ತನ್ನ ಆಕ್ರೋಶವನ್ನು ವ್ಯಕ್ತಪಡಿಸುತದೆ. ಈ ರೀತಿಯಾಗಿ ಸಂಪತ್ತು ಕೆಲವರ ಬಳಿಯೇ ಸೇರಿಕೊಂಡಿರುವಾಗ, ಮಿಲಿಯಾಂತರ ಜನರು ನಿರುದ್ಯೋಗ, ಬಡತನ, ಅನಕ್ಷರತೆ, ಅನಾರೋಗ್ಯ, ನಿರ್ವಸತಿ, ಮೂಲ ಸೌಲಭ್ಯಗಳ ಕೊರತೆಯಿಂದ ನರಳುತ್ತಿರುವುದು ಮಾನವ ಕುಲವೇ ನಾಚಿಕೆ ಪಡುವ ವಿಷಯವಾಗಿದೆ; ಆದ್ದರಿಂದಾಗಿ, ಇಂತಹ ಅಮಾನವೀಯ ಬಂಡವಾಳಶಾಹಿ ವ್ಯವಸ್ಥೆಯು ಮುಂದುವರಿಯುವ ಹಕ್ಕಿಲ್ಲ. ಇದನ್ನು ಮುಂದುವರಿಯಲು ಬಿಡಬಾರದು.

ಈ ಮೇ ದಿನ ಸಂದರ್ಭದಲ್ಲಿ

ಸಿಐಟಿಯು ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತುಹಾಕುವಲ್ಲಿ ಕಾರ್ಮಿಕ ವರ್ಗದ ಪಾತ್ರದ ಕುರಿತು ಕಾರ್ಮಿಕರ ಪ್ರಜ್ಞೆಯನ್ನು ಎತ್ತರಿಸಲು ಮತ್ತು ಎಲ್ಲಾ ಶೋಷಣೆಯನ್ನು ಕೊನೆಗಾಣಿಸುವ ಅಂತಿಮ ಸಂಘರ್ಷಕ್ಕಾಗಿ ಕಾರ್ಮಿಕ ವರ್ಗವನ್ನು ಸಜ್ಜುಗೊಳಿಸಲು ಪ್ರತಿಜ್ಞೆಗೈಯುತ್ತದೆ.

ಈ ಮೇ ದಿನವು, ಭಾರತದ ಸಂಸತ್ತಿಗೆ ನಡೆಯುತ್ತಿರುವ ಚುನಾವಣೆಗಳ ಮಧ್ಯದಲ್ಲಿ ಬಂದಿದೆ. ಆದ್ದರಿಂದ:

ಪುಟ 10 ಕ್ಕೆ

ಮಾಸ್ಟರ್ ಹಿರಣ್ಣಯ್ಯ ಇನ್ನಿಲ್ಲ



ವೃತ್ತಿ ರಂಗಭೂಮಿಯಲ್ಲಿ ತಮ್ಮದೇ ಛಾಪು ಮೂಡಿಸಿದ್ದ ಮಾಸ್ಟರ್ ಹಿರಣ್ಣಯ್ಯ ಇನ್ನಿಲ್ಲ. 85ರ ಇಳಿವಯಸ್ಸಿನಲ್ಲಿ ಬೆಂಗಳೂರಿನಲ್ಲಿ ಅವರು ಮೇ 2 ರಂದು ನಿಧನರಾದರು.

ಮಾತಿನ ಮೂಲಕವೇ ಒಂದು ಹೊಸ ರಂಗಪ್ರಕಾರ ಸೃಷ್ಟಿಸಿದ ಕನ್ನಡ ರಂಗಭೂಮಿಯ ಪ್ರತಿಭಾವಂತ ಮಾಸ್ಟರ್ ಹಿರಣ್ಣಯ್ಯ. ಹತ್ತು ಸಾವಿರಕ್ಕೂ ಅಧಿಕ ಪ್ರದರ್ಶನ ಕಂಡ ಅವರ 'ಲಂಚಾವತಾರ' ನಾಟಕ ಕನ್ನಡ ವೃತ್ತಿರಂಗಭೂಮಿಯಲ್ಲಿ ದಾಖಲೆಯನ್ನೇ ಸೃಷ್ಟಿಸಿದೆ. ಮಾಸ್ಟರ್ ಹಿರಣ್ಣಯ್ಯನವರ ತಂದೆ ಕೆ. ಹಿರಣ್ಣಯ್ಯನವರದು ರಂಗಭೂಮಿಯಲ್ಲಿ ದೊಡ್ಡ ಹೆಸರು. ಅವರು ಹಿರಣ್ಣಯ್ಯ ಮಿತ್ರಮಂಡಳಿ ಸ್ಥಾಪಿಸಿ 'ದೇವದಾಸಿ', 'ಮಕ್ಮಲ್ ಟೋಪಿ', 'ಎಚ್ಚಮ ನಾಯಕ', 'ಪಂಗನಾಮ' ಎಂಬ ವಿನೂತನ ನಾಟಕಗಳ ಪ್ರಯೋಗದ ಮೂಲಕ ಕನ್ನಡ ವೃತ್ತಿರಂಗಭೂಮಿಯಲ್ಲಿ ಸಂಚಲನವನ್ನೇ ಸೃಷ್ಟಿಸಿದ್ದರು. ಅವರ ನಿಧನದ ನಂತರ ತಂದೆಯ ಮಂಡಳಿಯನ್ನು ಮತ್ತು ಅವರ ನಾಟಕಗಳನ್ನು ಮುಂದುವರೆಸಿದ ಮಾಸ್ಟರ್ 1958ರಲ್ಲಿ ಸಿದ್ಧ ಪಡಿಸಿದ 'ಲಂಚಾವತಾರ'ದ ಮೂಲಕ ತಮ್ಮ ಹೊಸ ಛಾಪು ಮೂಡಿಸಿದರು. 'ಭ್ರಷ್ಟಾಚಾರ', ಕಪಿಮುಷ್ಟಿ, ಸನ್ಯಾಸಿ ಸಂಸಾರ, ಲಾಟರಿ ಸರ್ಕಾರ – ಅವರ ಇತರ ಜನಪ್ರಿಯ ನಾಟಕಗಳು.

ಅವರ ನಾಟಕಗಳು ಸಾವಿರಾರು ಪ್ರದರ್ಶನಗಳು ಕಾಣುತ್ತಿದ್ದರೂ ಪ್ರತಿ ದಿನ ಅಂದಿನ ವಿದ್ಯಮಾನಗಳ ಬಗ್ಗೆ ಅವರ ಟೀಕೆ ಮೂಲಕ ಹೊಸ ಪ್ರಯೋಗದಂತೆ ಇರುತ್ತಿತ್ತು. ಅವರ ನಾಟಕಗಳಲ್ಲಿ ರಾಜಕಾರಣಿಗಳ ಬಗ್ಗೆ ಮೊನಚಾದ ವ್ಯಂಗ್ಯ, ಟೀಕೆ ಜನಪ್ರಿಯವಾಗಿತ್ತು. ಅಂದಿನ ಸರಕಾರಗಳನ್ನು ಎದುರು ಹಾಕಿಕೊಳ್ಳಲು ಅವರು ಹಿಂಜರಿಯಲಿಲ್ಲ. 1962ರಲ್ಲಿ ಅಂದಿನ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಲಂಚಾವತಾರ'ದ ವಿರುದ್ಧ ತಡೆಯಾಜ್ಞೆ ಹೊರಡಿಸಿದ್ದರಂತೆ. ಆದರೆ ಕೋರ್ಟನಲ್ಲಿ ಎರಡು ತಿಂಗಳು ವಾದ-ವಿವಾದ ನಡೆದ ನಂತರ ಹೈಕೋರ್ಟ್ ತಡೆಯಾಜ್ಞೆ ಅರ್ಜಿಯನ್ನು ವಜಾಗೊಳಿಸಿತು. ಅದೇ ರೀತಿ ತುರ್ತು ಪರಿಸ್ಥಿತಿಯಲ್ಲಿ 'ಕಪಿಮುಷ್ಟಿ' ನಾಟಕಕ್ಕೂ ನಿಷೇಧಾಜ್ಞೆ ವಿಧಿಸಿದರು. ಆದರೂ ಹಿರಣ್ಣಯ್ಯ ಕಂಪನಿಯ ಹೊರಗಡೆ ಇಡುತ್ತಿದ್ದ ಬ್ಯಾನರ್‌ಗಳಲ್ಲಿ ಇಂದು 'ದೇವದಾಸಿ', 'ಎಚ್ಚಮ ನಾಯಕ' ಎಂದೆಲ್ಲಾ ಬರೆದು ಒಳಗೆ 'ಕಪಿಮುಷ್ಟಿ' ನಾಟಕವನ್ನು ಪ್ರದರ್ಶಿಸುತ್ತಿದ್ದರಂತೆ.

ರಂಗಭೂಮಿಗೆ ಹಿರಣ್ಣಯ್ಯನವರ ಸೇವೆಯನ್ನು ಪರಿಗಣಿಸಿ ಕನ್ನಡ ರಂಗಭೂಮಿಯ ಅತ್ಯುನ್ನತ ಗುಬ್ಬಿವೀರಣ್ಣ, ಕೇಂದ್ರ ಸಂಗೀತ ನಾಟಕ ಅಕಾಡೆಮಿ, ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಆಳ್ವಾಸ್ ನುಡಿಸಿರಿ, ಕೆ.ವಿ.ಶಂಕರೇಗೌಡ ಪ್ರಶಸ್ತಿ ಮುಂತಾದವು ಸಂದಿವೆ.

ಅಭಿಮಾನಿಗಳು ಅವರನ್ನು 'ನಿಜವಾದ ವಿರೋಧ ಪಕ್ಷದ ನಾಯಕ' 'ಭ್ರಷ್ಟಾಚಾರ'ದ ವಿರುದ್ಧ ಚಳುವಳಿಗಾರ', 'ರಾಜಕೀಯ ವ್ಯಂಗ್ಯದ ನಾಟಕಕಾರ' ಎಂದೆಲ್ಲಾ ಹೊಗಳಿದ್ದಾರೆ. ಆದರೆ ಅವರ ರಾಜಕೀಯ ಧೋರಣೆಯ ಬಗ್ಗೆ ಟೀಕೆಗಳೂ ಇವೆ. ಅವರ ರಾಜಕೀಯ ಮಧ್ಯಮ ವರ್ಗದ ರಾಜಕೀಯ ಧೋರಣೆಯಂತಿತ್ತು. ಭ್ರಷ್ಟಾಚಾರ ಮತ್ತು ಕೆಟ್ಟ ರಾಜಕಾರಣಿಗಳ ಮೇಲೆ ಮಾತ್ರ ಅವರ ಒತ್ತು ಇತ್ತು. ಅವರ ಕಾಲದಲ್ಲೇ ಬಂದ ಸಾಮಾಜಿಕ-ಆರ್ಥಿಕ ನ್ಯಾಯದ ಮತ್ತಿತರ ಚಳುವಳಿಗಳು ಅವರನ್ನು ತಟ್ಟಲೇ ಇಲ್ಲ. ಕೊನೆಕೊನೆಗಂತೂ ಅವರು ಬಲಪಂಥೀಯ ಹಿಂದುತ್ವ ರಾಜಕಾರಣದ ಪರ ಮಾತನಾಡುತ್ತಿದ್ದರು. ಅವರ ನಾಟಕದ ಶೈಲಿ ಸಹ 'ಒನ್-ಮ್ಯಾನ್ ಶೋ' ಮತ್ತು 'ವಾಚಾಳಿತನ' ಎಂಬ ಟೀಕೆಗೊಳಗಾಗಿದೆ. ●

ಮೇ ದಿನ ಪ್ರಣಾಳಿಕೆ 2019.... ಪುಟ 9 ರಿಂದ

ಕಾರ್ಪೊರೇಟ್ ನಿರ್ದೇಶಿತ ನವಉದಾರವಾದಿ ಅಜೆಂಡಾವನ್ನು ಮತ್ತು ಜೊತೆಯಲ್ಲೇ ಆರ್‌ಎಸ್‌ಎಸ್ ಪ್ರೇರಿತ ಕೋಮುವಾದಿ ಮತ್ತು ವಿಭಜನಕಾರಿ ನೀತಿಗಳನ್ನು ಆಕ್ರಮಣಕಾರಿಯಾಗಿ ಜಾರಿ ಮಾಡುತ್ತಿರುವ ಕಾರ್ಮಿಕ-ವಿರೋಧಿ, ಜನತೆಯ-ವಿರೋಧಿ ಮತ್ತು ದೇಶ-ವಿರೋಧಿ ಬಿಜೆಪಿಯನ್ನು ನಿರ್ಣಾಯಕವಾಗಿ ಸೋಲಿಸಬೇಕಾಗಿದೆ. ಸಂಸತ್ತಿನಲ್ಲಿ ದುಡಿಯುವ ಜನತೆಯ ನಿಜವಾದ ಮಿತ್ರ ಎಡ ಪಕ್ಷಗಳ ಅಸ್ತಿತ್ವನ್ನು ಗಟ್ಟಿಗೊಳಿಸಲು ದೇಶದ ಕಾರ್ಮಿಕ ವರ್ಗ, ಎಲ್ಲಾ ದುಡಿಯುವ ಜನತೆ, ಪ್ರಗತಿಪರ, ದೇಶಪ್ರೇಮಿಗಳಿಗೆ ಸಿಐಟಿಯು ಕರೆ ನೀಡುತ್ತದೆ.

ಮೋದಿಯ ಬಿಜೆಪಿ ನೇತೃತ್ವದ ಸರ್ಕಾರ ತನ್ನ ಐದು ವರ್ಷಗಳ ಆಡಳಿತದಲ್ಲಿ ದೇಶದ ಹಿತಾಸಕ್ತಿಯನ್ನು ದೇಶೀ ಮತ್ತು ವಿದೇಶೀ ಲಾಭಕೋರ ಕಾರ್ಪೊರೇಟ್‌ಗಳ ಪದತಲಗಳಲ್ಲಿ ಅಡವಿಟ್ಟಿದೆ. ಈ ಸರ್ಕಾರ ದೇಶೀಯ ಉತ್ಪಾದನಾ ಸಾಮರ್ಥ್ಯಗಳನ್ನು ನಾಶ ಮಾಡಲು ಸಕ್ರಿಯವಾಗಿ ಕೆಲಸ ಮಾಡುತ್ತಿದೆ. ಸಾಮ್ರಾಜ್ಯಶಾಹಿ ಸ್ವಾಮ್ಯದ ವಿದೇಶೀ ಬಂಡವಾಳದ ಮೇಲೆ ದೇಶ ನಿರಂತರವಾಗಿ ಅವಲಂಬನೆಯಾಗುವಂತೆ ರಕ್ಷಣಾ ಉತ್ಪಾದನೆಯಂತಹ ಮೂಲ ಮತ್ತು ವ್ಯೂಹಾತ್ಮಕ ಕ್ಷೇತ್ರವನ್ನೂ ನಾಶ ಮಾಡುತ್ತಿದೆ. ನಮ್ಮ ಸಾರ್ವಜನಿಕ ವಲಯದ ಉದ್ದಿಮೆಗಳು, ನಮ್ಮ ನೈಸರ್ಗಿಕ ಸಂಪನ್ಮೂಲಗಳು, ನಮ್ಮ ಭೂಮಿ, ನಮ್ಮ ಗಣಿಗಳು, ನಮ್ಮ ಅರಣ್ಯಗಳು, ನಮ್ಮ ಸಮುದ್ರಗಳು ಎಲ್ಲವನ್ನೂ ದೇಶೀ ಮತ್ತು ವಿದೇಶೀ ದೊಡ್ಡ ಬಂಡವಾಳದಾರರಿಗೆ ಮನಸ್ಸಿಗೆ ಬಂದಂತೆ ನೀಡಲಾಗುತ್ತಿದೆ. ಮತ್ತೊಂದು ಕಡೆ ನಮ್ಮ ರೈತರು, ನಮ್ಮ ಆದಿವಾಸಿಗಳು, ನಮ್ಮ ಮೀನುಗಾರರು ಮತ್ತು ನಮ್ಮ ಕಾರ್ಮಿಕರು ತಮ್ಮ ಜೀವನದ ಮೂಲಗಳನ್ನು ಕಳೆದುಕೊಳ್ಳುತ್ತಿದ್ದಾರೆ.

ಜಾಗತಿಕವಾಗಿ ನವಉದಾರವಾದವು ಹೆಚ್ಚೆಚ್ಚು ತಿರಸ್ಕಾರಕ್ಕೆ ಒಳಗಾಗುತ್ತಿದ್ದರೆ, ಬಿಜೆಪಿ ಸರ್ಕಾರವು ಅಂತರರಾಷ್ಟ್ರೀಯ ಹಣಕಾಸು ನಿರ್ದೇಶನಗಳ ಪ್ರಕಾರ ಇದನ್ನು ಹೆಚ್ಚೆಚ್ಚು ಆಕ್ರಮಣಕಾರಿಯಾಗಿ ಮುಂದುವರಿಸುತ್ತಿದೆ. "ಜನತೆಯ ಮತ್ತು ದೇಶದ ಸಂಪನ್ಮೂಲಗಳ ಲೂಟಿ ಅನುಕೂಲ"ಕ್ಕೆ ಉತ್ತೇಜನ ನೀಡುತ್ತಾ, "ವ್ಯಾಪಾರ ಮಾಡಲು ಅನುಕೂಲ"ವನ್ನು ಉತ್ತಮಪಡಿಸಲು ದೃಢ ಮನಸ್ಸಿನಿಂದ ಮುನ್ನುಗ್ಗುತ್ತಿದೆ. ಕಾರ್ಮಿಕರ ಮೂಲಭೂತವಾದ ಕಾರ್ಮಿಕ ಮತ್ತು ಸಂಘಟನೆಯ ಹಕ್ಕುಗಳು, ಜನತೆಯ ಪ್ರಜಾಸತ್ತಾತ್ಮಕ ಮತ್ತು ಸಂವಿಧಾನಿಕ ಹಕ್ಕುಗಳು ತೀವ್ರವಾದ ದಾಳಿಗೆ ಒಳಗಾಗಿವೆ. ಕಾರ್ಮಿಕರ ಮೇಲೆ ಗುಲಾಮ ರೀತಿಯ ಷರತ್ತುಗಳನ್ನು ಹೇರಲಾಗುತ್ತಿದೆ. ವಿರೋಧದ ಧ್ವನಿಗಳನ್ನು ಕಾಲಿನಡಿ ತುಳಿದು ಹಾಕಲಾಗುತ್ತಿದೆ. ಮಾನವ ಹಕ್ಕುಗಳ ಕಾರ್ಯಕರ್ತರನ್ನು ಬೆದರಿಸುವುದು, ಹಲ್ಲೆ, ಜೈಲು, ಕೊಲೆಗಳನ್ನೂ ಸಹ ಮಾಡಲಾಗುತ್ತಿದೆ.

ಬಿಜೆಪಿ ಆಡಳಿತದಲ್ಲಿ ಸತತವಾಗಿ ತೀವ್ರಗೊಂಡಿರುವ ಸಾಮ್ರಾಜ್ಯಶಾಹಿ ಪ್ರೇರಿತ ನವಉದಾರವಾದದ ನೀತಿಗಳಿಂದಾಗಿ:

- ಉದ್ಯೋಗ ರಹಿತ ಮತ್ತು ಉದ್ಯೋಗ ಕಡಿತ ಬೆಳವಣಿಗೆ
- ಹೇಳಬಹುದಾದದ ಹೊಸ ಉದ್ಯೋಗ ಸೃಷ್ಟಿಸುವ ಖಾಸಗಿ ಹೂಡಿಕೆ ಇಲ್ಲ; ಕೈಗಾರಿಕೆಗಳು ಮುಚ್ಚುತ್ತಿವೆ.
- ಅಪಾಯಕಾರಿ ಮಟ್ಟಕ್ಕೆ ನಿರುದ್ಯೋಗದ ಹೆಚ್ಚಳ, ಅದರಲ್ಲೂ ಮುಖ್ಯವಾಗಿ ನಮ್ಮ ಯುವಜನರ ನಡುವೆ; ಇಂದಿನ ನಿರುದ್ಯೋಗ ಕಳೆದ 45 ವರ್ಷಗಳಲ್ಲೇ ಅತ್ಯಂತ ಹೆಚ್ಚು.
- ಗೌರವದ, ಘನತೆಯ ಮತ್ತು ಖಾಯಂ ಉದ್ಯೋಗಗಳ ಕಣ್ಮರೆ
- ಬಹುತೇಕ ಕಾರ್ಮಿಕರ ವೇತನಗಳಲ್ಲಿ ಸ್ಥಗಿತತೆ ಮತ್ತು ಕುಸಿತ ಕೂಡಾ.
- ವೇತನ, ಆದಾಯ ಮತ್ತು ಸಂಪತ್ತಿನಲ್ಲಿ ಹೆಚ್ಚಿದ ಅಸಮಾನತೆ



- ಮುಂದುವರಿದ ರೈತರ ಆತ್ಮಹತ್ಯೆಗಳು ಮತ್ತು ಗ್ರಾಮೀಣ ಯಾತನೆ
- ಕಡಿಮೆಯಾದ ಉದ್ಯೋಗ ಖಾತ್ರಿ ಕೆಲಸಗಳು
- ಹಿಂಜರಿದ ಆರ್ಥಿಕತೆ

ಈ ಮೇ ದಿನ, ಸಿಐಟಿಯು

ತಮ್ಮ ಜೀವನಾಧಾರಗಳು, ಜೀವನಗಳು ಮತ್ತು ದುಡಿಮೆಯ ಪರಿಸ್ಥಿತಿಗಳನ್ನು ರಕ್ಷಿಸಿಕೊಳ್ಳಲು ಕಾರ್ಮಿಕರು, ರೈತರು, ಕೃಷಿ ಕೂಲಿಕಾರರು, ಯುವಜನ, ವಿದ್ಯಾರ್ಥಿಗಳು, ಹೀಗೆ ಸಮಾಜದ ಎಲ್ಲಾ ವಿಭಾಗದ ಜನರ ಹೆಚ್ಚುತ್ತಿರುವ ಹೋರಾಟಗಳನ್ನು ಸ್ವಾಗತಿಸುತ್ತದೆ; ಸಂವಿಧಾನಿಕ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ಪ್ರತಿಪಾದನೆಗೆ ದಲಿತರು ಮತ್ತು ಆದಿವಾಸಿಗಳು ಸೇರಿದಂತೆ ವಿವಿಧ ವಿಭಾಗಗಳ ಹೆಚ್ಚುತ್ತಿರುವ ಹೋರಾಟಗಳನ್ನು ಸ್ವಾಗತಿಸುತ್ತದೆ.

ಚುನಾವಣೆಯ ನಂತರ ಯಾವುದೇ ಸರ್ಕಾರ ಬಂದರೂ, ನವಉದಾರವಾದಿ ನೀತಿಗಳನ್ನು ಸೋಲಿಸುವ ಉದ್ದೇಶದಿಂದ ಈ ಹೋರಾಟಗಳನ್ನು ಮತ್ತಷ್ಟು ತೀವ್ರಗೊಳಿಸಲು ಕಾರ್ಮಿಕ ವರ್ಗಕ್ಕೆ ಮತ್ತು ದುಡಿಯುವ ವರ್ಗಕ್ಕೆ ಕರೆ ನೀಡುತ್ತದೆ; "ಕಾರ್ಪೊರೇಟ್ ಪರ"ದಿಂದ "ಜನ ಪರ"ದ ಕಡೆಗೆ ನೀತಿಗಳ ದಿಕ್ಕನ್ನು ಬದಲಾಯಿಸಲು ಐಕ್ಯ ಹೋರಾಟಗಳನ್ನು ತೀವ್ರಗೊಳಿಸಲು ಕರೆ.

ಈ ಬದಲಾವಣೆಯನ್ನು ತರಲು ದೇಶದಲ್ಲಿ ಅಗತ್ಯವಾದ ಸಂಪನ್ಮೂಲಗಳಿವೆ ಎಂದು ಪ್ರತಿಪಾದಿಸುತ್ತದೆ; ಅಪಾರವಾದ ಮಾನವ ಸಂಪನ್ಮೂಲಗಳನ್ನು ಹೊಂದಿದೆ; ನಮ್ಮ ಯುವಜನರನ್ನು, ಮಹಿಳೆ ಮತ್ತು ಪುರುಷರನ್ನು, ಲಾಭದಾಯಕ ಉದ್ಯೋಗದಲ್ಲಿ ತೊಡಗಿಸಲು ಮತ್ತು ಅವರಿಗೆ ಗೌರವಯುತ ಕನಿಷ್ಟ ವೇತನ ನೀಡಲು, ಎಲ್ಲರಿಗೂ ಆಹಾರ, ಎಲ್ಲರಿಗೂ ಮನೆ, ಎಲ್ಲರಿಗೂ ಶಿಕ್ಷಣ, ಎಲ್ಲರಿಗೂ ಆರೋಗ್ಯ, ಸಾರ್ವತ್ರಿಕ ಸಾಮಾಜಿಕ ಸುರಕ್ಷೆ, ಅಗತ್ಯವಿರುವ ಎಲ್ಲರಿಗೂ ವೃದ್ಧಾಪ್ಯ ವೇತನ, ಎಲ್ಲರಿಗೂ ಗೌರವಯುತ ಮತ್ತು ಘನತೆಯುತ ಜೀವನಕ್ಕಾಗಿ ಎಲ್ಲಾ ಮೂಲ ಸೌಲಭ್ಯಗಳ ನೀಡಿಕೆಗಾಗಿ ಪ್ರತಿಪಾದನೆ.

ಈ ಮೇ ದಿನದಂದು, ಸಿಐಟಿಯು

ಇಂದು ಕಾರ್ಮಿಕ ವರ್ಗ ಎದುರಿಸುತ್ತಿರುವ ಸವಾಲುಗಳಿಗೆ ಮುಖಾಮುಖಿಯಾಗಲು ದೇಶ ಕಾರ್ಮಿಕ ವರ್ಗ ಮೂರು ವಿಧಾನದ ಹೋರಾಟಗಳನ್ನು ನಡೆಸಬೇಕಾದ ಅಗತ್ಯವಿದೆ – ನವಉದಾರವಾದದ ವಿರುದ್ಧ ಹೋರಾಟ, ಕೋಮುವಾದಿ ಮತ್ತು ಜಾತಿವಾದಿ ಶಕ್ತಿಗಳ ವಿರುದ್ಧ ಹೋರಾಟ ಮತ್ತು ಸರ್ವಾಧಿಕಾರದ ವಿರುದ್ಧ ಹೋರಾಟಕ್ಕೆ ತನ್ನ ಬದ್ಧತೆಯನ್ನು ಪ್ರತಿಪಾದಿಸುತ್ತದೆ.

ಈ ಸವಾಲುಗಳನ್ನು ಎದುರಿಸಲು ದೇಶದ ಇಡೀ ಕಾರ್ಮಿಕ ವರ್ಗವನ್ನು ಅಣಿನೆರೆಸಲು ತನ್ನ ನಿರ್ಧಾರವನ್ನು ಘೋಷಿಸುತ್ತದೆ.

ಎಲ್ಲಾ ದುಡಿಯುವ ಜನರ ಐಕ್ಯತೆಯನ್ನು ಗಟ್ಟಿಗೊಳಿಸಲು ಮತ್ತು ವಿಸ್ತಾರಗೊಳಿಸಲು ಮತ್ತು ಅವರನ್ನು ಐಕ್ಯ ಹೋರಾಟಗಳಿಗೆ ಅಣಿನೆರೆಸಲು ತನ್ನ ಬದ್ಧತೆಯನ್ನು ಪುನರ್‌ಪ್ರತಿಪಾದಿಸುತ್ತದೆ; ಜನ-ವಿರೋಧಿಯಾದ ಸಾಮಾಜಿಕ-ಆರ್ಥಿಕ-ರಾಜಕೀಯ ಪ್ರಭುತ್ವಕ್ಕೆ ಪ್ರತಿರೋಧವನ್ನು ಹೆಚ್ಚಿಸಲು ಇದು ಪೂರ್ವಾಪೇಕ್ಷಿತ ಅಗತ್ಯವಾಗಿದೆ.

ನವಉದಾರವಾದಿ ವ್ಯವಸ್ಥೆ ಮತ್ತು ಬಂಡವಾಳಶಾಹಿ ವ್ಯವಸ್ಥೆಯನ್ನು ಎದುರಿಸಲು ಕಾರ್ಮಿಕರು, ಬಡ ರೈತರು ಮತ್ತು ಕೃಷಿ ಕಾರ್ಮಿಕರ ಐಕ್ಯತೆಯ ಅಗತ್ಯವನ್ನು ಪ್ರತಿಪಾದಿಸುತ್ತದೆ.

ನವಉದಾರವಾದಕ್ಕೆ ನಿರ್ದಿಷ್ಟ ಪರ್ಯಾಯ ನೀತಿಗಳನ್ನು ಪ್ರತಿಪಾದಿಸುವ ಮೂಲಕ ಎಲ್ಲಾ ದುಡಿಯುವ ಜನರ ಐಕ್ಯ ಹೋರಾಟಗಳು ಮತ್ತು ಜಂಟಿ ಕಾರ್ಮಿಕ ಚಳುವಳಿಯನ್ನು ಗಟ್ಟಿಗೊಳಿಸಲು ಸ್ವತಂತ್ರವಾದ ಪ್ರಚಾರಗಳು ಮತ್ತು ಮುತುವರ್ಜಿಗಳನ್ನು ವಹಿಸಲು ಸಿಐಟಿಯು ಬದ್ಧವಾಗಿದೆ. ಆ ಮೂಲಕ ದುಡಿಯುವ ಜನರ ಅತ್ಯಂತ ಹೆಚ್ಚಿನ ವಿಶಾಲ ಅಣಿನೆರೆಸುವಿಕೆಯನ್ನು ಸಾಧಿಸುವುದು.

ಪ್ರಥಮ ರಾಷ್ಟ್ರೀಯ ಕಾರ್ಮಿಕ ಸಂಘಟನೆ ಕೇಂದ್ರ ರಚನೆಯ 100 ನೇ ವರ್ಷ ಮತ್ತು ಸಿಐಟಿಯು ಸ್ಥಾಪನೆಯ 50 ನೇ ವರ್ಷ ಆಚರಣೆಯನ್ನು 2019–20 ವರ್ಷ ಪೂರ್ತಿ ಆಚರಿಸಲು ಘೋಷಣೆ. "100 ವರ್ಷಗಳ ಹೋರಾಟಗಳು ಮತ್ತು ತ್ಯಾಗಗಳು – ಕಾರ್ಮಿಕ ವರ್ಗದ ಐಕ್ಯತೆಗಾಗಿನ ಹೋರಾಟದ 50 ವರ್ಷಗಳು" ಘೋಷಣೆಯಡಿಯಲ್ಲಿ ವಿವಿಧ ಜಾಗೃತಿ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳನ್ನು "ಐಕ್ಯತೆ ಮತ್ತು ಹೋರಾಟ"ವನ್ನು ಕೇಂದ್ರೀಕರಿಸಿ ನಡೆಸಲು ತೀರ್ಮಾನ.

ಇಂತಹ ಬೃಹತ್ ಹೋರಾಟಗಳ ಬೆಳವಣಿಗೆ ಮತ್ತು ಅವುಗಳ ನಿರಂತರತೆ ಮಾತ್ರವೇ ಕಾರ್ಮಿಕ ವರ್ಗದ ಪರವಾದ ವರ್ಗ ಬಲಾಬಲಗಳ ಸಮಗ್ರ ಬದಲಾವಣೆಗೆ ಕಾರಣವಾಗಬಲ್ಲದು ಎಂದು ದೃಢವಾಗಿ ಪ್ರತಿಪಾದಿಸುತ್ತದೆ.

2019 ರ ಈ ಮೇ ದಿನದಂದು, ಭಾರತದ ಕಾರ್ಮಿಕ ವರ್ಗಕ್ಕೆ ಸಿಐಟಿಯು ಕರೆ ಏನೆಂದರೆ:

ನವಉದಾರವಾದಿ ನೀತಿಗಳನ್ನು ಸೋಲಿಸಲು ಮತ್ತು ಕಾರ್ಮಿಕರ ಪರವಾದ ಮತ್ತು ಜನತೆಯ ಪರವಾದ ಪರ್ಯಾಯ ನೀತಿಗಳಿಗಾಗಿ ಐಕ್ಯತೆಯನ್ನು ಗಟ್ಟಿಗೊಳಿಸಿ ಮತ್ತು ಹೋರಾಟಗಳನ್ನು ತೀವ್ರಗೊಳಿಸಿ.

ಕಾರ್ಮಿಕರು, ಬಡ ರೈತರು, ಕೃಷಿ ಕಾರ್ಮಿಕರು ಸೇರಿದಂತೆ ಎಲ್ಲಾ ದುಡಿಯುವ ಜನರ ನಡುವೆ ಸೌಹಾರ್ದತೆಯ ಬಂಧಗಳನ್ನು ತೀವ್ರಗೊಳಿಸಿ; ಹಳ್ಳಿಗಳಿಂದ ಹಿಡಿದು ಜಿಲ್ಲೆಗಳವರೆಗೆ ಎಲ್ಲಾ ಹಂತಗಳಲ್ಲಿ ಕಾರ್ಮಿಕರು ಮತ್ತು ರೈತರ ಬಲಿಷ್ಠವಾದ ಐಕ್ಯ ಹೋರಾಟಗಳನ್ನು ಬೆಳೆಸಿರಿ.

ಐಕ್ಯತೆಯನ್ನು ನಾಶ ಮಾಡುವ ಕೋಮುವಾದಿ ಮತ್ತು ಜಾತಿವಾದಿ ಶಕ್ತಿಗಳ ಕುತಂತ್ರಗಳನ್ನು ಸೋಲಿಸಲು ಜಾಗ್ರತರಾಗಿರಿ.

ಕಾರ್ಮಿಕ ವರ್ಗದ ಮತ್ತು ಎಲ್ಲಾ ದುಡಿಯುವ ಜನತೆಯ ನಿಜವಾದ ಶತ್ರುವನ್ನು – ಬಂಡವಾಳಶಾಹಿ ವ್ಯವಸ್ಥೆ ಮತ್ತು ಆ ವ್ಯವಸ್ಥೆಯನ್ನು ಉತ್ತೇಜಿಸುವ ರಾಜಕಾರಣ ಮತ್ತು ಶಕ್ತಿಗಳನ್ನು – ಗುರುತಿಸಿ; ಈ ಶೋಷಣಾ ವ್ಯವಸ್ಥೆಯನ್ನು ಬದಲಾಯಿಸುವ ಹೋರಾಟಕ್ಕೆ ಸಿದ್ಧರಾಗಿರಿ.

ಈ ಮೇ ದಿನದಂದು, ಸಿಐಟಿಯು ಇದಕ್ಕಾಗಿ ತನ್ನ ಬಾವುಟವನ್ನು ಎತ್ತಿ ಹಿಡಿಯುತ್ತದೆ:

- ಎಲ್ಲಾ ಶೋಷಣೆ ಮತ್ತು ದಮನದ ವಿರುದ್ಧ ಅಂತರರಾಷ್ಟ್ರೀಯ ಕಾರ್ಮಿಕ ವರ್ಗದ ಸೌಹಾರ್ದತೆ ಮತ್ತು ಐಕ್ಯತೆ
- ಬಂಡವಾಳವಾದ ಮತ್ತು ಸಾಮ್ರಾಜ್ಯವಾದ ನಾಶವಾಗಲಿ
- ಸಮಾಜವಾದ ಚಿರಾಯುವಾಗಲಿ
- ಜಗತ್ತಿನ ಕಾರ್ಮಿಕರೇ ಒಂದಾಗಿ ●

ತ್ರಿಪುರಾ ಪಶ್ಚಿಮ ಲೋಕಸಭಾ ಕ್ಷೇತ್ರದಲ್ಲಿ ಹೊಸ ಮತದಾನ ನಡೆಸಿ –ಚುನಾವಣಾ ಆಯೋಗಕ್ಕೆ ಸಿಪಿಐ(ಎಂ) ನಿಯೋಗದ ಆಗ್ರಹ



ತ್ರಿಪುರಾ ಪಶ್ಚಿಮ ಲೋಕಸಭಾ ಕ್ಷೇತ್ರದಲ್ಲಿ ಎಪ್ರಿಲ್ 11ರಂದು ನಡೆದ ಮತದಾನದಲ್ಲಿ ವ್ಯಾಪಕವಾದ ಅಕ್ರಮಗಳು ಮತ್ತು ಮೋಸ ನಡೆದಿರುವುದು ಚುನಾವಣಾ ಆಯೋಗದ ತನಿಖೆಗಳಿಂದಲೇ ಮತ್ತು ಈಗ ಲಭ್ಯವಾಗಿರುವ ದಸ್ತಾವೇಜುಗಳಿಂದ ಸ್ಪಷ್ಟವಾಗಿರುವುದರಿಂದ ಅಲ್ಲಿ ಇಡೀ ಮತದಾನವನ್ನು ರದ್ದು ಮಾಡಬೇಕು, ಇನ್ನೂ ಈ ಚುನಾವಣೆಗಳಲ್ಲಿ ಸಾಕಷ್ಟು ಸಮಯ ಇದ್ದು, ಈ ಕ್ಷೇತ್ರದಲ್ಲಿ ಹೊಸದಾಗಿ ಮತದಾನ ನಡೆಸಬೇಕು ಎಂದು ಎಪ್ರಿಲ್ 30ರಂದು ಮುಖ್ಯ ಚುನಾವಣಾ ಆಯುಕ್ತರನ್ನು ಭೇಟಿಯಾದ ಸಿಪಿಐ(ಎಂ) ನಿಯೋಗ ಅವರನ್ನು ಆಗ್ರಹ ಪಡಿಸಿದೆ. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ, ಪೊಲಿಟ್ ಬ್ಯುರೊ ಸದಸ್ಯರಾದ ನೀಲೋತ್ಪಲ ಬಸು ಮತ್ತು ತ್ರಿಪುರಾದ ಎರಡೂ ಲೋಕಸಭಾ ಕ್ಷೇತ್ರಗಳ ಸಿಪಿಐ(ಎಂ) ಅಭ್ಯರ್ಥಿಗಳಾದ ಶಂಕರ ಪ್ರಸಾದ್ ದತ್ತ ಮತ್ತು ಜಿತೇಂದ್ರ ಚೌಧರಿ ಈ ನಿಯೋಗದಲ್ಲಿದ್ದರು.

ತ್ರಿಪುರಾದಲ್ಲಿ ಮುಕ್ತ ಮತ್ತು ನ್ಯಾಯಯುತ ಮತದಾನ ನಡೆಸುವುದಕ್ಕೆ ತೀವ್ರ ಬೆದರಿಕೆಗಳು ಇರುವ ಬಗ್ಗೆ ಸಿಪಿಐ(ಎಂ) ಚುನಾವಣಾ ಪ್ರಕ್ರಿಯೆ ಆರಂಭವಾಗುವ ಮೊದಲಿಂದಲೇ ಚುನಾವಣಾ ಆಯೋಗದ ಗಮನವನ್ನು ಸೆಳೆಯುತ್ತ ಬಂದಿದೆ. ಫೆಬ್ರುವರಿ 20ರಂದು ನಿರ್ದಿಷ್ಟವಾಗಿ ಈ ಬೆದರಿಕೆಗಳ ಬಗ್ಗೆ ಆಯೋಗಕ್ಕೆ ಪತ್ರ ಬರೆಯಲಾಗಿತ್ತು, ಹಾಗೂ ಸಾರ್ವತ್ರಿಕ ಚುನಾವಣೆಗಳ ವೇಳಾಪಟ್ಟಿಯ ಪ್ರಕಟಣೆಯ ಎರಡು ದಿನಗಳ ಮೊದಲು ಸಿಪಿಐ(ಎಂ) ನಿಯೋಗ ಚುನಾವಣಾ ಆಯೋಗದ ಎಲ್ಲ ಸದಸ್ಯರನ್ನೂ ಭೇಟಿಯಾಗಿ ಇವನ್ನು ವಿವರಿಸಿತ್ತು. ಆದರೂ ಪಕ್ಷ ವ್ಯಕ್ತಪಡಿಸಿದ ಈ ಎಲ್ಲ ಆತಂಕಗಳನ್ನು ನಂತರದ ಬೆಳವಣಿಗೆಗಳು ಸಾಬೀತಿ ಪಡಿಸಿರುವುದು ಖೇದಕರ ಎಂದು ಸಿಪಿಐ(ಎಂ) ಮುಖ್ಯ ಚುನಾವಣಾ ಆಯುಕ್ತರಿಗೆ ಎಪ್ರಿಲ್ 30ರಂದು ಸಲ್ಲಿಸಿದ ಪತ್ರದಲ್ಲಿ ಹೇಳಿದೆ.

ತ್ರಿಪುರಾ ಪಶ್ಚಿಮ ಲೋಕಸಭಾ ಕ್ಷೇತ್ರಕ್ಕೆ ರಿಟರ್ನಿಂಗ್ ಆಫೀಸರ್(ಆರ್.ಒ.) ಆಗಿ ನೇಮಿಸುವವರ ಸೂಕ್ತತೆಯ ಪ್ರಶ್ನೆಯನ್ನು ಆಗ ಎತ್ತಲಾಗಿತ್ತು. ಈ ಆರ್.ಒ. ಜಿಲ್ಲಾ ಮ್ಯಾಜಿಸ್ಟ್ರೇಟ್ ಆಗಿ ದೈನಿಕ ದೇಶೇರ್ ಕಥಾ ಪತ್ರಿಕೆಯ ಪ್ರಕಟಣೆಯನ್ನು ನಿಲ್ಲಿಸುವ ಆದೇಶವನ್ನು ಹೊರಡಿಸಿದ್ದವರು. ಇದು ರಾಜ್ಯದ ಪ್ರಗತಿಪರ ಶಕ್ತಿಗಳ ವಿರುದ್ಧ ಆ ವ್ಯಕ್ತಿಯ ಪಕ್ಷಪಾತದ ವಾಸನೆಯನ್ನು ಸೂಸಿತ್ತು. ತ್ರಿಪುರಾ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ಈ ಆದೇಶ ಜಾರಿಗೆ ಸೂಕ್ತವಾದುದಲ್ಲ ಎಂದು ಕಂಡು ಅದರ ಮೇಲೆ ಮುಂದಿನ ಕ್ರಮಕ್ಕೆ ತಡೆ ನೀಡಿದರು. ಇದರಿಂದಾಗಿ, ಪರೋಕ್ಷವಾಗಿ ನ್ಯಾಯಾಂಗದ ಕಡಿವಾಣಕ್ಕೆ ಒಳಗಾದ ಅಧಿಕಾರಿಗಳ ಪಾತ್ರದ ಬಗ್ಗೆ ಈ ಹಿಂದೆ ಅನುಸರಿಸಿದ ಕ್ರಮಗಳಿಗೆ ಅನುಸಾರವಾಗಿ ಅವರನ್ನು ಈ ನಿರ್ಣಾಯಕ ಚುನಾವಣಾ ಜವಾಬ್ದಾರಿಗೆ ಸೂಕ್ತರಲ್ಲ ಎಂದು ಪರಿಗಣಿಸಬೇಕು ಎಂದು ಸಿಪಿಐ(ಎಂ) ಸೂಚಿಸಿತ್ತು. ಆದರೆ ಚುನಾವಣಾ ಆಯೋಗ ರಾಜ್ಯ ಆಡಳಿತ ನೀಡಿದ ಮಾಹಿತಿಗಳ ಆಧಾರದಲ್ಲಿ ಅದೇ ಅಧಿಕಾರಿಯನ್ನು ರಿಟರ್ನಿಂಗ್ ಆಫೀಸರ್ ಆಗಿ ಮುಂದುವರೆಸಿತು.

"ನಮ್ಮ ದೂರುಗಳು ಮತ್ತು ವೀಕ್ಷಕರು ಮತ್ತು ಇತರರ ಸ್ಪಂದನೆಗಳ ಆಧಾರದಲ್ಲಿ ಚುನಾವಣಾ ಆಯೋಗ ಎಪ್ರಿಲ್ 11ರ ಅನುಭವ ಎಪ್ರಿಲ್ 18ರಂದು ನಡೆಯಬೇಕಾಗಿದ್ದ ತ್ರಿಪುರಾ ಪೂರ್ವ(ಎಸ್.ಟಿ.) ಲೋಕಸಭಾ ಕ್ಷೇತ್ರದ ಮತದಾನವನ್ನು ಮುಂದೂಡುವಷ್ಟು ಗಂಭೀರವಾಗಿದೆ ಎಂಬ ತೀರ್ಮಾನಕ್ಕೆ ಬಂದಿದೆ. "ಮುಖ್ಯ ಚುನಾವಣಾ ಅಧಿಕಾರಿ, ತ್ರಿಪುರಾ ಮತ್ತು ವಿಶೇಷ ಪೋಲೀಸ್ ನಿರೀಕ್ಷಕರು, ತ್ರಿಪುರಾ ಇವರಿಂದ ತ್ರಿಪುರಾ ಪೂರ್ವ(ಎಸ್.ಟಿ.) ಲೋಕಸಭಾ ಕ್ಷೇತ್ರದಲ್ಲಿ ಎಪ್ರಿಲ್ 18, 2019 ರಂದು ಮುಕ್ತ ಮತ್ತು ನ್ಯಾಯಯುತ ಮತದಾನವನ್ನು ನಡೆಸಲು ಪರಿಸ್ಥಿತಿ ಸೂಕ್ತವಾಗಿಲ್ಲ ಎಂಬ ವರದಿಗಳು ಬಂದಿವೆ" ಎಂದು ಚುನಾವಣಾ ಆಯೋಗದ ಅಧಿಸೂಚನೆಯಲ್ಲಿ ಹೇಳಲಾಗಿದೆ" ಎಂಬುದನ್ನು ಮುಖ್ಯ ಚುನಾವಣಾ ಆಯುಕ್ತರ ಗಮನಕ್ಕೆ ತಂದಿರುವ ಸಿಪಿಐ(ಎಂ), ಚುನಾವಣಾ ಆಯೋಗದಿಂದ ಇಂತಹ ಒಂದು ತೀವ್ರ ಕ್ರಮ ಹಿಂದೆಂದೂ ಬಂದಿರಲಿಲ್ಲ, ಇವೆಲ್ಲವೂ ಎಪ್ರಿಲ್ 11 ರ ವಾಸ್ತವಿಕ ಅನುಭವದಿಂದಲೇ, ಏಕೆಂದರೆ ತನಿಖೆಯ ಪ್ರಕ್ರಿಯೆ ಅತ್ಯಂತ ಆತಂಕ ಟುವಮಾಡುವಂತಹ ಸಂಗತಿಗಳನ್ನು ಹೊರತಂದಿದೆ ಎಂದು ತನ್ನ ಪತ್ರದಲ್ಲಿ ಹೇಳಿದೆ.

ಎಪ್ರಿಲ್ 16ರಿಂದ ಆರಂಭಿಸಿ ಆದೇಶಗಳ ಒಂದು ಸರಣಿಯೇ ಬಂದಿದೆ, 16ರ ನಂತರ 17ರಂದು, 18 ರಂದು ಮತ್ತು 19ರಂದು ಹೊರಡಿಸಿರುವ ಆದೇಶಗಳು ಅಕ್ರಮಗಳ ವಿವಿಧ ಆಯಾಮಗಳ ವಿವರಗಳನ್ನು ನೀಡಿವೆ ಮತ್ತು ಹಲವು ಅಧಿಕಾರಿಗಳ ಹೊಣೆಗಾರಿಕೆಯನ್ನು ನಿಗದಿ ಪಡಿಸಿವೆ.

ಈ ಅಧಿಕೃತ ದಸ್ತಾವೇಜುಗಳ ಸರಣಿಯಲ್ಲಿ ಸಿಪಿಐ(ಎಂ)ಗೆ ಲಭ್ಯವಿರುವ ಕೊನೆಯದಾದ ಎಪ್ರಿಲ್ 23ರ ದಸ್ತಾವೇಜಿನಲ್ಲಿ ಆರ್.ಒ. 433 ಮತಗಟ್ಟೆಗಳಲ್ಲಿನ ಅಕ್ರಮಗಳ ಬಗ್ಗೆ ಒಂದು ಸಮಗ್ರ ಹೇಳಿಕೆಯನ್ನು ಅತಿರಿಕ್ತ ಮುಖ್ಯ ಚುನಾವಣಾ ಅಧಿಕಾರಿಗೆ ಕಳಿಸಿದ್ದಾರೆ ಎಂದು ತಿಳಿದು ಬರುತ್ತದೆ. ಆದರೆ ವಿಶೇಷ ವೀಕ್ಷಕರಿಂದಾಗಿ ಅಕ್ರಮಗಳು ನಡೆದಿವೆ ಎಂದು ಒಪ್ಪಿಕೊಂಡು ಅದರಿಂದಾಗಿ ಮರುಮತದಾನ ಅಗತ್ಯವಿರುವ ಮತಗಟ್ಟೆಗಳ ಸಂಖ್ಯೆಯನ್ನು ಇಳಿಸುವ ಪ್ರಯತ್ನಗಳು ನಡೆಯುತ್ತಿದೆ ಎಂದೂ ತಿಳಿದು ಬಂದಿದೆ.

ನಿಜಸಂಗತಿಯೆಂದರೆ, ಚುನಾವಣಾ ಮೋಸದ ಪ್ರಮಾಣ ಇದಕ್ಕಿಂತ ಎಷ್ಟೋ ದೊಡ್ಡದಿದೆ. ಎಪ್ರಿಲ್ 11 ರ ಸಂಜೆಯ ಪ್ರಾಥಮಿಕ ವರದಿಗಳ ಆಧಾರದಲ್ಲಿ ಸಿಪಿಐ(ಎಂ) ಒಟ್ಟು 1679 ಮತಗಟ್ಟೆಗಳ ಪೈಕಿ 464 ಮತಗಟ್ಟೆಗಳಲ್ಲಿ ಮರು ಮತದಾನ ನಡೆಸಬೇಕೆಂದು ಕೋರಿತು. ನಂತರ ಪೂರ್ಣ ಮಾಹಿತಿಗಳು ಲಭ್ಯವಾದಾಗ 846 ಮತಗಟ್ಟೆಗಳಲ್ಲಿ ಮರು ಮತದಾನ ನಡೆಸಬೇಕು ಎಂದು ಪಕ್ಷ ಆಗ್ರಹಿಸಿತು. ಅರ್ಧಕ್ಕಿಂತ ಹೆಚ್ಚು ಮತದಾರರಿಗೆ ಅಂದು ತಮ್ಮ ಮತ ಚಲಾಯಿಸಲು ಬಿಡಲಿಲ್ಲ ಎಂಬುದರಲ್ಲಿ ಸಂದೇಹವೇ ಇಲ್ಲ.

ಆದರೆ ವಿಚಿತ್ರ ಎಂದರೆ, ಮತದಾನ ನಡೆದು 20 ದಿನಗಳ ನಂತರವೂ ಚುನಾವಣಾ ಆಯೋಗಕ್ಕೆ ಒಂದು ಖಚಿತ ತೀರ್ಮಾನಕ್ಕೆ ಬರಲು ಸಾಧ್ಯವಾಗಿಲ್ಲ. ಇದರಿಂದಾಗಿ ಚುನಾವಣಾ ಆಯೋಗ ಪ್ರಜಾಸತ್ತಾತ್ಮಕ ಚುನಾವಣೆಗಳನ್ನು ನಡೆಸುವಲ್ಲಿ ವಿಫಲವಾಗಿದೆಯಷ್ಟೇ ಅಲ್ಲ, ಅದನ್ನು ಸರಿಪಡಿಸುವ ಕ್ರಮಗಳನ್ನು ಕೈಗೊಳ್ಳಲು ಕೂಡ ಅದು ಹಿಂದೇಟು ಹಾಕುತ್ತಿದೆ ಎಂಬ ಭಾವನೆ ಉಂಟಾಗುತ್ತಿದೆ ಎಂಬುದನ್ನು ಸಿಪಿಐ(ಎಂ) ನಿಯೋಗ ಮುಖ್ಯ ಚುನಾವಣಾ ಆಯುಕ್ತರ ಗಮನಕ್ಕೆ ತರುತ್ತ, ತ್ರಿಪುರಾದ ಎಡರಂಗ ಸಮಿತಿ ಆಗ್ರಹಿಸಿರುವಂತೆ ತ್ರಿಪುರಾ ಪಶ್ಚಿಮ ಲೋಕಸಭಾ ಕ್ಷೇತ್ರದಲ್ಲಿ ನಡೆದಿರುವ ಇಡೀ ಚುನಾವಣೆಯನ್ನು ರದ್ದುಗೊಳಿಸಿ ಹೊಸ ಚುನಾವಣೆ ನಡೆಸಬೇಕು ಎಂದು ಕೇಳಿದೆ.

ಈ ಸಂದರ್ಭದಲ್ಲಿ ತಮಿಳುನಾಡಿನ ವೆಲ್ಲೂರು ಲೋಕಸಭಾ ಕ್ಷೇತ್ರದಲ್ಲಿ ಹಣವನ್ನು ವಶಪಡಿಸಿಕೊಳ್ಳಲಾಯಿತು, ಇದರಿಂದಾಗಿ ಅಲ್ಲಿ ಮತದಾನ ಪ್ರಕ್ರಿಯೆ ಕಲುಷಿತಗೊಂಡಿದೆ ಎಂದು ಹೇಳಿ ಇದೇ ಚುನಾವಣಾ ಆಯೋಗ ಅಲ್ಲಿ ಮತದಾನವನ್ನು ರದ್ದು ಮಾಡುವ ದೃಢ ನಿರ್ಧಾರವನ್ನು ಕೈಗೊಂಡಿರುವುದನ್ನು ಕೂಡ ಸಿಪಿಐ(ಎಂ) ಮುಖ್ಯ ಚುನಾವಣಾ ಆಯುಕ್ತರಿಗೆ ಬರೆದ ಪತ್ರದಲ್ಲಿ ಪ್ರಸ್ತಾಪ ಮಾಡಿದೆ.

ಸಿಪಿಐ(ಎಂ) ನಿಯೋಗದ ಭೇಟಿಯ ನಂತರ ಪಕ್ಷದ ಕೇಂದ್ರ ಸಮಿತಿ ಕಚೇರಿಯಲ್ಲಿ ನಡೆದ ಪತ್ರಿಕಾ ಸಮ್ಮೇಳನದಲ್ಲಿ ಮಾತಾಡುತ್ತ ಯೆಚುರಿಯವರು ಮತ್ತು ನೀಲೋತ್ಪಲ ಬಸುರವರು ಪಶ್ಚಿಮ ಬಂಗಾಲದಲ್ಲೂ ಅಕ್ರಮಗಳನ್ನು ನಡೆಸುವ ಪ್ರಯತ್ನಗಳ ಬಗ್ಗೆ ಮತ್ತು ಚುನಾವಣಾ ಆಯೋಗ ಸೂಕ್ತ ಕ್ರಮಗಳನ್ನು ಕೈಗೊಳ್ಳು ವಿಳಂಬ ಮಾಡುತ್ತಿರುವ ಬಗ್ಗೆ ಹೇಳಿದರು. ಬಿಹಾರದ ಬೇಗುಸರಾಯ್ ನಲ್ಲಿ ಬಿಜೆಪಿ ಅಭ್ಯರ್ಥಿಯ ಮಾದರಿ ಆಚಾರ ಸಂಹಿತೆಯ ಉಲ್ಲಂಘನೆಯನ್ನು ಪರಿಶೀಲಿಸಿ ಆಯೋಗ ಅವರ ವಿರುದ್ಧ ಕ್ರಮ ಕೈಗೊಂಡದ್ದು ಅಲ್ಲಿ ಮತದಾನ ಮುಗಿಯುವ ವೇಳೆಗಷ್ಟೇ ಎಂಬ ಸಂಗತಿಯನ್ನೂ ಈ ಸಂದರ್ಭದಲ್ಲಿ ಅವರು ಪತ್ರಕರ್ತರ ಗಮನಕ್ಕೆ ತಂದರು.

ಚುನಾವಣಾ ಆಯೋಗದ ನಿಯತ್ತನ್ನು ಕಾಯ್ದುಕೊಳ್ಳಬೇಕಾಗಿದೆ

ಪುಟ 5 ರಿಂದ

ಪಶ್ಚಿಮ ಲೋಕಸಭಾ ಕ್ಷೇತ್ರದಲ್ಲಿ ನಡೆದ ಮತದಾನದಲ್ಲಿ ವ್ಯಾಪಕವಾಗಿ ಮೋಸ, ಮತಗಟ್ಟೆ ವಶ, ಸಿಸಿಟಿವಿ ಕ್ಯಾಮರಾಗಳು ಕೆಲಸ ಮಾಡದಂತೆ ಮಾಡುವುದು, ಪ್ರತಿಪಕ್ಷಗಳ ಪೋಲಿಂಗ್ ಏಜೆಂಟರು ಮತ್ತು ಮತದಾರರನ್ನು ಓಡಿಸುವುದು ನಡೆದಿದೆ. ಸಿಪಿಐ(ಎಂ) ಸಾಕಷ್ಟು ಸಾಕ್ಷ್ಯಗಳು ಮತ್ತು ದಸ್ತಾವೇಜುಗಳನ್ನು ನೀಡಿ 846 ಮತಗಟ್ಟೆಗಳಲ್ಲಿ ಮರು ಮತದಾನ ನಡೆಸುವಂತೆ ಆಗ್ರಹಿಸಿದೆ. ಆದರೆ, ಮತದಾನ ನಡೆದು ಮೂರು ವಾರಗಳಾದರೂ ಯಾವುದೇ ಕ್ರಮವನ್ನು ಕೈಗೊಳ್ಳಲಾಗಿಲ್ಲ. ಆಯೋಗ ನಡೆಸಿರುವ ಎಲ್ಲ ತನಿಖೆಗಳ ಪ್ರಕಾರ ವ್ಯಾಪಕ ಪ್ರಮಾಣದಲ್ಲಿ ಅಕ್ರಮಗಳು ನಡೆದಿವೆ ಎಂದು ಕಂಡು ಬಂದರೂ ಕೇವಲ 131 ಮತಗಟ್ಟೆಗಳಲ್ಲಿ ಮರು ಮತದಾನದ ಆದೇಶ ನೀಡಲಿದೆ ಎಂದು ಈಗ ವರದಿಯಾಗಿದೆ. ಇದರಿಂದ, ಆಯೋಗ ಈ ರಾಜ್ಯದಲ್ಲಿಯೂ ಅಧಿಕಾರ ನಡೆಸುತ್ತಿರುವ ಬಿಜೆಪಿಗೆ ಅಸಮಾಧಾನ ಆಗಬಾರದೆಂದು ಬಯಸುತ್ತದೆ ಎಂದೇ ಹೇಳಬೇಕಾಗುತ್ತದೆ.

ಇದನ್ನು ತಮಿಳುನಾಡಿನ ವೆಲ್ಲೂರ್ ಲೋಕಸಭಾ ಸೀಟಿನಲ್ಲಿ ತ್ವರಿತ ಕ್ರಮ ಕೈಗೊಂಡಿರುವುದರೊಂದಿಗೆ ಹೋಲಿಸಿ ನೋಡಬಹುದು. ಅಲ್ಲಿ ಒಬ್ಬ ಅಭ್ಯರ್ಥಿಯ ಮನೆಯಲ್ಲಿ ಒಂದು ದೊಡ್ಡ ಹಣದ ಮೊತ್ತ ಸಿಕ್ಕಿತು ಎಂಬ ನೆಪದಲ್ಲಿ ಮತದಾನವನ್ನು ರದ್ದು ಮಾಡಲಾಗಿದೆ. ಇಲ್ಲಿರುವ ವ್ಯತ್ಯಾಸವೆಂದರೆ ಅಭ್ಯರ್ಥಿ ಪ್ರತಿಪಕ್ಷವಾದ ಡಿಎಂಕೆ ಗೆ ಸೇರಿದವರು.

ಈ ಚುನಾವಣಾ ಆಯೋಗ ಪ್ರಧಾನ ಮಂತ್ರಿ ನರೆಂದ್ರ ಮೋದಿ ಮತ್ತು ಬಿಜೆಪಿಗೆ ಎದುರಾಗಿ ನಿಲ್ಲಲಾರದು ಎಂಬ ಭಾವನೆ ಬೆಳೆದಿರುವುದು ಆಯೋಗದ ವಿಶ್ವಾಸಾರ್ಹತೆಯನ್ನೇ ಹಾಳುಗೆಡವಿದೆ. ಮೋದಿ ಸರಕಾರದ 'ಐದು ವರ್ಷಗಳ ಆಳ್ವಿಕೆಯಲ್ಲಿ ಹೇಗೆ ಒಂದಾದ ಮೇಲೆ ಒಂದರಂತೆ ಹಲವು ಸಂಸ್ಥೆಗಳ ಮೇಲೆ ಪ್ರಹಾರಗಳು ನಡೆದಿವೆ, ಅಥವ ಅವನ್ನು ಒಳಗಿಂದಲೇ ಕೊರೆದು ಹಾಕಲಾಗಿದೆ ಎಂಬುದನ್ನು ನೋಡಿದ್ದೇವೆ. ಇದರಲ್ಲಿ ಯಾವುದೇ ಸಂವಿಧಾನಿಕ ಸಂಸ್ಥೆಯನ್ನು ಬಿಟ್ಟಿಲ್ಲ. ಬೇಸರದ ಸಂಗತಿಯೆಂದರೆ, ಈಗ, ದೇಶದ ಚುನಾವಣಾ ವ್ಯವಸ್ಥೆಯ ನಿಯತ್ತನ್ನು ಕಾಯ್ದುಕೊಂಡ ಹೆಮ್ಮೆಯ ದಾಖಲೆಯ ಚುನಾವಣಾ ಆಯೋಗವೂ ಬಲಿಯಾಗಿದೆ.

ಈ ಪರಿಸ್ಥಿತಿ ಚುನಾವಣಾ ಆಯೋಗದ ಸಮಗ್ರತೆಯನ್ನು ಕಾಯ್ದುಕೊಳ್ಳುವ ಮತ್ತು ಅದನ್ನು ಕಾರ್ಯಾಂಗ ಮತ್ತು ಆಳುವ ಪಕ್ಷದ ಕೊರೆಯುವ ಪ್ರಭಾವದಿಂದ ಮುಕ್ತವಾಗಿಡಲು ಅದರ ಸುಧಾರಣೆಯ ಅಗತ್ಯವನ್ನು ಎತ್ತಿ ತೋರಿದೆ. ಸಿಪಿಐ(ಎಂ) ಮತ್ತು ಇತರ ಪ್ರಜಾಪ್ರಭುತ್ವ ಶಕ್ತಿಗಳು ಇಂತಹ ಸುಧಾರಣೆಗಳು ನಡೆಯಬೇಕೆಂದು ಆಗ್ರಹಿಸಿವೆ. ಸಿಪಿಐ(ಎಂ) ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಕೇವಲ ಕಾರ್ಯಾಂಗವೇ ಚುನಾವಣಾ ಆಯುಕ್ತರನ್ನು ನೇಮಿಸುವ ಈಗಿನ ವ್ಯವಸ್ಥೆ ಬದಲಾಗಬೇಕು ಎಂದು ಹೇಳಿದೆ. ಅದರ ಬದಲು ಚುನಾವಣಾ ಆಯೋಗವನ್ನು ಪ್ರಧಾನ ಮಂತ್ರಿ, ಪ್ರತಿಪಕ್ಷದ ಮುಖಂಡರು ಮತ್ತು ಸುಪ್ರಿಂ ಕೋರ್ಟಿನ ಮುಖ್ಯ ನ್ಯಾಯಾಧೀಶರು ಇರುವ ಒಂದು ಸಮಿತಿಯ ಸಲಹೆಯ ಮೇರೆಗೆ ರಾಷ್ಟ್ರಪತಿಗಳು ನೇಮಿಸುವಂತಾಗಬೇಕು. ಅಲ್ಲದೆ, ಚುನಾವಣಾ ಆಯುಕ್ತರುಗಳು ನಿವೃತ್ತಿಯ ನಂತರ ಸರಕಾರದ ಅಡಿಯಲ್ಲಿ ಯಾವುದೇ ಹುದ್ದೆಯನ್ನು, ಅಥವ ರಾಜ್ಯಪಾಲರ ಅಥವ ಶಾಸನ ಸಭೆಯ ಸದಸ್ಯರ ಹುದ್ದೆಯನ್ನು ಪಡೆಯುವುದು ನಿಷಿದ್ಧವಾಗಬೇಕು.

ಚುನಾವಣಾ ಆಯೋಗ ಒಂದು ಬಹಳ ಮಹತ್ವದ ಸಂಸ್ಥೆ, ಅದನ್ನು ಕಾರ್ಯಾಂಗದ ಮರ್ಜಿಗೆ ಬಿಡಲಾಗದು.

ಮುಖ್ಯ ಚುನಾವಣಾ ಆಯುಕ್ತರಿಗೆ ಸೀತಾರಾಮ್ ಯೆಚುರಿ ಪತ್ರ

ಪುಟ 5 ರಿಂದ

ಕಾಣುತ್ತಿದೆ. ಮತ್ತು 'ವಿಳಂಬಗೊಂಡ ನ್ಯಾಯ' ವಾಸ್ತವವಾಗಿ ಅದರ 'ನಿರಾಕರಣೆ'ಯೇ ಆಗುತ್ತದೆ ಎಂಬ ಮಾತಿಗೆ ಉದಾಹರಣೆಯಾಗಿ ಕಾಣುತ್ತದೆ!

ಆದ್ದರಿಂದ, ಇಲ್ಲಿರುವ ಪ್ರಶ್ನೆ, ಉತ್ತರಪ್ರದೇಶದ ವಾರಣಾಸಿ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿ ಮತ್ತು ಬಿಜೆಪಿಯ ಒಬ್ಬ ಸ್ಟಾರ್ ಪ್ರಚಾರಕರಾಗಿರುವ ಶ್ರೀ ನರೇಂದ್ರ ಮೋದಿಯವರನ್ನು ಮಾದರಿ ಆಚಾರ ಸಂಹಿತೆಯ ಅನುಷ್ಠಾನದಲ್ಲಿ, ಅವರು ಪ್ರಸ್ತುತ ಪ್ರಧಾನ ಮಂತ್ರಿಯಾಗಿದ್ದಾರೆ ಎಂಬ ಸರಳ ಕಾರಣಕ್ಕೆ, ಅವರೊಡನೆ ಭಿನ್ನವಾಗಿ ವರ್ತಿಸುವುದು ಅಗತ್ಯವಾಗಿದೆಯೇ? ನಾವು ಈ ಪ್ರಶ್ನೆಯನ್ನು ಆಯೋಗದಿಂದ ಸೂಕ್ತ ಸ್ಪಂದನೆಯ ಅಭಾವದಿಂದಾಗಿ ಎತ್ತಲೇ ಬೇಕಾಗಿ ಬಂದಿದೆ. ಏಕೆಂದರೆ ಆಯೋಗ ಇದನ್ನು ದೃಢವಾಗಿ ಮತ್ತು ನಿರ್ಣಾಯಕವಾಗಿ ನಿರ್ವಹಿಸಲು ಸಾಕಷ್ಟು ಅಧಿಕಾರ ಸಂಪನ್ನವಾಗಿದೆ.

ಒಂದು ತುರ್ತು ಸ್ಪಂದನೆಯ ನಿರೀಕ್ಷೆಯೊಂದಿಗೆ,

ಧನ್ಯವಾದಗಳು,

ತಮ್ಮವ

ಸೀತಾರಾಮ್ ಯೆಚುರಿ

ಮೋದಿ ಹತಾಶೆ ನಡುದಾರಿಯಲ್ಲೇ ಶಿಖರ ಮುಟ್ಟುತ್ತಿದೆ-ಯೆಚುರಿ

ಈ ಸಾರ್ವತ್ರಿಕ ಚುನಾವಣೆಗಳಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ನಡೆಸುತ್ತಿರುವ ಕರ್ಣಕರ್ಕಶ ಪ್ರಚಾರದಲ್ಲಿ ಒಂದು ಹತಾಶೆಯ ಭಾವ ಬಯಲಾಗುತ್ತಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಹೇಳಿದ್ದಾರೆ.

ನಿಜಸಂಗತಿಯೆಂದರೆ, ನರೇಂದ್ರ ಮೋದಿಯವರ ನೇತೃತ್ವದಲ್ಲಿ, ಬಿಜೆಪಿ-ಆರೆಸ್ಸೆಸ್‌ಗೆ ಜನಗಳ ಬದುಕಿನ ಮಟ್ಟದಲ್ಲಿ ಆಗಿರುವ ತೀವ್ರ ಕುಸಿತದ ಬಗ್ಗೆ ಸಾರ್ವಜನಿಕ ಆಕ್ರೋಶವನ್ನು ಎದುರಿಸಲಾಗುತ್ತಿಲ್ಲ. ಚುನಾವಣೆಯಲ್ಲಿ ತಮಗೆ ಸೋಲುಂಟಾಗಬಹುದು ಎಂಬ ಭೀತಿಯಿಂದ ನರೇಂದ್ರ ಮೋದಿ ಈಗ ಜನತೆಯ ಬೆಂಬಲ ಗಳಿಸುವ ಮಾರ್ಗವಾಗಿ ಭಯೋತ್ಪಾದನೆಯ ವಿರುದ್ಧ ಹೋರಾಟದ ಮಾತಾಡುತ್ತ, ನಮ್ಮ ಸಶಸ್ತ್ರ ಪಡೆಗಳ ತ್ಯಾಗ-ಬಲಿದಾನಗಳನ್ನು ಬಳಸಿಕೊಳ್ಳುವ ಅತ್ಯಂತ ನೀತಿಗೆಟ್ಟ ಆಕ್ರಮಣಕಾರೀ ಪ್ರಚಾರಕ್ಕೆ ಇಳಿದಿದ್ದಾರೆ. ಈ ಪ್ರಕ್ರಿಯೆಯಲ್ಲಿ ಅವರು ಮತ್ತು ಬಿಜೆಪಿ-ಆರೆಸ್ಸೆಸ್ ಕೂಟ ಚುನಾವಣಾ ಆಯೋಗ ಹಾಕಿಕೊಟ್ಟಿರುವ ಮಾದರಿ ಆಚಾರ ಸಂಹಿತೆಯನ್ನು ಯಾವುದೇ ನಾಚಿಕೆಯಿಲ್ಲದೆ ಉಲ್ಲಂಘಿಸುತ್ತಿದ್ದಾರೆ ಎಂದು ಯೆಚುರಿ ಪಕ್ಷದ ಕೇಂದ್ರಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ಬರೆದಿರುವ ಲೇಖನದಲ್ಲಿ ಹೇಳಿದ್ದಾರೆ. ಚುನಾವಣಾ ಆಯೋಗ ತನ್ನದೇ ಮಾರ್ಗಸೂಚಿಗಳ ಇಂತಹ ಉಲ್ಲಂಘನೆಗಳಿಗೆ ಏಕೆ ಅವಕಾಶ ಮಾಡಿಕೊಡುತ್ತಿದೆ ಎಂದು ಕಾರಣಗಳನ್ನು ಹುಡುಕುವ ಅಗತ್ಯವೇನಾದರೂ ಇದೆಯೇ ಎಂದು ಈ ಬಗ್ಗೆ ಈಗಾಗಲೇ ನೇರವಾಗಿ ಮುಖ್ಯ ಚುನಾವಣಾ ಆಯುಕ್ತರಿಗೆ ಪತ್ರ ಬರೆದಿರುವ (ಈ ಸಂಚಿಕೆಯ ಪುಟ 2 ನೋಡಿ) ಯೆಚುರಿ ತಮ್ಮ ಲೇಖನದಲ್ಲಿ ಖಾರವಾಗಿ ಪ್ರಶ್ನಿಸಿದ್ದಾರೆ.

ತಮ್ಮ ಲೇಖನದ ಕೊನೆಯಲ್ಲಿ ಯೆಚುರಿಯವರು ಮೋದಿ ಈಗ ನಡೆಸಿರುವ ನೀತಿಗೆಟ್ಟ ಪ್ರಚಾರದಲ್ಲಿ ಎತ್ತುತ್ತಿರುವ ಭಾವಾವೇಶದ ಪ್ರಶ್ನೆಗಳನ್ನು ಹೀಗೆ ಪರಿಶೀಲಿಸುತ್ತಾರೆ:

ಮೋದಿ ದಾವೆ: ಗಡಿಯಾಚೆಯ ಭಯೋತ್ಪಾದನೆಯನ್ನು ನಿರ್ಮೂಲ ಮಾಡಿದ್ದೇವೆ.

ವಾಸ್ತವತೆ: ಗಡಿಯಾಚೆಯಿಂದ ಭಯೋತ್ಪಾದನೆಯನ್ನು ಪ್ರಚೋದಿಸುವ ಪಾಕಿಸ್ತಾನದ ಪ್ರಯತ್ನಗಳನ್ನು ಸೋಲಿಸುವ ಸಾಮರ್ಥ್ಯವುಳ್ಳ 56 ಅಂಗುಲ ಎದೆಯನ್ನು ಹೊಂದಿದ್ದೇನೆ ಎಂದು ಕೊಚ್ಚಿಕೊಳ್ಳುತ್ತ ಮೋದಿ ಪ್ರಧಾನ ಮಂತ್ರಿಯಾದದ್ದು. ಇಂದು ತಾನು ಭಯೋತ್ಪಾದಕರಲ್ಲಿ ಭೀತಿಯ ಭಾವವನ್ನು ಉಂಟುಮಾಡುವಲ್ಲಿ ಯಶಸ್ವಿಯಾಗಿದ್ದೇನೆ ಎಂದು ಭಾವೋನ್ಮತ್ತತೆಯಿಂದ ಪ್ರಚಾರ ಮಾಡುತ್ತಿದ್ದಾರೆ.

ಆದರೆ ನಿಜಸಂಗತಿಯಾದರೂ ಏನು?

2009-14 ರ ಅವಧಿಗೆ ಹೋಲಿಸಿದರೆ, 2014-19ರಲ್ಲಿ ನರೇಂದ್ರ ಮೋದಿ ಅಡಿಯಲ್ಲಿ ಭಾರತದಲ್ಲಿ ಭಯೋತ್ಪಾದಕ ದಾಳಿಗಳ ಸಂಖ್ಯೆ 109ರಿಂದ 626ಕ್ಕೇರಿತು. ಮತ್ತು ಪಾಕಿಸ್ತಾನದಿಂದ ಕದನವಿರಾಮ ಉಲ್ಲಂಘನೆಗಳು 563 ರಿಂದ 5596 ಕ್ಕೆ ಏರಿದವು. ಹುತಾತ್ಮರಾದ ನಮ್ಮ ಭದ್ರತಾಪಡೆಗಳ ಸಿಬ್ಬಂದಿಯ ಸಂಖ್ಯೆ 139 ರಿಂದ 483 ಕ್ಕೇರಿತು; ಭಯೋತ್ಪಾದಕ ದಾಳಿಗಳಿಂದ ಸಾವಿಗೀಡಾದ ನಾಗರಿಕರ ಸಂಖ್ಯೆ 12 ರಿಂದ 210 ಕ್ಕೆ ಏರಿತು.

ಮೋದಿ ಸರಕಾರದ ಜಮ್ಮು ಮತ್ತು ಕಾಶ್ಮೀರ ಧೋರಣೆಯಿಂದಾಗಿ ಉಗ್ರರ ಪಡೆಗಳಿಗೆ ಸೇರಿಕೊಳ್ಳುವ ಸ್ಥಳೀಯ ಯುವಜನರ ಸಂಖ್ಯೆ ಕೂಡ 2014 ರಲ್ಲಿ ಕೇವಲ 16 ಇದ್ದದ್ದು 2018ರಲ್ಲಿ 191 ಕ್ಕೇರಿತು.

ಉರಿಯಲ್ಲಿನ ಮಿಲಿಟರಿ ನೆಲೆಯ ಮೇಲೆ ಭಯೋತ್ಪಾದಕ ದಾಳಿಯ ನಂತರ ಭಾರತೀಯ ಸೇನೆ 'ಮಿಂಚಿನ ಪ್ರಹಾರ'(ಸರ್ಜಿಕಲ್ ಸ್ಟ್ರೈಕ್) ನಡೆಸಿತು. ಮೋದಿ ಮತ್ತು ಬಿಜೆಪಿ ಸರಕಾರ ಗಡಿಯಾಚೆಯ ಭಯೋತ್ಪಾದಕತೆಗೆ ಅನುಕೂಲಮಾಡಿಕೊಡುವುದನ್ನು ಧ್ವಂಸ ಮಾಡಿರುವುದಾಗಿಯೂ, ಇನ್ನು ಮುಂದೆ ಗಡಿಯಾಚೆಯಿಂದ ಭಯೋತ್ಪಾದಕ ದಾಳಿ ನಡೆಯುವುದಿಲ್ಲ ಎಂದೂ ಹೇಳಿಕೊಂಡರು. ನಂತರ ಬಂತು ನಮ್ಮ 40 ಸಿಆರ್‌ಪಿಎಫ್ ಸೈನಿಕರನ್ನು ಬಲಿ ತೆಗೆದುಕೊಂಡ ಪುಲ್ವಾಮ ಭಯೋತ್ಪಾದಕ ದಾಳಿ. ಅದಾದ ನಂತರ ಭಾರತೀಯ ವಾಯು ಪಡೆ ಪಾಕಿಸ್ತಾನದ ಒಳಗೆ ಬಾಲಕೋಟ್‌ನಲ್ಲಿ ಭಯೋತ್ಪಾದಕ ನೆಲೆಗಳ ಮೇಲೆ ಯಶಸ್ವಿಯಾಗಿ ಗುರಿಯಿಟ್ಟಾಗ, ಭಾರತ ಭವಿಷ್ಯದ ಎಲ್ಲ ಭಯೋತ್ಪಾದಕ ದಾಳಿಗಳನ್ನು ನಿರ್ಮೂಲವಲ್ಲದಿದ್ದರೂ ಅಸ್ವಸ್ಥಗೊಳಿಸಿದೆ ಎಂದು ನಮಗೆ ಹೇಳಲಾಯಿತು. ಬಾಲಕೋಟ್ ನಂತರವೂ ಭಯೋತ್ಪಾದಕ ದಾಳಿಗಳು ಮುಂದುವರೆದಿವೆ, ಇನ್ನಷ್ಟು ಭದ್ರತಾ ಸಿಬ್ಬಂದಿ ಹುತಾತ್ಮರಾಗಿದ್ದಾರೆ. ಜಮ್ಮು ಮತ್ತು ಕಾಶ್ಮೀರದ ಜಮ್ಮು ಪ್ರದೇಶದ ಜನನಿಬಿಡ ಪ್ರದೇಶಗಳಲ್ಲಿ ಬಾಂಬುಗಳನ್ನಿಟ್ಟ ಭಯೋತ್ಪಾದಕ ದಾಳಿಗಳಿಂದಾಗಿ ನಾಗರಿಕರು ಗಾಯಗೊಂಡಿದ್ದಾರೆ.

ಇದು ಮೋದಿಯವರ 56 ಅಂಗುಲ ಎದೆಯ ವಾಸ್ತವತೆ!

ಮತ್ತೊಂದು ದಾವೆ: ಮೋದಿಯೆಂದರೆ ಪಾಕಿಸ್ತಾನಕ್ಕೆ ಭಯ.

ವಾಸ್ತವತೆ: ಎಲ್ಲ ಬಣ್ಣಗಳ ಮೂಲಭೂತವಾದಗಳು ಪರಸ್ಪರ ಪೋಷಿಸುತ್ತವೆ ಎಂಬುದು ಸಾಬೀತಾಗಿರುವ ಸಂಗತಿ. ಪಾಕಿಸ್ತಾನಕ್ಕೆ ಬಿಜೆಪಿ/ಆರೆಸ್ಸೆಸ್ ಮತ್ತು ಮೋದಿಯೆಂದರೆ ಭಯ ಎನ್ನುವುದು ಸಂಪೂರ್ಣವಾಗಿ ವಾಸ್ತವತೆಗೆ ವಿರುದ್ಧವಾದ ದಾವೆ. ನಿಜ ಹೇಳಬೇಕೆಂದರೆ, ಮುಸ್ಲಿಂ ಮೂಲಭೂತವಾದ ಮತ್ತು ಹಿಂದೂ ಕೋಮುವಾದ ಪರಸ್ಪರ ಪೋಷಿಸಿಕೊಳ್ಳುತ್ತವೆ ಮತ್ತು ಪರಸ್ಪರರಿಂದ ಶಕ್ತಿ ಪಡೆಯುತ್ತವೆ.

ಈ ಹಿಂದೆ 1999ರಲ್ಲಿ, ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಬಿಜೆಪಿ ಸರಕಾರ ಲೋಕಸಭೆಯಲ್ಲಿ ಬಹುಮತ ಕಳಕೊಂಡ ನಂತರ ನಡೆದ ಸಾರ್ವತ್ರಿಕ ಚುನಾವಣೆಗಳ ಸಂದರ್ಭದಲ್ಲಿ ಲಷ್ಕರ್-ಎ-ತಯ್ಬಾ ದವರನ್ನು, ಭಾರತದ ಸಾರ್ವತ್ರಿಕ ಚುನಾವಣೆಗಳಲ್ಲಿ ಯಾರು ಗೆಲ್ಲಬೇಕು ಎಂದು ಬಯಸುತ್ತೀರಿ ಎಂದು ಕೇಳಲಾಯಿತು. ಅದಕ್ಕೆ ಆ ಸಂಘಟನೆಯ ಮಾಹಿತಿ ಕಾರ್ಯದರ್ಶಿಯ ಉತ್ತರ ಹೀಗಿತ್ತು: "ಬಿಜೆಪಿ ನಮಗೆ ಅನುಕೂಲಕರ. ಒಂದೇ ವರ್ಷದಲ್ಲಿ ಅವರು ನಮ್ಮನ್ನು ಒಂದು ಪರಮಾಣು ಮತ್ತು ಕ್ಷಿಪಣಿ ಶಕ್ತಿಯನ್ನಾಗಿ ಮಾಡಿದ್ದಾರೆ. ಬಿಜೆಪಿಯ ಹೇಳಿಕೆಗಳಿಂದಾಗಿ ಲಷ್ಕರ್-ಎ-ತಯ್ಬಾ ಉತ್ತಮ ಸ್ಪಂದನೆಯನ್ನು ಪಡೆಯುತ್ತಿದೆ. ಈಗ ಪರಿಸ್ಥಿತಿ ಹಿಂದೆ ಇದ್ದುದ್ದಕ್ಕಿಂತಲೂ ಬಹಳ ಉತ್ತಮವಾಗಿದೆ. ಅವರು ಮತ್ತೆ ಅಧಿಕಾರಕ್ಕೆ ಬರಲಿ ಎಂದು ನಾವು ದೇವರನ್ನು ಪ್ರಾರ್ಥಿಸುತ್ತೇವೆ. ಆಗ ನಾವು ಇನ್ನೂ ಬಲಿಷ್ಠರಾಗಿ ಮೂಡಿ ಬರುತ್ತೇವೆ"(ಹಿಂದುಸ್ತಾನ್ ಟೈಮ್ಸ್, ಜುಲೈ 19, 1999).



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ವಾರ್ತಾಭಾರತಿ

'ಸ್ಪೈ ಕ್ರಾನಿಕಲ್ಸ್' ಎಂಬ ಇಬ್ಬರು ಮಾಜಿ ಗುಪ್ತಚರ ಮುಖ್ಯಸ್ಥರು, ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ನ ಮಾಜಿ ಮಹಾನಿರ್ದೇಶಕ ಲೆ ।ಜ ।(ನಿವೃತ್ತ) ಅಸದ್ ದುರ್ರಾನಿ ಮತ್ತು ಭಾರತದ ಗುಪ್ತಚರ ಸಮಸ್ಥೆ ಆರ್‌ಎಡಬ್ಲ್ಯು ನ ಮುಖ್ಯಸ್ಥ ಎ.ಎಸ್. ದುಲಾತ್ ಜಂಟಿಯಾಗಿ ಬರೆದಿರುವ ಪುಸ್ತಕ, ಭಾರತೀಯ ಪ್ರಧಾನ ಮಂತ್ರಿ ನರೇಂದ್ರ ಮೋದಿ ಐಎಸ್‌ಐ ಆದ್ಯತೆಯ ಆಯ್ಕೆ ಎನ್ನುತ್ತದೆ. "ಮೋದಿ ಪ್ರಧಾನ ಮಂತ್ರಿಯಾಗಿ ಚುನಾಯಿತರಾದ್ದಕ್ಕೆ ಪಾಕಿಸ್ತಾನದ ಪ್ರತಿಕ್ರಿಯೆಯೆಂದರೆ ಅದು ಭಾರತಕ್ಕೆ ಒಳ್ಳೆಯದು ಎಂದು. ಮೋದಿ ಭಾರತವನ್ನು ನೋಡಿಕೊಳ್ಳಲಿ, ಅದರ ಪ್ರತಿಷ್ಠೆಯನ್ನು ಧ್ವಂಸ ಮಾಡಲಿ, ಮತ್ತು ಬಹುಶಃ ಅದರ ಆಂತರಿಕ ಸಮತೋಲನವನ್ನು ಕೂಡ". ಹೀಗೆ ಭಾರತದ ಚುನಾವಣೆಗಳಲ್ಲಿ ಗೆಲ್ಲಬೇಕಾದವರನ್ನು ಕುರಿತಂತೆ ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐನ ಆಯ್ಕೆ ಸ್ಪಷ್ಟ.

ಸುಮಾರಾಗಿ, ಇದನ್ನೇ ದೃಢಪಡಿಸುತ್ತ, ಇದೇ 2019ರ ಎಪ್ರಿಲ್ 10 ರಂದು, ನಮ್ಮಲ್ಲಿ ಮೊದಲ ಹಂತದ ಮತದಾನದ ಒಂದು ದಿನದ ಹಿಂದೆಯಷ್ಟೇ, ಪಾಕಿಸ್ತಾನದ ಪ್ರಧಾನ ಮಂತ್ರಿ ಇಮ್ರಾನ್ ಖಾನ್ ಭಾರತದ ಪ್ರಧಾನ ಮಂತ್ರಿ ನರೇಂದ್ರ 'ಮೋದಿಗೆ ತಮ್ಮ ಅನುಮೋದನೆಯನ್ನು ಕೊಟ್ಟರು. ಹಲವಾರು ವಿದೇಶಿ ಮಾಧ್ಯಮಗಳ ಪತ್ರಕರ್ತರ ಮುಂದೆ ಮಾತಾಡುತ್ತ ಅವರು ಮೋದಿಯವರು ಗೆಲ್ಲುತ್ತಾರೆ ಎಂಬ ನಿರೀಕ್ಷೆಯನ್ನು ವ್ಯಕ್ತಪಡಿಸಿದರು, ಏಕೆಂದರೆ, ಅದರಿಂದ ಭಾರತ-ಪಾಕಿಸ್ತಾನ ಶಾಂತಿಗೆ ಒಂದು ಉತ್ತಮ ಅವಕಾಶ ಸಿಗುತ್ತದೆ ಎಂದರು.

ಮೋದಿಯವರೇ, ಭಾರತದಲ್ಲಿ ಯಾರು ಗೆಲ್ಲಬೇಕೆಂದು ಪಾಕಿಸ್ತಾನ ಬಯಸುತ್ತದೆ ಎಂಬುದಕ್ಕೆ ಇನ್ನೇನಾದರೂ ಹೇಳಬೇಕಾದ ಅಗತ್ಯ ಇದೆಯೇ? ಭಾರತದಲ್ಲಿ ಹಿಂದುತ್ವ ಕೋಮುವಾದ ಬಲಿಷ್ಟವಾದಷ್ಟು ಪಾಕಿಸ್ತಾನದಲ್ಲಿ ಮುಸ್ಲಿಂ ಮೂಲಭೂತವಾದ ಬಲಿಷ್ಟಗೊಳ್ಳುತ್ತದೆ. ನಿಜ ಹೇಳಬೇಕೆಂದರೆ ಇವರು 'ಹೇಳಿ ಮಾಡಿಸಿದ ಜೋಡಿ'.

ಭಾರತೀಯ ಜನತೆ ಖಂಡಿತವಾಗಿಯೂ ಈ ಭಾವೋನ್ಮಾದ ಬಡಿದೆಬ್ಬಿಸುವ ಹಿಂದಿರುವ ತಂತ್ರವನ್ನು ಕಾಣುತ್ತಾರೆ, ಕಳೆದ ಐದು ವರ್ಷಗಳಲ್ಲಿ ತಮ್ಮ ದೈನಂದಿನ ಬದುಕಿನ ಅನುಭವಗಳ ಆಧಾರದಲ್ಲಿ ತಮ್ಮ ಮತವನ್ನು ಚಲಾಯಿಸುತ್ತಾರೆ ಎಂದು ತಮ್ಮ ಲೇಖನದ ಕೊನೆಯಲ್ಲಿ ಹೇಳುತ್ತ, ಯೆಚುರಿಯವರು, ಈ ಬಿಜೆಪಿ ಸರಕಾರದ ಸೋಲು ಸನ್ನಿಹಿತವಾಗಿದೆ, ಅದು ಚುನಾವಣೆಗಳ ನಂತರ, ಒಂದು ಪರ್ಯಾಯ ಜಾತ್ಯತೀತ ಸರಕಾರದ ರಚನೆಗೆ ದಾರಿ ಮಾಡಿಕೊಡುತ್ತದೆ ಎಂದಿದ್ದಾರೆ.

ಪೆಪ್ಸಿಕೊ ಗುಜರಾತಿನ ರೈತರ ಮೇಲೆ ಹಾಕಿರುವ ಕೇಸನ್ನು ಹಿಂಪಡೆಯಬೇಕು ಮತ್ತು ಭಾರತದ ರೈತರ ಕ್ಷಮೆ ಕೋರಬೇಕು, ಮೋದಿ ಸರಕಾರ ತಕ್ಷಣವೇ ಮಧ್ಯಪ್ರವೇಶಿಸಬೇಕು- ಎಐಕೆಎಸ್

ಗುಜರಾತಿನ ಆಲೂಗಡ್ಡೆ ರೈತರನ್ನು ರಕ್ಷಿಸಲು ಮೋದಿ ಸರಕಾರ ತಕ್ಷಣವೇ ಮಧ್ಯಪ್ರವೇಶಿಸಬೇಕು, ಈ ರೈತರನ್ನು ಬಹುರಾಷ್ಟ್ರೀಯ ಕಂಪನಿ ಪೆಪ್ಸಿಕೊ ಅನೈತಿಕವಾಗಿ ಮೊಕದ್ದಮೆಗಳಲ್ಲಿ ಸಿಲುಕಿಸಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಹೇಳಿದೆ.

9 ಗುಜರಾತೀ ರೈತರು ಒಂದು ವಿಧದ ಆಲೂಗಡ್ಡೆಯನ್ನು ಸಾಗುವಳಿ ಮಾಡಿದ್ದಕ್ಕಾಗಿ ತಲಾ 1.05 ಕೋಟಿ ರೂ. ತೆರಬೇಕು ಎಂದು ಪೆಪ್ಸಿಕೊ ಕೇಳಿದೆ. ಅಹಮದಾಬಾದಿನ ಒಂದು ಕೋರ್ಟಿನಲ್ಲಿ ಈ ಮೊಕದ್ದಮೆ ನಡೆಯುತ್ತಿದೆ. ಪೆಪ್ಸಿಕೊ ಹಾಕಿರುವ ಈ ಮೊಕದ್ದಮೆ 'ಸಸ್ಯ ವೈವಿಧ್ಯತೆಯ ಮತ್ತು ರೈತರ ಹಕ್ಕುಗಳ ರಕ್ಷಣೆ ಕಾಯ್ದೆ, 2001'ರ ಉಲ್ಲಂಘನೆಯಾಗಿದೆ, ಈ ಕಾಯ್ದೆ ರೈತರಿಗೆ "ಒಂದು ವಿಧದ ಬೀಜವೂ ಸೇರಿದಂತೆ ತಮ್ಮ ಕೃಷಿ ಉತ್ಪನ್ನವನ್ನು ಉಳಿಸಿಕೊಳ್ಳುವ, ಬಳಸುವ, ಬಿತ್ತುವ, ಮತ್ತೆ ಬಿತ್ತುವ, ವಿನಿಮಯ ಮಾಡಿಕೊಳ್ಳುವ, ಹಂಚಿಕೊಳ್ಳುವ ಅಥವ ಮಾರುವ " ಹಕ್ಕು, ಅವರು ಬ್ರಾಂಡೆಡ್ ಬೀಜವನ್ನು ಮಾರಾಟ ಮಾಡದ ವರೆಗೆ ಇದೆ ಎಂದು ಸ್ಪಷ್ಟವಾಗಿ ಉಲ್ಲೇಖಿಸಿದೆ ಎಂದಿರುವ ಎಐಕೆಎಸ್ ಪೆಪ್ಸಿಕೊ ಕೂಡಲೇ ಈ ಮೊಕದ್ದಮೆಗಳನ್ನು ಹಿಂದಕ್ಕೆ ಪಡೆಯಬೇಕು ಮತ್ತು ಭಾರತದ ರೈತರಲ್ಲಿ ಕ್ಷಮೆ ಕೋರಬೇಕು ಎಂದು ಆಗ್ರಹಿಸಿದೆ.

ಎಐಕೆಎಸ್ ಮತ್ತು ಇತರ ರೈತ ಸಂಘಟನೆಗಳು ಈಗಾಗಲೇ 'ಸಸ್ಯ ವೈವಿಧ್ಯಗಳು ಮತ್ತು ರೈತರ ಹಕ್ಕುಗಳ ಪ್ರಾಧಿಕಾರ'(ಪಿಪಿವಿ&ಎಫ್‌ಆರ್‌ಎ)ಬಳಿಗೆ ಹೋಗಿ ತುರ್ತಾಗಿ ಮಧ್ಯಪ್ರವೇಶಿಬೇಕು ಎಂದು ಕೇಳಿವೆ. ಇದು ಡಬ್ಲ್ಯುಟಿಒ ವ್ಯವಸ್ಥೆಯ ಅಡಿಯಲ್ಲಿ ರೈತರ ಕಾರ್ಪೊರೇಟ್ ಶೋಷಣೆಯ ಒಂದು ಪರೀಕ್ಷಾ ಪ್ರಕರಣವಾಗಿದೆ ಎಂದಿರುವ ಎಐಕೆಎಸ್ ರೈತಾಪಿ ಜನಗಳ ಮತ್ತು ದೇಶದ ಹಕ್ಕುಗಳನ್ನು ಕಾರ್ಪೊರೇಟ್‌ಗಳಿಗೆ ಸಂಪೂರ್ಣವಾಗಿ ಬಿಟ್ಟು ಕೊಡಲು ಹಿಂದಿನ ಕಾಂಗ್ರೆಸ್ ಮತ್ತು ಬಿಜೆಪಿ ನೇತೃತ್ವದ ಸರಕಾರಗಳೇ ಹೊಣೆ ಎಂದಿದೆ. **ಈ ಎರಡೂ ಪಕ್ಷಗಳು ಈಗ ಈ ಕೇಸಿನಲ್ಲಿ ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕಿದೆ ಎಂದೂ ಅದು ಹೇಳಿದೆ.**

ಈ ನಡುವೆ ರೈತ ಸಂಘಟನೆಗಳ ಪ್ರತಿಭಟನೆಗಳನ್ನು ಕಂಡ ಪೆಪ್ಸಿಕೊ ಕೆಲವು ಶರತ್ತುಗಳನ್ನು ಒಪ್ಪಿದರೆ ತಾನು ಕೋರ್ಟಿನ ಹೊರಗೆ ಇತ್ಯರ್ಥಕ್ಕೆ ಸಿದ್ಧ ಎಂದು ಎಪ್ರಿಲ್ 26ರಂದು ಕೋರ್ಟಿನಲ್ಲಿ ಹೇಳಿರುವುದಾಗಿ ವರದಿಯಾಗಿದೆ.

ಆದರೆ ಎಐಕೆಎಸ್, ಇಂತಹ ಶರತ್ತಿನ ಇತ್ಯರ್ಥದ ಪ್ರಶ್ನೆಯೇ ಇಲ್ಲ, ಪೆಪ್ಸಿಕೊ ತನ್ನ ಕೇಸನ್ನು ಹಿಂದಕ್ಕೆ ಪಡೆಯಬೇಕು ಎಂದು ಆಗ್ರಹಿಸಿದೆ. ಅದುವರೆಗೆ ಈ ಕಂಪನಿಯ 'ಲೇಸ್' ಮತ್ತಿತರ ಆಲೂಗಡ್ಡೆ ಉತ್ಪನ್ನಗಳನ್ನು ಬಹಿಷ್ಕರಿಸಬೇಕು ಎಂದು ಕರೆ ನೀಡಿದೆ.

ಎಐಕೆಎಸ್, ಇತರ ರೈತಸಂಘಟನೆಗಳು ಮತ್ತು ಕಾರ್ಮಿಕ ಸಂಘಟನೆಗಳ ಜತೆಗೂಡಿ ಇಂತಹ ಕಾರ್ಪೊರೇಟ್ ಶೋಷಣೆಗೆ ಅವಕಾಶ ಮಾಡಿಕೊಡುವ ನವ-ಉದಾರವಾದಿ ಧೋರಣೆಗಳ ವಿರುದ್ಧ ದುಡಿಯುವ ಜನಗಳನ್ನು ಅಣಿನೆರೆಸುವುದನ್ನು ಮುಂದುವರೆಸುತ್ತದೆ, ಈ ಕಾರ್ಪೊರೇಟ್‌ಗಳ ವಿರುದ್ಧ ರೈತರು ಮತ್ತು ಕಾರ್ಮಿಕರ ಹೆಚ್ಚುತ್ತಿರುವ ಪ್ರತಿರೋಧ ದೇಶದ ಭವಿಷ್ಯವನ್ನು ನಿರ್ಧರಿಸುತ್ತದೆ ಎಂದಿದೆ.

ಸಿಐಟಿಯು ಕೂಡ ಎಐಕೆಎಸ್ ಮತ್ತು ಇತರ ರೈತ ಸಂಘಟನೆಗಳು ಎತ್ತಿಕೊಂಡಿರುವ ಈ ಹೋರಾಟಕ್ಕೆ ಸೌಹಾರ್ದವನ್ನು ವ್ಯಕ್ತಪಡಿಸುತ್ತ ಈ ಕಂಪನಿಯ 'ಲೇಸ್' ಮತ್ತಿತರ ಆಲೂಗಡ್ಡೆ ಉತ್ಪನ್ನಗಳನ್ನು ಬಹಿಷ್ಕರಿಸಬೇಕು ಎಂಬ ಕರೆಯನ್ನು ಬೆಂಬಲಿಸಿದೆ

ನಿರುದ್ಯೋಗ, ಬಡತನ ಮತ್ತು ಮೋದಿ ವರ್ಷಗಳು



ಭಾರತದಲ್ಲಿ ಉದ್ಯೋಗಿ ಮತ್ತು ನಿರುದ್ಯೋಗಿ ಎಂಬ ಸರಳ ವಿಂಗಡಣೆ ಸಾಧ್ಯವಿಲ್ಲ. ಆದ್ದರಿಂದ ಉದ್ಯೋಗದ ಪ್ರಮಾಣವನ್ನು ತಿಳಿಯುವ ಒಂದು ವಿಧಾನವೆಂದರೆ 'ಉದ್ಯೋಗ ವರಮಾನ'ವನ್ನು ಪರಿಶೀಲಿಸುವುದು. ಇದನ್ನು ಅಳೆಯುವ ಒಂದು ವಿಧಾನವೆಂದರೆ, ಆಹಾರ ಸೇವನೆಯಲ್ಲಿ ಕಾಳುಗಳ ತಲಾ ಲಭ್ಯತೆ. ಇದು ದುಡಿಯುವ ಜನ ವಿಭಾಗಗಳಿಗೆ ಮೋದಿ ಆಳ್ವಿಕೆಯ ವರ್ಷಗಳಲ್ಲಿ ಸತತವಾಗಿ ಇಳಿಯುತ್ತ ಬಂದಿದೆ. ಅಂದರೆ ಬಡತನವನ್ನು ಅಳೆಯುವ ಕ್ಯಾಲೊರಿ ಸೇವನೆಯ ಪ್ರಮಾಣವೂ ಇಳಿಯುತ್ತ ಬಂದಿದೆ. ಆದರೆ ಮೋದಿ ಸರಕಾರ, ನಿಜವಾಗಿಯೂ ಬಡತನ ಮತ್ತು ನಿರುದ್ಯೋಗವನ್ನು ಅನುಭವಿಸುತ್ತಿರುವ ಜನತೆಗೆ ಅವರ ಪರಿಸ್ಥಿತಿಗಳಿಗೆ ಸಂಬಂಧಪಟ್ಟ ಅಂಕಿ-ಅಂಶಗಳು ಗೊತ್ತಾಗದಂತೆ ತಡೆಹಿಡಿಯುವ ಮೂಲಕ, ಸರ್ವಾಧಿಕಾರಶಾಹಿತ್ವವನ್ನು ಮಾತ್ರವಲ್ಲ, ತಮಗೆ ಬಡತನ, ನಿರುದ್ಯೋಗ ಇಲ್ಲ ಎಂದು ಜನರು ಯೋಚಿಸುವಂತೆ ಮಾಡಬಹುದು ಎಂದು ನಂಬುವ ಮೂರ್ಖತನವನ್ನೂ ಪ್ರದರ್ಶಿಸಿದೆ.

ಪ್ರೊ. ಪ್ರಭಾತ್ ಪಟ್ನಾಯಕ್   **ಅನು: ಎಂಜಿ.ವೆಂಕಟೇಶ್**

ಶ್ರಮ್ಲಾದ ಕಾರ್ಮಿಕ ಬ್ಯೂರೋದಿಂದ ಹಿಡಿದು 'ಭಾರತೀಯ ಆರ್ಥಿಕ ವೀಕ್ಷಣಾ ಕೇಂದ್ರ(ಸಿಎಂಐಇ), ಮತ್ತು ಆಕ್ಸ್‌ಫಾಮ್ ವರೆಗೆ ಹಲವಾರು ಸಂಸ್ಥೆಗಳು ಭಾರತದಲ್ಲಿ ಈಗ ಗಂಭೀರವಾಗಿರುವ ನಿರುದ್ಯೋಗ ಪರಿಸ್ಥಿತಿಯತ್ತ ಗಮನ ಸೆಳೆದಿವೆ. ಆದರೆ ಸರ್ಕಾರ ಇದನ್ನು ನಿರಂತರವಾಗಿ ನಿರಾಕರಿಸುತ್ತಾ ಬಂದಿರುವುದೇ ಅಲ್ಲದೇ, ತಾನು ಒಪ್ಪದ ಅಧಿಕೃತವಾದ ಅಂಕಿ ಅಂಶಗಳನ್ನೇ ಮುಚ್ಚಿಹಾಕಿದೆ.

ಈಗಿನ ಸರ್ಕಾರದ ಸ್ಥಿತಿ ಕಥೆಗಳಲ್ಲಿ ಬರುವ ಪರದೆ ಹಿಂದೆ ಬಿಚ್ಚಿಟ್ಟು ಕೊಂಡಿರುವ ಕಳ್ಳನ ರೀತಿಯದಾಗಿದೆ. ಅವನ ಬೂಟುಗಳು ಪರದೆಯ ಕೆಳಗೆ ಕಾಣುತ್ತಿರುವಂತೆ ಬೇರೆ ಬೇರೆ ಕಡೆಗಳಲ್ಲಿ ಸಿಗುವ ಅಂಕಿ ಅಂಶಗಳು ಸತ್ಯವನ್ನು ಹೊರಗೆಡಹುತ್ತಿವೆ. ಈ ವಿವಿಧ ಸ್ಥಳಗಳೆಂಬುದು ಯಾವುದೋ ದೂರದ ಮೂಲಗಳಲ್ಲ, ಸರಕಾರದ ವಾರ್ಷಿಕ ಆರ್ಥಿಕ ಸರ್ವೇಯಲ್ಲಿ ಪ್ರಮುಖವಾದ ಕೋಷ್ಟಕಗಳಲ್ಲಿ ಪ್ರಕಟವಾಗಿರುವಂತವುಗಳೇ.

ನಿರುದ್ಯೋಗದ ವಿಷಯ ಬಹಳ ನಾಜೂಕಿನದ್ದು, ಅದೂ ಭಾರತದಲ್ಲಿ. ಆದ್ದರಿಂದ ಈ ಬಗ್ಗೆ ಎಚ್ಚರವಹಿಸಬೇಕು. ಇಲ್ಲಿರುವುದು 'ಉದ್ಯೋಗಿ' ಮತ್ತು 'ನಿರುದ್ಯೋಗಿ' ಎಂಬ ಸರಳ ವ್ಯತ್ಯಾಸವಲ್ಲ. ಇದು ವಾಸ್ತವವಾಗಿ, ಅರೆ ಉದ್ಯೋಗ, ಕೆಲವು ಗಂಟೆಗಳ ಉದ್ಯೋಗ, ತಾತ್ಕಾಲಿಕ ಉದ್ಯೋಗ, ಹಂಗಾಮಿ ಉದ್ಯೋಗ ಇವೆಲ್ಲದರ ಮಿಶ್ರಣವಾಗಿರುತ್ತದೆ. ಕೆಲವಷ್ಟೇ ಜನರಿಗೆ ಮಾತ್ರ ಅವರ ಇಷ್ಟದಂತೆ ಪೂರ್ಣ ಪ್ರಮಾಣದ ಉದ್ಯೋಗ ಲಭಿಸಿರುತ್ತದೆ.

ಆದ್ದರಿಂದ ಉದ್ಯೋಗದ ಪ್ರಮಾಣ ಏರಿದೆಯೆಂದರೆ ಎಷ್ಟರ ಮಟ್ಟಿನ ಉದ್ಯೋಗ ಎಂದು ನೋಡಬೇಕಾಗಿದೆ. ಮತ್ತು ಇದು ತಿಳಿಯುವ ಒಂದು ವಿಧಾನವೆಂದರೆ ನಿಜ ವರಮಾನದ ಹೆಚ್ಚಳ ಎಷ್ಟಾಗಿದೆ ಎಂಬುದನ್ನು ಪರಿಶೀಲಿಸುವುದು.

ಆರ್ಥಿಕ ತಜ್ಞರು ಈ ಹೆಚ್ಚಳವನ್ನು ಅಳೆಯಲು "ಉದ್ಯೋಗ ವರಮಾನ" ಎಂಬ ಪದವನ್ನು ಬಳಸುತ್ತಾರೆ. ನಿರುದ್ಯೋಗ ಎಂದರೆ ಒಟ್ಟು ದುಡಿಯುವ ಜನಗಳಲ್ಲಿ ಒಂದು ನಿರ್ದಿಷ್ಟ ಮಿತಿಗಿಂತ ಕಡಿಮೆ ವರಮಾನ ಪಡೆಯುವವರ ಅನುಪಾತ ಎಂದು ಕಾಣಬಹುದು. ನಿರುದ್ಯೋಗ ಕಡಿಮೆಯಾದಾಗ ಸುಮಾರಾಗಿ ಹೇಳುವುದಾದರೆ, ದುಡಿಯುವ ಜನವಿಭಾಗಗಳ ತಲಾ ವರಮಾನ ಹೆಚ್ಚಾಗಬೇಕಾಗುತ್ತದೆ. ಅದರಂತೆ ನಿರುದ್ಯೋಗ ಹೆಚ್ಚಾದಾಗ ದುಡಿಯುವ ವ್ಯಕ್ತಿಗಳ ತಲಾ ವರಮಾನ ಸಹಜವಾಗಿಯೇ ಕುಸಿಯುತ್ತದೆ. ಆದ್ದರಿಂದ ನಾವು ಉದ್ಯೋಗದ ಹಂತಗಳಿಗೂ ದುಡಿಯುವ ಜನರಿಗೂ ಮತ್ತು ಅವರ ತಲಾ ವರಮಾನಕ್ಕೂ ಸಂಬಂಧವಿರುವುದನ್ನು ಅಧಾರ ಸೂತ್ರವಾಗಿ ಪರಿಗಣಿಸಬಹುದು. ಮೋದಿ ಸರ್ಕಾರದ ಅವಧಿಯಲ್ಲಿ ದುಡಿಯುವ ಜನರ ನಿಜ ತಲಾ ವರಮಾನದ ಸ್ಥಿತಿ-ಗತಿಯೇನು ಎಂಬುದು ಈಗ ನಮ್ಮ ಮುಂದಿರುವ ಪ್ರಶ್ನೆ.

ದುಡಿಯುವ ಜನತೆಯ ತಲಾ ನಿಜ ವರಮಾನವನ್ನು ಅಳೆಯಲು ಸರಳವಾದ ಮಾರ್ಗವಿದೆ. ಜನರು ಯಾವಾಗ ಸ್ಥಿತಿವಂತರಾಗುತ್ತಾರೋ ಆಗ ಅವರು ಹೆಚ್ಚು ಹೆಚ್ಚು ವಿವಿಧ ಪ್ರಕಾರದ ವಸ್ತುಗಳನ್ನು ಕೊಳ್ಳುತ್ತಾರೆ. ಜನರು ಸ್ಥಿತಿವಂತರಾಗುವಾಗ ಹೆಚ್ಚಿನ ಬೇಡಿಕೆ ಪಡೆಯುವ ಸರಕುಗಳನ್ನು ಸಕಾರಾತ್ಮಕ ಹಿಗ್ಗುವಿಕೆ ಹೊಂದಿರುವ ಸರಕುಗಳು ಎನ್ನಲಾಗುತ್ತದೆ. ಕಾಳುಗಳು ಇಂತಹ ವಸ್ತುಗಳಲ್ಲಿ ಪ್ರಮುಖವಾದ್ದು. ವರಮಾನ ಹೆಚ್ಚಾದಾಗ ಇವುಗಳ ಬಳಕೆ ಹೆಚ್ಚಾಗುತ್ತದೆ, ಇದು ನೇರವಾಗಿ ಆಗಲಿಕ್ಕಿಲ್ಲ. ನಿಜ, ಬಡವರ ಮಟ್ಟಿಗೆ ಇದು ನೇರವಾಗಿಯೇ ಹೆಚ್ಚುತ್ತದೆ. ಆದರೆ ಸ್ಥಿತಿವಂತರಲ್ಲಿ ಕೂಡ ಪರೋಕ್ಷವಾಗಿ ಕಾಳುಗಳ ಬಳಕೆ ಸಂಸ್ಕರಿಸಿದ ಆಹಾರ ಪಧಾರ್ಥಗಳು ಮತ್ತು ಪ್ರಾಣಿ ಜನ್ಯ ವಸ್ತುಗಳ ರೂಪದಲ್ಲಿ ಹೆಚ್ಚುತ್ತದೆ.

ಸರ್ಕಾರದ ವಾರ್ಷಿಕ ಆರ್ಥಿಕ ಸರ್ವೇಕ್ಷಣೆಯಲ್ಲಿ ಪ್ರತಿ ವರ್ಷ ಲಭ್ಯವಿರುವ ಕಾಳುಗಳ ವಿವರ ಸಿಗುತ್ತದೆ. ಆದರೆ ಅದರ ಬಳಕೆಯ ಒಟ್ಟು ವಿವರ ಲಭ್ಯವಿರುವುದಿಲ್ಲ. ಆದರೆ ನಾವು ಲಭ್ಯತೆ ಮತ್ತು ಬಳಕೆ ಜತೆ-ಜತೆಯಲ್ಲೇ ಸಾಗುತ್ತವೆ ಎಂದು ಭಾವಿಸಬಹುದು. ಆರ್ಥಿಕ ಸರ್ವೇಕ್ಷಣೆಯ ಜನಸಂಖ್ಯೆಯ ಅಂದಾಜು ಖಚಿತವಾಗಿರುವುದಿಲ್ಲ, ಜನಗಣತಿ ನಡೆಯುದ ವರ್ಷಗಳಲ್ಲಿ ಹಿಂದಿನ ಸಾಲಿನ ಸಂಖ್ಯೆಗಳಿಗೆ ಒಂದು ಖಚಿತವಾದ ಸಂಖ್ಯೆಯನ್ನು ಸೇರಿಸಲಾಗುತ್ತದೆ. ವಾಸ್ತವವಾಗಿ ಒಂದು ನಿರ್ದಿಷ್ಟ ಸಂಖ್ಯೆಯನ್ನಲ್ಲ, ಒಂದು ನಿರ್ದಿಷ್ಟ ಪ್ರಮಾಣವನ್ನು ಹಿಂದಿನ ವರ್ಷದ ಜನಸಂಖ್ಯೆಗೆ ಸೇರಿಸಬೇಕು. ನಾವು ಇಲ್ಲಿ ಈ ರೀತಿಯ ಹೊಂದಾಣಿಕೆ ಮಾಡಿಕೊಂಡು ಒಟ್ಟು ಜನಸಂಖ್ಯೆಯ ಕಾಳುಗಳ ತಲಾ ಲಭ್ಯತೆಯನ್ನು ಆರ್ಥಿಕ ಸರ್ವೇಯ ಅಂಕಿಅಂಶಗಳನ್ನು ಆಧಾರವಿಟ್ಟುಕೊಂಡು ಲೆಕ್ಕ ಹಾಕಬಹುದು.

ಹೀಗೆ ಲೆಕ್ಕ ಹಾಕಿದಾಗ, ಮೋದಿ ಸರ್ಕಾರದ ಅವಧಿಯ ಪ್ರತಿ ವರ್ಷದಲ್ಲೂ ಕಾಳುಗಳ ತಲಾ ಲಭ್ಯತೆ ಸ್ಪಷ್ಟವಾಗಿ ದೇಶದಲ್ಲಿ 1991 ರಲ್ಲಿ ನವ-ಉದಾರವಾದಿ ಆರ್ಥಿಕ ಧೋರಣೆಗಳನ್ನು ಆರಂಭಿಸಿದಾಗ ಇದ್ದುದಕ್ಕಿಂತ ಕಡಿಮೆಯಾಗಿದೆ. ಇದು ಮೋದಿಯುವರ ಹಿಂದಿನ ಅವಧಿಗೂ ಸಲುತ್ತದೆ. ಆದರೆ ನಾವು ನೆನಪಿಸಿಕೊಳ್ಳಬೇಕಿರುವುದು ಮೋದಿಯುವರು "ನಿರುದ್ಯೋಗದ ಪ್ರಮಾಣದ ಇಳಿಕೆ"ಯ ಭರವಸೆ ಕೊಟ್ಟು ಅಧಿಕಾರಕ್ಕೆ ಬಂದರು ಎಂಬುದನ್ನು. ನಿರುದ್ಯೋಗ ಈ ಐದು ವರ್ಷಗಳಲ್ಲಿ 1991ರ ಮೊದಲು ಇದ್ದುದಕ್ಕೆ ಹೋಲಿಸಿದರೆ, ಇಳಿಯುವ ಬದಲು ತುಂಬಾ ಹೆಚ್ಚಿದೆ.

ಕತೆ ಇಲ್ಲಿಗೆ ಮುಗಿಯುವುದಿಲ್ಲ. ನಿರುದ್ಯೋಗದ ಪ್ರಮಾಣ ಮೋದಿ ಸರ್ಕಾರದ ಅವಧಿಯಲ್ಲಿ ಪ್ರತಿ ಹಿಂದಿನ ಅವಧಿಗಿಂತ ಹೆಚ್ಚುತ್ತ ಬಂದಿದೆ. 2014ಕ್ಕೆ ಹೋಲಿಸಿದಾಗಲೂ ಕಾಳುಗಳ ತಲಾ ಲಭ್ಯತೆ ಇಳಿಯುತ್ತಲೇ ಬಂದಿದೆ. ಪರಿಣಾಮವಾಗಿ 'ಉದ್ಯೋಗ ವರಮಾನ' ಪ್ರತಿ ವರ್ಷವೂ ಕಡಿಮೆಯಾಗುತ್ತಲೇ ಬಂದಿದೆ.

ಈಗ ಲಭ್ಯವಿರುವ ತಾತ್ಕಾಲಿಕ ಅಂಕಿಅಂಶಗಳಂತೆ 2017 ರಲ್ಲಿ ಕಾಳುಗಳ ಲಭ್ಯತೆ ಒಟ್ಟು ಜನಸಂಖ್ಯೆಗೆ 2014 ರಲ್ಲಿ ಇದ್ದುದಕ್ಕೆ ಸರಿಸಮವಾಗಿದದ್ದರೂ ನಮ್ಮ ದೃಷ್ಟಿಯಿರುವುದು ದುಡಿಯುವ ಜನರಿಗೆ ಲಭ್ಯತೆಯ ಪ್ರಮಾಣದ ಮೇಲೆ, ಏಕೆಂದರೆ ಅದು 'ಉದ್ಯೋಗ ವರಮಾನ'ದ ಮಾಪನವಾಗಿರುತ್ತದೆ. ದೇಶದಲ್ಲಿ ವರಮಾನದ ಅಸಮಾನತೆ ವೇಗವಾಗಿ ಹೆಚ್ಚುತ್ತಿರುವಾಗ ಜನಸಂಖ್ಯೆಯ ಉಳ್ಳವರ ಭಾಗದವರು ಹೆಚ್ಚು ಬೇಳೆಕಾಳುಗಳನ್ನು ನೇರವಾಗಿ ಮತ್ತು ಪರೋಕ್ಷವಾಗಿ ತಲಾ ವರಮಾನ ಹೆಚ್ಚಾಗದಂತೆ ಬಳಸುತ್ತಾರೆ. ಅಂದರೆ ಕಾಳುಗಳ ತಲಾ ಲಭ್ಯತೆ ದುಡಿಯುವ ಜನ ವಿಭಾಗಗಳಿಗೆ 2017 ರಲ್ಲಿ 2014 ಕ್ಕಿಂತ ಕಡಿಮೆಯಾಗಿದೆ ಎಂದೇ ಅರ್ಥ. ಮೋದಿ ಸರ್ಕಾರದ ಅವಧಿಯ ಪ್ರತಿ ವರ್ಷದಲ್ಲೂ ಬೇಳೆಕಾಳುಗಳ ಲಭ್ಯತೆ ದುಡಿಯುವ ಜನತೆಗೆ 2014ನೇ ಸಾಲಿನ ಮಟ್ಟಕ್ಕಿಂತ ಕಡಿಮೆಯಾಗಿರುವುದು ಕಂಡುಬರುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, 'ವರಮಾನ ನಿರುದ್ಯೋಗ'ವನ್ನು ನವ-ಉದಾರವಾದಿ ಧೋರಣೆಗಳ ಅವಧಿಯ ಹಿಂದಿನ ಮಟ್ಟಕ್ಕೆ ಇಳಿಸುವ ಬದಲು, ಮೋದಿಯವರ ಆಳ್ವಿಕೆಯಲ್ಲಿ ನಿಜವಾಗಿ ಕುಸಿಯುತ್ತಿರುವ ವರಮಾನ ನಿರುದ್ಯೋಗವೇ ಕಾಣಬಂದಿದೆ.

ತಲಾ ಕಾಳು ಲಭ್ಯತೆಯ ಕುಸಿತದ ಅವಧಿ ಇನ್ನೂ ಹಲವು ಪರಿಣಾಮ ಸೃಷ್ಟಿಸಿದೆ. ಬಡತನವನ್ನು ಭಾರತದಲ್ಲಿ ಪರಿಗಣಿಸುವುದು ಆಹಾರದ ಕ್ಯಾಲೋರಿ ಸೇವನೆ ಪ್ರಕಾರವಾಗಿದ್ದು ಗ್ರಾಮಾಂತರ ಪ್ರದೇಶಗಳಲ್ಲಿ ತಲಾ 2200 ಕ್ಯಾಲೋರಿ ಮತ್ತು ನಗರ ಪ್ರದೇಶಗಳಿಗೆ ತಲಾ 2100 ಕ್ಯಾಲೋರಿ ನಿಗದಿ ಪಡಿಸಿರುತ್ತಾರೆ. ಸಾಮಾನ್ಯ ಜನರಿಗೆ ಈ ಕ್ಯಾಲೋರಿಗಳು ಲಭ್ಯವಾಗುವುದು ಕಾಳುಗಳ ಮುಖಾಂತರ (ಪ್ರಾಣಿಜನ್ಯ ಪ್ರೊಟೀನ್ ಎಲ್ಲರಿಗೂ ಲಭ್ಯವಾಗದ ಕಾರಣ). ಕಾಳುಗಳ ಲಭ್ಯತೆಯ ಕುಸಿತದಿಂದ 2014 ಗೆ ಹೋಲಿಸಿದಾಗ ಉಳ್ಳವರಿಗೆ ಯಾವ ರೀತಿಯ ಕುಸಿತವೂ ಅನುಭವಕ್ಕೆ ಬಂದಿರುವುದಿಲ್ಲ ಬದಲಿಗೆ ಅವರ ಬಳಕೆ ಹೆಚ್ಚೇ ಆಗಿರುತ್ತದೆ ಎಂಬುದನ್ನು ಮತ್ತೊಮ್ಮೆ ಗಮನದಲ್ಲಿಟ್ಟುಕೊಂಡರೆ, ಬಡತನದ ಮಟ್ಟವೂ ಮೋದಿಯವರು ಅಧಿಕಾರಕ್ಕೆ ಬಂದ ನಂತರ ಹೆಚ್ಚಾಗಿದೆ ಎಂದೇ ಕಂಡು ಬರುತ್ತದೆ.

ಈ ಕುಸಿತದ ತೀವ್ರತೆಯನ್ನು ತಿಳಿಯಬೇಕಾದರೆ, ಭಾರತದಲ್ಲಿ ಈ ಮೊದಲೂ ಕೂಡ ಕಾಳುಗಳ ತಲಾ ಲಭ್ಯತೆ ಚೈನಾ ದೇಶದಲ್ಲಿನ ತಲಾ ಲಭ್ಯತೆಯ ಅರ್ಧದಷ್ಟು ಮಾತ್ರ ಎಂಬುದನ್ನು ಗಮನಿಸಬೇಕು. ಎನ್‌ಎಸ್‌ಎಸ್ ಕಾಲ್ಯೋರಿ ಮತ್ತು ಪ್ರೊಟೀನ್ ಸೇವನೆಯ ಮಾಹಿತಿಯನ್ನು ನಿಯಮಿತವಾಗಿ ಪ್ರಕಟಿಸುತ್ತಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಅದನ್ನು ನಿಲ್ಲಿಸಲಾಗಿದೆ. ಈ ರೀತಿ ಅಂಕಿ ಅಂಶಗಳನ್ನು ಬಿಡುಗಡೆ ಮಾಡದಿರುವುದೇ ಒಂದು ವಿಶಿಷ್ಟ ಸರ್ವಾಧಿಕಾರಶಾಹಿಯ ಲಕ್ಷಣ. ಇದು ಜನರನ್ನು ತಪ್ಪುಹಾದಿಗೆ ಎಳೆಯುವುದೇ ಅಲ್ಲದೆ ಪ್ರಜಾತಂತ್ರದಲ್ಲಿ ಜನತೆಯೇ ಸರ್ವೋಚ್ಚರಾಗಿದ್ದು, ಅವರಿಗೆ ಮಾಹಿತಿಯ ಹಕ್ಕು ಇದೆ ಎಂಬುದನ್ನು ಕೂಡ ನಿರಾಕರಿಸುತ್ತದೆ. ಸಂವಿಧಾನದ ಪ್ರಕಾರ ಸರಕಾರ ಇರುವುದು ಜನತೆಯ ಸೇವೆಗಾಗಿ, ಆದ್ದರಿಂದ ಅವರಿಂದ ಯಾವ ಮಾಹಿತಿಯನ್ನೂ ತಡೆದಿಡುವಂತಿಲ್ಲ. ಇದು ಸರ್ಕಾರದ ಅಸಾಧಾರಣ ಮೂರ್ಖತೆಯ ಕೃತ್ಯವೂ ಆಗಿದೆ. ಏಕೆಂದರೆ, ನಿಜವಾಗಿಯೂ ಬಡತನ ಮತ್ತು ನಿರುದ್ಯೋಗವನ್ನು ಅನುಭವಿಸುತ್ತಿರುವ ಜನತೆಗೆ ಅವರ ಪರಿಸ್ಥಿತಿಗಳಿಗೆ ಸಂಬಂಧಪಟ್ಟ ಅಂಕಿ-ಅಂಶಗಳನ್ನು ತಡೆ ಹಿಡಿಯುವ ಮೂಲಕ ತಮಗೆ ಬಡತನ, ನಿರುದ್ಯೋಗ ಇಲ್ಲ ಎಂದು ಅವರು ಯೋಚಿಸುವಂತೆ ಮಾಡಬಹುದು ಎಂದು ಈ ಸರಕಾರ ನಂಬಿದೆ!

ಸುಸ್ತಿ ಕಾರ್ಪೊರೇಟ್ ಸಾಲಗಳ ಮಾಹಿತಿ ಪ್ರಕಟಣೆ: ಸುಪ್ರಿಂ ಕೋರ್ಟ್ ನಿರ್ದೇಶನಕ್ಕೆ ಬಿಇಎಫ್‌ಐ ಸ್ವಾಗತ

ಸುಪ್ರಿಂ ಕೋರ್ಟ್ ಎಪ್ರಿಲ್ 26ರಂದು ಮಾಹಿತಿ ಹಕ್ಕು ಕಾಯ್ದೆ, 2005 ರ ಅಡಿಯಲ್ಲಿ ಮಾಹಿತಿ ನೀಡುವುದನ್ನು ತಡೆ ಹಿಡಿಯುವುದನ್ನು ನಿಲ್ಲಿಸಬೇಕು ಎಂದು ರಿಝರ್ವ್ ಬ್ಯಾಂಕ್ (ಆರ್‌ಬಿಐ) ಗೆ ನಿರ್ದೇಶನ ನೀಡಿದೆ. ಸಾಲ ಸುಸ್ತಿದಾರರ ಪಟ್ಟಿ, ಬ್ಯಾಂಕುಗಳ ವಾರ್ಷಿಕ ತಪಾಸಣೆ ವರದಿಗಳು ಮತ್ತಿತರ ಮಾಹಿತಿಗಳನ್ನು ತಿಳಿಸಲು ತನ್ನ 'ಮಾಹಿತಿ ನೀಡಿಕೆ ಧೋರಣೆ'ಯಿಂದಾಗಿ ಸಾಧ್ಯವಿಲ್ಲ ಎಂದು ಆರ್‌ಬಿಐ ಹೇಳುತ್ತ ಬಂದಿದ್ದು, ಇದನ್ನು ತನ್ನ ಈ ಹಿಂದಿನ ಡಿಸೆಂಬರ್ 2015ರ ತೀರ್ಪಿಗೆ ಅನುಗುಣವಾಗಿ ತಿದ್ದುಪಡಿ ಮಾಡಬೇಕು ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿದೆ. ಮೋದಿ ಸರಕಾರ ದೊಡ್ಡ ಕಾರ್ಪೊರೇಟ್ ಸುಸ್ತಿದಾರರ ಪಟ್ಟಿಯನ್ನು ಪ್ರಕಟಿಸಲು ಸತತ ಪ್ರತಿರೋಧ ಒಡ್ಡುತ್ತಿರುವ ಹಿನ್ನೆಲೆಯಲ್ಲಿ ಸುಪ್ರಿಂ ಕೋರ್ಟಿನ ಈ ನಿರ್ದೇಶನ ಸ್ವಾಗತಾರ್ಹ ಎಂದು ಭಾರತದ ಬ್ಯಾಂಕ್ ನೌಕರರ ಒಕ್ಕೂಟ(ಬಿಇಎಫ್‌ಐ) ಹೇಳಿದೆ.

ಬಿಇಎಫ್‌ಐ ಮತ್ತು ಬ್ಯಾಂಕ್ ಸಂಘಗಳ ಐಕ್ಯ ವೇದಿಕೆ(ಯುಎಫ್‌ಬಿಯು), ಬ್ಯಾಂಕ್ ಸುಸ್ತಿ ಸಾಲಗಳ ಪ್ರಮಾಣ ವಿಪರೀತವಾಗಿ ಏರುತ್ತಿರುವ ಹಿನ್ನೆಲೆಯಲ್ಲಿ ಕನಿಷ್ಠ 5 ಕೋಟಿ ರೂ.ಗಿಂತ ಹೆಚ್ಚು ಸಾಲಮೊತ್ತವನ್ನು ಸುಸ್ತಿ ಮಾಡಿಕೊಂಡಿರುವ ಕಾರ್ಪೊರೇಟ್‌ಗಳ ಪಟ್ಟಿಯನ್ನಾದರೂ ಪ್ರಕಟಿಸಬೇಕು ಮತ್ತು ಅವರಿಂದ ಬಾಕಿ ಮೊತ್ತವನ್ನು ವಸೂಲಿ ಮಾಡಲು ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಚಳುವಳಿ, ಹೋರಾಟ ನಡೆಸುತ್ತ ಬಂದಿವೆ. ಈ ಹಿಂದೆ 2014ರಲ್ಲಿ 10 ಕೋಟಿ ರೂ.ಗಳಿಗಿಂತ ಹೆಚ್ಚು ಸುಸ್ತಿ ಮಾಡಿಕೊಂಡಿ ದ್ದವರ ಲಭ್ಯವಾದ ಪಟ್ಟಿಯನ್ನೂ ಅವು ಪ್ರಕಟಿಸಿದ್ದವು.

ಆದರೆ ಭಾರತ ಸರಕಾರದ ಪ್ರೋತ್ಸಾಹದೊಂದಿಗೆ, ಆರ್‌ಬಿಐ ಸೇರಿದಂತೆ ಎಲ್ಲ ಹಣಕಾಸು ಸಂಸ್ಥೆಗಳು ಗಂಭೀರ ಅಕ್ರಮಗಳು, ದುರಾಚರಣೆಗಳಿಗೆ ಸಂಬಂಧಪಟ್ಟಂತೆ ಮತ್ತು ತಪ್ಪಿತಸ್ಥರ ಮೇಲೆ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿಗಳನ್ನು ವಾಣಿಜ್ಯ ಹಿತಗಳು, ಸಾರ್ವಜನಿಕ ಹಿತ, ಗಿರಾಕಿಗಳ ಮಾಹಿತಿ ಗೋಪ್ಯತೆ ಮುಂತಾದ ಕಾರಣಗಳನ್ನು ಕೊಟ್ಟು ನಿರಾಕರಿಸುತ್ತ ಬರುತ್ತಿವೆ. ಈ ನಿಲುವು ಸಾರ್ವಜನಿಕ ಹಣದ ನಗ್ನ ಲೂಟಿಗೆ ಪ್ರೋತ್ಸಾಹ ನೀಡಿದೆ ಮತ್ತು ಐಬಿಸಿ, 2016 ನ ಸ್ಥಾಪನೆ ಈ ಲೂಟಿಗೆ ಔಪಚಾರಿಕ ಮನ್ನಣೆ ಕೊಡಿಸಿದೆ ಎಂದಿರುವ ಬಿಇಎಫ್‌ಐ, ಈ ಹಿನ್ನೆಲೆಯಲ್ಲಿ ಸುಪ್ರಿಂ ಕೋರ್ಟ್ ನಿರ್ದೇಶನ ಬ್ಯಾಂಕ್ ನೌಕರರು ಮತ್ತು ಅಧಿಕಾರಿಗಳ ಹಾಗೂ ದೇಶದ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಕೂಗನ್ನು ಬಿಂಬಿಸಿದೆ ಎಂದು ಹೇಳಿದೆ. ದೇಶದ ಸರ್ವೋಚ್ಚ ನ್ಯಾಯಾಲಯ ನಿರ್ದಿಷ್ಟವಾಗಿ ಸಂಸತ್ತಿನ ಒಂದು ಶಾಸನದಿಂದ ಸೃಷ್ಟಿಯಾಗಿರುವ ಆರ್‌ಬಿಐ ಒಟ್ಟಾರೆ ಸಾರ್ವಜನಿಕ ಹಿತಗಳನ್ನು, ಠೇವಣಿದಾರರ, ದೇಶದ ಆರ್ಥಿಕದ ಮತ್ತು ಬ್ಯಾಂಕಿಂಗ್ ವಲಯದ ಹಿತಗಳನ್ನು ಎತ್ತಿಹಿಡಿಯಲು ಬದ್ಧವಾಗಿರಬೇಕು ಎಂದು ನೆನಪಿಸಿದೆ.

"...ಸರಕಾರದ ಕಾರ್ಯನಿರ್ವಹಣೆಯಲ್ಲಿ ಗೋಪ್ಯತೆಯನ್ನು ಆಚರಿಸುವುದಾದರೆ ಮತ್ತು ಸರಕಾರದ ಪ್ರಕ್ರಿಯೆಗಳನ್ನು ಸಾರ್ವಜನಿಕ ಪರೀಕ್ಷಣೆಯಿಂದ ಅಡಗಿಸಿಡುವುದಾದರೆ, ಅದು ದಮನ, ಭ್ರಷ್ಟಾಚಾರ, ಅಧಿಕಾರದ ದುರುಪಯೋಗವನ್ನು ಪ್ರಾಯೋಜಿಸುವ ಅಥವ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸಾಗುತ್ತದೆ.." ಎಂದು ಆರ್‌ಬಿಐ ಗೆ ಮತ್ತು ಸರಕಾರ-ಕ್ಕೆ ನೆನಪಿಸಿರುವುದು ಬ್ಯಾಂಕ್ ನೌಕರರ ಮತ್ತು ಅಧಿಕಾರಿಗಳ ಹೋರಾಟಗಳನ್ನು ಮತ್ತು ಅವಕ್ಕೆ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ನಿರಂತರ ಬೆಂಬಲವನ್ನು ಎತ್ತಿ ಹಿಡಿದಂತಾಗಿದೆ ಎಂದು ಬಿಇಎಫ್‌ಐ ಹೇಳಿದೆ.

ಕೃಷಿ ಬಿಕ್ಕಟ್ಟಿನ ನಿರ್ಲಕ್ಷ್ಯ ಮೋದಿ ಸೋಲಿಸೀತೆ....

ಪುಟ 8 ರಿಂದ

ಆತ್ಮಹತ್ಯೆಗೀಡಾದ ಮರೀಗೌಡ (50)ರ ಪತ್ನಿ ಚಿಕ್ಕತಾಯಮ್ಮ (42) "ಆಗಾಗ್ಗೆ ನಾವು ಹಲವು ಬರಗಳನ್ನು ಎದುರಿಸಿದ್ದೇವೆ. ಇದು ಪ್ರಕೃತಿಯಲ್ಲಿ ಸಾಮಾನ್ಯ. ಆದರೆ ಭತ್ತ ಮಾರಿದ್ದರಿಂದ ಬಂದ ಹಣ ಆ ವರ್ಷದ ರಸಗೊಬ್ಬರದ ಖರ್ಚಿಗೂ ಸಾಲದೇ ಇರುವುದನ್ನು ನನ್ನ ಗಂಡ ಎದುರಿಸಲಾರದೇ ಹೋದ"ಎಂದು ದುಃಖಿಸಿದಳು.

ಮರೀಗೌಡ ತೀರಿ ಹೋದ ನಂತರ ಅವಳು ಮತ್ತು ಅವಳ ಮಗ ತನ್ನ ಎರಡು ಎಕರೆ ಜಮೀನಿನ ಬೆಳೆಯನ್ನು ಕಬ್ಬು ಬೆಳೆಗೆ ಬದಲಾಯಿಸಿದರು. ಇತ್ತೀಚಿನ ಬೆಳೆಯನ್ನು ಟನ್ ಗೆ 2400 ರೂಗೆ ಮಾರಿದ್ದಾರೆ. ಕಡ್ಡಾಯವಾಗಿ ರೈತರಿಗೆ ಪಾವತಿಸಬೇಕಾದ, ಸರ್ಕಾರ ನಿಗದಿಪಡಿಸಿದ ನ್ಯಾಯ ಮತ್ತು ಲಾಭದಾಯಕ ಬೆಲೆ (FRP) ಗಿಂತ ಇದು 350 ರೂ ಕಡಿಮೆ. ಕಾರ್ಖಾನೆಯು ಈ ಪಾವತಿಯನ್ನೂ ನಾಲ್ಕು ತಿಂಗಳು ವಿಳಂಬ ಮಾಡಿದೆ. "ಈ ಹಣ ಬರುವಷ್ಟರಲ್ಲಿ ಬೆಳೆ ಸಾಲದ ಬಡ್ಡಿ ಬೆಳೆದಿತ್ತು. ಬೆಳೆ ಖರ್ಚಿಗಿಂತ FRP ದರವೇ ಕಡಿಮೆ ಇರುವಾಗ, ನಾವು FRP ಗಿಂತ ಕಡಿಮೆ ದರಕ್ಕೆ ಮಾರಾಟ ಮಾಡಿದ್ದೇವೆ"ಎಂದು ಚಿಕ್ಕತಾಯಮ್ಮ ವಿವರಿಸಿದರು

ಕಬ್ಬು ಬೆಳೆ ಖರ್ಚಿನ ಶೇಕಡಾ 77 ರಷ್ಟು ಸೇರಿಸಿ FRP ನಿಗದಿಪಡಿಸಿದ್ದೇವೆ ಎಂಬ ಕೇಂದ್ರ ಸರ್ಕಾರದ ವಾದವನ್ನು ಸಂದರ್ಶಿಸಿದ ಪ್ರತಿ ಕಬ್ಬು ಬೆಳೆಗಾರರು ನಿರಾಕರಿಸಿದರು. ಜಿಲ್ಲೆಯಲ್ಲಿದ್ದ ಏಕೈಕ ಸಾರ್ವಜನಿಕ ಕಾರ್ಖಾನೆಯನ್ನು 2013 ರಲ್ಲಿ ಮುಚ್ಚುವ ಮೂಲಕ ಸರ್ಕಾರ ಖರೀದಿಯಿಂದ ಅಧಿಕೃತವಾಗಿ ದೂರ ಉಳಿಯಿತು.

2017 ಮತ್ತು 2018 ರ ಕಬ್ಬು ಅರೆಯುವ ಅವಧಿಯಲ್ಲಿ ಕರ್ನಾಟಕ, ಉತ್ತರ ಪ್ರದೇಶ, ಮಹಾರಾಷ್ಟ್ರ ಹಾಗೂ ಪಂಜಾಬ್ ನ ರೈತರು ದೊಡ್ಡ ಸಂಖ್ಯೆಯಲ್ಲಿ ಬೀದಿಗಿಳಿದರು. ಬಹುತೇಕ ಸಕ್ಕರೆ ಕಾರ್ಖಾನೆಗಳು ರಾಜಕಾರಣಿಗಳ ಒಡೆತನ ಅಥವಾ ನಿಯಂತ್ರಣದಲ್ಲಿರುವುದರಿಂದ ಸಕ್ಕರೆ ಕಾರ್ಖಾನೆಗಳ ಲಾಬಿಗೆ ಸರ್ಕಾರಗಳು ತೀವ್ರವಾಗಿ ಸ್ಪಂದಿಸುತ್ತವೆ. ಜಾಗತಿಕ ಮಾರುಕಟ್ಟೆಯಲ್ಲಿ ಸಕ್ಕರೆ ದರ ಕುಸಿತಕ್ಕೆ ಒಳಗಾದಾಗ ವಿಶ್ವದ ಎರಡನೇ ಅತಿದೊಡ್ಡ ಉತ್ಪಾದಕ ದೇಶ ಭಾರತ ಸಕ್ಕರೆ ಮೇಲಿನ ರಫ್ತು ತೆರಿಗೆಯನ್ನು ತೆಗೆದುಹಾಕಿತು. ಈ ವರ್ಷದ ಮೊದಲು ಸಕ್ಕರೆ ಕಾರ್ಖಾನೆಗಳಿಗೆ 10,500 ಕೋಟಿ ರೂ. ಉತ್ತೇಜಕ ಸಾಲದ ನೆರವು ನೀಡಿತ್ತು

ಕನಿಷ್ಠ ಬೆಂಬಲ ಬೆಲೆ ನೀಡುವುದಾಗಿ ಬಿಜೆಪಿ ಪುನಃ ಭರವಸೆ ನೀಡಿದೆ. 2015 ರಲ್ಲಿ ಅಧಿಕೃತವಾಗಿ ಬಿಜೆಪಿ ಸರ್ಕಾರವೇ ಸುಪ್ರೀಂ ಕೋರ್ಟ್ ಗೆ "ಉತ್ಪಾದನೆ ವೆಚ್ಚಕ್ಕೂ, ಕನಿಷ್ಠ ಬೆಂಬಲ ಬೆಲೆಗೂ ಯಾಂತ್ರಿಕ ಸಂಬಂಧ ಕಲ್ಪಿಸುವುದು ಉತ್ಪಾದನೆಯನ್ನು ನಿರುತ್ಸಾಹಗೊಳಿಸಲಿದೆ ಮತ್ತು ಮಾರುಕಟ್ಟೆಯನ್ನು ವಿಕೃತಿಗೊಳಿಸಲಿದೆ" ಎಂದು ಅಫಿಡವಿಟ್ ಸಲ್ಲಿಸಿ ತನ್ನ ಅಧಿಕೃತ ಧೋರಣೆಯನ್ನು ಪ್ರಕಟಪಡಿಸಿತ್ತು.

ಕನಿಷ್ಠ ಬೆಂಬಲ ಬೆಲೆಯಲ್ಲಿ 'ಐತಿಹಾಸಿಕ' ಹೆಚ್ಚಳ ಎಂದು ಮೋದಿ ರವರು ಬಣ್ಣಿಸಿ ರೈತರ ಉತ್ಪನ್ನಗಳಿಗೆ ಶೇಕಡಾ 50 ರಷ್ಟು ಲಾಭಾಂಶ ನೀಡುವ ಚುನಾವಣಾ ಭರವಸೆ ಈಡೇರಿದಂತಾಗಿದೆ ಎಂಬುದನ್ನು 2018 ರ ತನಕವೂ ಪ್ರಕಟಿಸಿರಲಿಲ್ಲ. ಆದರೆ ಈ ಹೆಚ್ಚಳ ನಾಲ್ಕು ವರ್ಷಗಳಷ್ಟೂ ತುಂಬಾ ವಿಳಂಬ ಮಾತ್ರವೇ ಅಲ್ಲ ಜೊತೆಗೆ ಭೂ ಬಾಡಿಗೆಯನ್ನು ಪರಿಗಣಿಸದೆ ಅಸಮರ್ಪಕವಾಗಿತ್ತು. ಗೇಣಿ ಭೂಮಿಯಲ್ಲಿ ಬೇಸಾಯ ಮಾಡುವ ದೊಡ್ಡ ಸಂಖ್ಯೆಯ ರೈತರನ್ನು ಒಳಗೊಂಡಿರಲಿಲ್ಲ. ಹಲವಾರು ವರದಿಗಳು ಹೇಳುವಂತೆ ಸರ್ಕಾರ ಖರೀದಿಯಲ್ಲಿ ವಿಳಂಬ ಹಾಗೂ ನಿರಾಸಕ್ತಿ ವಹಿಸಿದ್ದರಿಂದ ಬೆಲೆಗಳ ಮೇಲೆ ಪರಿಣಾಮ ಬೀರಲು ಕನಿಷ್ಠ ಬೆಂಬಲ ಬೆಲೆ ಸಂಪೂರ್ಣ ವಿಫಲವಾಯಿತು.

ಕಟಾವು ಮುಗಿದ 45 ದಿನಗಳ ನಂತರವಷ್ಟೇ ಸರ್ಕಾರಿ ಖರೀದಿ ವ್ಯವಸ್ಥೆ ಪ್ರಾರಂಭವಾಯಿತು ಎಂದು ಮಂಡ್ಯ ಹಾಗೂ ಕೊಪ್ಪಳ ಜಿಲ್ಲೆಯ ಭತ್ತ ಬೆಳೆಗಾರರು ತಿಳಿಸಿದ್ದಾರೆ. ಹಣ ಪಾವತಿ ತಿಂಗಳುಗಟ್ಟಲೆ ವಿಳಂಬ ಆಗುವುದರಿಂದ ಸರ್ಕಾರಿ ಖರೀದಿ ಕೇಂದ್ರಕ್ಕೆ ಮಾರುವುದಿಲ್ಲ ಎಂದು ಸಣ್ಣ ರೈತರು ಅತೃಪ್ತಿ ವ್ಯಕ್ತಪಡಿಸಿದರು. ಹೀಗೆ ಇವರಿಗೆ MSP ಯ ಮೂರನೇ ಒಂದರಷ್ಟು ಕಡಿಮೆ ಬೆಲೆಗೆ ಖಾಸಗಿ ವ್ಯಾಪಾರಿಗಳಿಗೆ ಮಾರುವುದನ್ನು ಹೊರತುಪಡಿಸಿ ಬೇರೆ ದಾರಿ ಇಲ್ಲ.

ಜಾಗತಿಕ ಮಾರುಕಟ್ಟೆಯ ಏರಿಳಿತಗಳು

ಉದಾರೀಕರಣಗೊಂಡ ವ್ಯಾಪಾರಿ ಧೋರಣೆಗಳು ಈ ಬಿಕ್ಕಟ್ಟನ್ನು ಹೆಚ್ಚಿಸಿವೆ. ಗೋಧಿ, ದ್ವಿದಳ ಧಾನ್ಯಗಳು ಹಾಗೂ ಹಾಲು ಉತ್ಪನ್ನಗಳು ಮುಂತಾದ ಸರಕುಗಳ ಅನಿಯಂತ್ರಿತ ಆಮದು ಬೆಲೆಗಳ ಅನಿಶ್ಚಿತತೆಗೆ ಕೊಡುಗೆ ನೀಡಿದೆ. ವಳಗೆರಹಳ್ಳಿ ಯಲ್ಲಿ ರೇಷ್ಮೆ ಕೃಷಿಕರು ಜಾಗತಿಕ ಮಾರುಕಟ್ಟೆಯ ಏರಿಳಿತಗಳಿಗೆ ನೇರವಾಗಿ ಜೋಡಿಸಲ್ಪಟ್ಟಿದ್ದಾರೆ.

2015 ರಲ್ಲಿ ಕಚ್ಚಾ ರೇಷ್ಮೆಯ ಆಮದು ಸುಂಕವನ್ನು ಸರ್ಕಾರ ಕಡಿತಗೊಳಿಸಿದಾಗ ಸರಸಮ್ಮನ ಪ್ರಪಂಚ ತಲೆಕೆಳಗಾಯಿತು. ಜನವರಿ 2016 ರಲ್ಲಿ ಆಕೆಯ ಗಂಡ ನಾಥಪ್ಪ ರೇಷ್ಮೆ ಗೂಡನ್ನು ಪ್ರತಿ ಕೆಜಿಗೆ 80 ರೂನಂತೆ ಮಾರಾಟ ಮಾಡಿದ. ಇದು ಆತ ಸಾಮಾನ್ಯವಾಗಿ ಮಾರಾಟ ಮಾಡುತ್ತಿದ್ದ ದರದ ಕಾಲು ಭಾಗ. "ಇದಾದ ಒಂದು ವಾರದಲ್ಲೇ ಅವರು ಆತ್ಮಹತ್ಯೆಗೀಡಾದರು" ಎಂದು 37 ವರ್ಷದ ವಿಧವೆ ಕಣ್ಣು ಒರೆಸಿಕೊಂಡರು.

ನೋಟು ರದ್ದಿನ ಮರ್ಮಾಘಾತ

ಭಾರತೀಯ ಆರ್ಥಿಕತೆಗೆ ಹಣಕಾಸು ಆಘಾತಕಾರಿಯಾಗಿ ಎರಗಿದ ಮೋದಿ ರವರ ನವೆಂಬರ್ 2016 ನೋಟು ರದ್ದು ಸತತ ಬರಗಾಲದಿಂದ ತತ್ತರಿಸಿ ತೆವಳುತ್ತಾ ಚೇತರಿಸಿಕೊಳ್ಳುತ್ತಿದ್ದ ಗ್ರಾಮೀಣ ಭಾರತಕ್ಕೆ ಆದ ಮರ್ಮಾಘಾತ.

ನೋಟು ರದ್ದು ಕೃಷಿ ಮಾರುಕಟ್ಟೆಯನ್ನು ಹಾಳುಗೆಡವಿದೆ ಎಂದು ಎರಡು ವರ್ಷದ ನಂತರ ಕೇಂದ್ರ ಸರ್ಕಾರದ ಕೃಷಿ ಮಂತ್ರಾಲಯ ಸಂಸದೀಯ ಸಮಿತಿ ಮುಂದೆ ಹೇಳಿಕೊಂಡಿದೆ. ನೋಟು ರದ್ದು ಕೆಟ್ಟ ಕಾಲದಲ್ಲಿ ಬಂದ ಮತ್ತೊಂದು ದುರ್ಘಟನೆ ಮಾತ್ರವೇ ಅಲ್ಲ. ಮುಂಗಾರು ಬೆಳೆ(ಖಾರೀಫ್)ಮಾರಬೇಕಿತ್ತು ಅಥವಾ ಹಿಂಗಾರು (ರಾಬಿ)ಬೆಳೆಗೆ ಬೇಕಾದ ಸಾಮಗ್ರಿ ಖರೀದಿಸಬೇಕಿತ್ತು. ನಗದು ಕೊರತೆ ಈ ಎರಡು ಚಟುವಟಿಕೆಗಳನ್ನು ಸ್ಥಬ್ದಗೊಳಿಸಿತು.

ನೋಟು ರದ್ದು ಪರಿಣಾಮಕಾರಿಯಾಗಿ ಕೃಷಿ ಪೂರೈಕೆ ಸರಪಳಿಯನ್ನು ಹಾಳುಗೆಡವಿತು. ಸರ್ಕಾರವು ಒಂದು ವಾರದಲ್ಲೇ ತನ್ನ ಅಂದಾಜಿನಿಂದ ಹಿಂದೆ ಸರಿದು ನೋಟು ರದ್ದು "ಕೃಷಿ ರಂಗವನ್ನು ಔಪಚಾರಿಕಗೊಳಿಸುತ್ತಿದೆ"ಎಂದು ಹೊಗಳಿ ಹೊಸ ವರದಿಯನ್ನು ತಯಾರಿಸಿತು. ಸಂದರ್ಶಿಸಿದ ಪ್ರತಿಯೊಬ್ಬ ರೈತನ ಬಳಿಯೂ ನೋಟು ರದ್ದು ಸಮಯದಲ್ಲಿ ಅವನು ಅನುಭವಿಸಿದ ಸಂಕಟದ ಕಥೆ ಇದ್ದು, ಸರ್ಕಾರದ ವಾದವನ್ನು ಅಲ್ಲಗಳೆಯುತ್ತವೆ. ಕೃಷಿ ಕೂಲಿಕಾರರು ಸಹ ಸಂಕಟಕ್ಕೀಡಾದರು. ಕೂಲಿಕಾರರಿಗೆ ಪಾವತಿಸಲು ರೈತರ ಬಳಿ ಹಣವೇ ಇರಲಿಲ್ಲವಾದ್ದರಿಂದ ಕೆಲಸಕ್ಕಾಗಿ ಪರಿತಪಿಸಬೇಕಾಯಿತು. ಹಳ್ಳಿಗಳಲ್ಲಿ ಕೆಲಸದ ಅವಕಾಶ ಕ್ಷೀಣಿಸಿದಾಗ ಕಟ್ಟಡ ನಿರ್ಮಾಣ ಚಟುವಟಿಕೆಗಳಲ್ಲಿ ಕೆಲಸ ಅರಸಿ ನಗರ, ಪಟ್ಟಣಗಳಿಗೆ ಸಾಮಾನ್ಯವಾಗಿ ಕೂಲಿಕಾರರು ವಲಸೆ ಹೋಗುತ್ತಾರೆ. ಭಾರತದ ಬೆಳೆಯುತ್ತಿರುವ ಕಟ್ಟಡ ನಿರ್ಮಾಣ ವಲಯದಲ್ಲಿ ಅಷ್ಟೊತ್ತಿಗಾಗಲೇ ಐದು ಕೋಟಿ ಜನ ಉದ್ಯೋಗ ಕಂಡು ಕೊಂಡಿದ್ದರು. ಆದರೆ ನೋಟು ರದ್ದತಿ ಹಾಗೂ 2017 ರಿಂದ ಜಾರಿಗೆ ಬಂದ ಜಿ.ಎಸ್.ಟಿ. ಕಟ್ಟಡ ನಿರ್ಮಾಣ ವಲಯದ ಚಟುವಟಿಕೆಗಳನ್ನು ನಿಧಾನಗೊಳಿಸಿತು. ಉತ್ತರ ಕರ್ನಾಟಕದ ಕೊಪ್ಪಳ ದಲ್ಲಿ ನೂರಾರು ಜನ ತಮ್ಮ ಗ್ರಾಮಕ್ಕೆ ಮರಳಿದ್ದರು.

ಕೊಪ್ಪಳದ ಕುಷ್ಟಗಿಯ ಭೂ ಹೀನ ಕೂಲಿಕಾರ ಮಾಲಕ್ ಸಾಬ್ (37) "ರೈತರು ಯಂತ್ರಗಳನ್ನು ಬಳಸುತ್ತಿರುವುದು ಮತ್ತು ಕಡಿಮೆ ಬೆಳೆ ಬೆಳೆಯುತ್ತಿರುವುದರಿಂದ ಗ್ರಾಮದಲ್ಲಿ ಕೆಲಸ ಸಿಗುವುದು ಕಷ್ಟವಾಗಿದೆ. ಇದು ಗಾಯದ ಮೇಲೆ ಉಪ್ಪು ಸವರಿದಂತೆ. ಕಟ್ಟಡ ಕಾಮಗಾರಿ ಕೆಲಸಕ್ಕೆ ವಾಪಸ್ಸಾಗಲು ಇನ್ನು ಆರು ತಿಂಗಳು ಬೇಕು"ಎನ್ನುತ್ತಾ ನಿಟ್ಟುಸಿರು ಬಿಟ್ಟರು.

ತನ್ನ ಮಹತ್ವಾಕಾಂಕ್ಷಿ ಯೋಜನೆ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಸರ್ಕಾರ ವಿಫಲವಾಗಿದೆ. ಪ್ರತಿ ಸಾರಿಯೂ ವೇತನ ಪಾವತಿಯನ್ನು ವಿಳಂಬಿಸಲಾಗುತ್ತಿದೆ. ಜನ ಜೀವನ ನಿಸ್ತೇಜಗೊಂಡು ವ್ಯಾಪಕವಾಗಿ ಕುಸಿದಿರುವ ಹಿನ್ನೆಲೆಯಲ್ಲಿ ಈ ರೀತಿಯ ಅನುಷ್ಠಾನ ಗ್ರಾಮೀಣ ಬಡವರ ಬದುಕಿನಲ್ಲಿ ಮತ್ತಾವ ಪರಿಣಾಮ ಬೀರಲು ಸಾಧ್ಯ.

ರೈತ ಚಳುವಳಿಗಳು

ಇತ್ತೀಚಿನ ವರ್ಷಗಳಲ್ಲಿ ರೈತರು ಹೆಚ್ಚಿನ ಪ್ರತಿಭಟನೆ ವ್ಯಕ್ತಪಡಿಸುತ್ತಿದ್ದಾರೆ. ಗ್ರಾಮೀಣ ಭಾರತದ ಬಿಕ್ಕಟ್ಟು ನಗರದ ರಸ್ತೆಗಳಲ್ಲಿ ಅಭಿವ್ಯಕ್ತಿಗೊಳ್ಳುತ್ತಿದೆ. ಬೆಲೆ ಕುಸಿತ ಖಂಡಿಸಿ ತಮ್ಮ ಉತ್ಪನ್ನಗಳನ್ನು ರಸ್ತೆಯಲ್ಲಿ ಸುರಿದು ಅಥವಾ ಸುಟ್ಟು ಪ್ರತಿಭಟಿಸುತ್ತಿರುವ ದೃಶ್ಯಗಳು ಕರುಣಾಜನಕವಾಗಿವೆ.

ಕಾರ್ಷಿಕ ಬಿಕ್ಕಟ್ಟಿನ ಕಾರಣದಿಂದ ರೈತ ಆತ್ಮಹತ್ಯೆಗಳು 2015 ರಲ್ಲಿ 2683 ವರದಿಯಾಗಿದ್ದು ಇದು ಹಿಂದಿನ ವರ್ಷದ ಸಂಖ್ಯೆ 628 ಕ್ಕೆ ಹೋಲಿಸಿದರೆ ನಾಲ್ಕು ಪಟ್ಟು ಹೆಚ್ಚು. ರಾಷ್ಟ್ರೀಯ ಅಪರಾಧ ಅಂಕಿಸಂಖ್ಯೆಗಳು ಲಭ್ಯವಿರುವ ಕೊನೆ ವರ್ಷ 2016 ರಲ್ಲಿ ಈ ಹಿಂದಿನ ವರ್ಷಕ್ಕೆ ಹೋಲಿಸಿದರೆ ಎರಡು ಪಟ್ಟು ಹೆಚ್ಚು.

ಆದರೆ, ಪ್ರತಿಭಟನೆಯೂ ಹೆಚ್ಚು ಸುಸಂಘಟಿತಗೊಳ್ಳುತ್ತಿದೆ. 2017 ರ ವರೆಗೂ ರೈತ ಸಂಘಟನೆಗಳು ತಮ್ಮ ತಮ್ಮ ರಾಜ್ಯಗಳ ರಾಜಧಾನಿಗಳಲ್ಲಿ ಬೃಹತ್ ಪ್ರತಿಭಟನಾ ರ್‍ಯಾಲಿಗಳನ್ನು ನಡೆಸುತ್ತಿದ್ದವು. ನೋಟು ರದ್ದು ಮತ್ತು ತೀವ್ರ ಬೆಲೆ ಕುಸಿತದಲ್ಲಿ ವ್ಯಕ್ತವಾಗುತ್ತಿರುವ ತೀವ್ರಗೊಂಡ ಬಿಕ್ಕಟ್ಟು ರೈತ ಸಂಘಟನೆಗಳು ಕೇಂದ್ರ ಸರ್ಕಾರದ ಮೇಲೆ ಗಮನ ಕೇಂದ್ರೀಕರಿಸುವಂತೆ ಮಾಡಿವೆ.

ಆ ವರ್ಷ ಲಾಭದಾಯಕ ಬೆಲೆ ಹಾಗೂ ಸಾಲ ಮನ್ನಾ ಬೇಡಿಕೆಗಳ ಆಧಾರದಲ್ಲಿ ಸುಮಾರು 150 ರೈತಾಪಿ ಸಂಘಟನೆಗಳು ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ ರಚಿಸಿಕೊಂಡವು. 2018 ರಲ್ಲಿ, ವಿವಿದೆಡೆಗಳಿಂದ ಬಂದ ನಾಲ್ಕು ಬೃಹತ್ ರ್‍ಯಾಲಿಗಳು ದೇಶದ ರಾಜಧಾನಿ ನವ ದೆಹಲಿಯಲ್ಲಿ ಸಮಾವೇಶಗೊಂಡು ಪ್ರತಿಭಟನಾ ಅಲೆಯನ್ನೇ ಎಬ್ಬಿಸಿದವು.

ವ್ಯಾಪಕ ಸಾಮಾಜಿಕ ಸಂಯೋಜನೆ ಒಳಗೊಂಡ ಕಾರಣದಿಂದ ಸಹ ಈ ಕಾರ್ಷಿಕ ಪ್ರತಿಭಟನೆ ಪ್ರಾಮುಖ್ಯತೆ ಪಡೆದಿದೆ. "ಗ್ರಾಮೀಣ ಸಮಾಜದ ವಿವಿಧ ಸ್ತರಗಳ ರೈತಾಪಿ ಸಮೂಹವನ್ನು ಒಟ್ಟಾಗಿ ಸೆಳೆದಿರುವುದರಿಂದ ನಮ್ಮ ಈ ಪ್ರತಿಭಟನೆ ಅತ್ಯಂತ ಮಹತ್ವಪೂರ್ಣವಾದುದ್ದಾಗಿದೆ" ಎಂದು 1.5 ಕೋಟಿ ಸದಸ್ಯತ್ವದ ಅಖಿಲ ಭಾರತ ಕಿಸಾನ್ ಸಭಾ ದ ಜಂಟಿ ಕಾರ್ಯದರ್ಶಿ ವಿಜು ಕೃಷ್ಣನ್ ಅಭಿಪ್ರಾಯ ಪಡುತ್ತಾರೆ

ಗ್ರಾಮೀಣ ಮತ

2018 ರಲ್ಲಿ ಮೂರು ಮುಖ್ಯ ರಾಜ್ಯಗಳ ಬಿಜೆಪಿ ಸೋಲಿಗೆ ಗ್ರಾಮೀಣ ಮತವೇ ಕಾರಣ ಎಂದು ವ್ಯಾಪಕವಾಗಿ ಆರೋಪಿಸಲಾಗುತ್ತಿದೆ. ಅಂದಿನಿಂದ ಎಲ್ಲ ರಾಜಕೀಯ ಪಕ್ಷಗಳು ಸಾಲ ಮನ್ನಾ ಮತ್ತು ರೈತರ ಖಾತೆಗೆ ಹಣ ಹಾಕುವ ಯೋಜನೆ ಪ್ರಕಟಿಸುತ್ತಿವೆ.ಈ ವರ್ಷದ ಫೆಬ್ರವರಿ ಯಲ್ಲಿ ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ವಾರ್ಷಿಕ 6000 ರೂ. ಹಣ ನೀಡುವ ರಾಷ್ಟ್ರೀಯ ನಗದು ವರ್ಗಾವಣೆ ಯೋಜನೆಯನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಪ್ರಕಟಿಸಿತು. ಕಾಂಗ್ರೆಸ್ ಪ್ರಣಾಳಿಕೆ ಐದು ಕೋಟಿ ಕಡು ಬಡವರಿಗೆ ಅಷ್ಟೇ ಮೊತ್ತವನ್ನು ಪ್ರತಿ ತಿಂಗಳು ನೀಡುವುದಾಗಿ ಘೋಷಿಸಿದೆ.

ರಾಷ್ಟ್ರೀಯ ಹಾಗೂ ಪ್ರಾದೇಶಿಕ ಪಕ್ಷಗಳು ರೈತ ಭರವಸೆಗಳನ್ನು ಒಳಗೊಂಡ ಪ್ರಣಾಳಿಕೆ ಬಿಡುಗಡೆ ಮಾಡಿವೆ. ಬಿಜೆಪಿ ಕೂಡ ಒಂದು ಲಕ್ಷ ರೂ ವರೆಗೆ ಬಡ್ಡಿ ರಹಿತ ಸಾಲ ನೀಡುವುದಾಗಿ ಹೇಳಿದರೆ, ಕಾಂಗ್ರೆಸ್ ರೈತರ ಸಂಪೂರ್ಣ ಸಾಲ ಮನ್ನಾ ಮಾಡುವ ಹಾಗೂ ಪ್ರತ್ಯೇಕ ಕೃಷಿ ಬಜೆಟ್ ಮಾಡುವುದಾಗಿ ಭರವಸೆ ನೀಡಿದೆ. ದಶಕಗಳಿಂದ ವ್ರಣಗೊಂಡು ಉಲ್ಬಣವಾಗಿರುವ ಬಿಕ್ಕಟ್ಟನ್ನು ಈ ರಾಜಕೀಯ ಪಕ್ಷಗಳು ಹೇಗೆ ನಿಭಾಯಿಸಲಿವೆ ಎಂಬುದನ್ನು ಮುಂದೆ ನೋಡಬೇಕಿದೆ. ಆದರೆ ಈಗ ವಳಗೆರಹಳ್ಳಿ ಯ ಎಲ್ಲ ರೈತರು ಈ ಭರವಸೆಗಳನ್ನು ನಂಬುತ್ತಿಲ್ಲ.

"ಬೆಲೆ ಬಗ್ಗೆ ಏನು? ಮತ್ತೊಮ್ಮೆ ನಮ್ಮ ಬೆಳೆ ಮಾರುವಾಗ ಈ ಹಣ ಹಾಕುವ ಯೋಜನೆ ಹೇಗೆ ಖಾತರಿ ನೀಡುತ್ತದೆ, ಇವೆಲ್ಲವನ್ನೂ ನಾವು ಹೇಗೆ ತಿಳಿಯುವುದು, ನೀವು ಮತ್ತೇ ಇಲ್ಲಿಗೆ ಬರುವ ಹೊತ್ತಿಗೆ ನಾವು ಇದ್ದವೂ ಇಲ್ಲವೋ, ನಮ್ಮ ಕುಟುಂಬದವರನ್ನು ನೀವು ಮಾತನಾಡಿಸುವುದಿಲ್ಲ ಎಂದು ನಾನು ಹೇಗೆ ಹೇಳಲಿ?" ಎಂದು, ತನ್ನ ಗ್ರಾಮದ ಮತ್ತೊಬ್ಬರನ್ನು ಕಳೆದುಕೊಂಡು ದುಃಖತಪ್ತನಾದ 32 ವರ್ಷದ ರೈತ ಉಮೇಶ್ ಕೇಳುತ್ತಾನೆ. ಇವರ ಪ್ರಕಾರ ಇದು ಒಂದು ಮುಗಿಯದ ಮಾನವ ನಿರ್ಮಿತ ದುರಂತ. ●

ರಾಯಚೂರು ಇಂಜಿನಿಯರಿಂಗ್ ವಿದ್ಯಾರ್ಥಿನಿಯ ನಿಗೂಢ....

ಪುಟ 16 ರಿಂದ

ಕಿಶೋರ್ ಬಾಬು ಆಗಮಿಸಿದಾಗ ಜಿಲ್ಲಾಧಿಕಾರಿಗಳೇ ಬರಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಇದರಿಂದಾಗಿ ಮತ್ತೆ ಪರಿಸ್ಥಿತಿ ಉದ್ವಿಗ್ನಗೊಂಡಿತು. ತಕ್ಷಣವೇ ಸ್ಥಳಕ್ಕೆ ಧಾವಿಸಿಬಂದ ಜಿಲ್ಲಾಧಿಕಾರಿ ಬಿ. ಶರತ್ ಮನವಿ ಪತ್ರವನ್ನು ಸ್ವೀಕರಿಸಿ, ಪ್ರಕರಣದ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಕ್ಕೆ ಸರ್ಕಾರ ಬದ್ಧ ಎಂಬ ಭರವಸೆಯನ್ನು ನೀಡಿದರು.

ಸಮಾನ ಮನಸ್ಕ ಸಂಘಟನೆಗಳಿಂದ ಪ್ರತಿಭಟನಾ ಧರಣಿ

ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್ಎಫ್ಐ), ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯೂಎ), ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿವೈಎಫ್ಐ), ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ (ಎಐಎಡಬ್ಲ್ಯೂಯು) ಹಾಗೂ ಸಿಐಟಿಯು ಗೆ ಸೇರಿದ ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರು ಜಂಟಿಯಾಗಿ ಜಿಲ್ಲಾಧಿಕಾರಿ ಕಚೇರಿ ಎದುರಿನ ಟಿಪ್ಪು ಸುಲ್ತಾನ್ ಉದ್ಯಾನವನದಲ್ಲಿ ಬೆಳಗ್ಗೆಯಿಂದ ಪ್ರತಿಭಟನಾ ಧರಣಿ ನಡೆಸಿ ಮಧು ಪತ್ತಾರ್‌ರವರ ಅಮಾನುಷ ಕೊಲೆಯ ಹಿಂದಿರುವ ಅಪರಾಧಿಗಳನ್ನು ವಿಳಂಬ ಮಾಡದೆ ಪತ್ತೆಹಚ್ಚಿ ಕಠಿಣ ಶಿಕ್ಷೆಗೆ ಒಳಪಡಿಸಬೇಕೆಂದು ಒತ್ತಾಯಿಸಿದರು.

ಬೆಂಗಳೂರಿನಿಂದ ಆಗಮಿಸಿ ಧರಣಿಯನ್ನು ಉದ್ಘಾಟಿಸಿ ಮಾತನಾಡಿದ ಜೆ.ಎಂ.ಎಸ್ ನ ರಾಜ್ಯ ಉಪಾಧ್ಯಕ್ಷೆ ಕೆ.ಎಸ್. ಲಕ್ಷ್ಮಿರವರು ಮಧು ಪತ್ತಾರ್ ನಿಗೂಢ ಸಾವಿನಂತಹ ಪ್ರಕರಣಗಳು ಹೆಚ್ಚುತ್ತಲೇ ಇವೆ. ಮಹಿಳೆಯರಿಗೆ, ಈ ಸಮಾಜದಲ್ಲಿ, ಅವರು ಕೆಲಸ ಮಾಡುವ ಸ್ಥಳಗಳಲ್ಲಿ, ಶಾಲಾ ಕಾಲೇಜುಗಳಲ್ಲಿ ಸಹ ರಕ್ಷಣೆ ಇಲ್ಲ. ಪೈಶಾಚಿಕವಾಗಿ ಅವರ ಮೇಲೆ ಅತ್ಯಾಚಾರ ಮಾಡುತ್ತಾರೆ ಮಾತ್ರವಲ್ಲ ಬರ್ಬರವಾಗಿ ಕೊಲ್ಲುತ್ತಾರೆ. ಈ ಆತಂಕದಾಯಕ ವಿದ್ಯಮಾನದ ವಿರುದ್ಧ ಮಹಿಳಾ ಚಳುವಳಿ ಬಲಗೊಳ್ಳಬೇಕಾಗಿದೆ. ಮಧುಗೆ ನ್ಯಾಯದೊರಕಿಸುವ ಹೋರಾಟ ಅದರ ತಾರ್ಕಿಕ ಕೊನೆಯನ್ನು ಕಾಣುವವರೆಗೂ ಮುಂದುವರಿಸೋಣ ಎಂದು ಕರೆನೀಡಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರು ನಿತ್ಯಾನಂದಸ್ವಾಮಿ ಮಾತನಾಡಿ ಈ ಪಾಳೇಗಾರಿ ಬಂಡವಾಳಶಾಹಿ ಸಮಾಜವು ಅತ್ಯಾಚಾರಿಗಳನ್ನು, ಕೊಲೆಗಡುಕರನ್ನು ಹುಟ್ಟುಹಾಕುತ್ತದೆ. ಈ ಸಮಾಜ ಬದಲಾಗಬೇಕು. ಮಹಿಳಾ ದೌರ್ಜನ್ಯ ವಿರೋಧಿ ಹೋರಾಟ ಈ ರೋಗಗ್ರಸ್ತ ಸಮಾಜದ ಬದಲಾವಣೆಯನ್ನು ಸಾಧಿಸುವ ಹೋರಾಟದ ಭಾಗವಾಗಬೇಕಾಗಿದೆ ಎಂದು ಹೇಳಿದರು.

ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನ್ಯಾಯಮೂರ್ತಿ ವರ್ಮಾ ಸಮಿತಿಯ ಶಿಫಾರಸುಗಳನ್ನು ಜಾರಿಗೆ ತರಬೇಕು. ಶಿಕ್ಷಣದ ಹಾಗೂ ಕೆಲಸದ ಸ್ಥಳಗಳಲ್ಲಿ ಮಹಿಳಾ ದೌರ್ಜನ್ಯ ತಡೆ ಸಮಿತಿಗಳನ್ನು ರಚಿಸಿ ಕ್ರಿಯಾಶೀಲಗೊಳಿಸಬೇಕು. ಮಧು ಪ್ರಕರಣದ ತನಿಖೆಯನ್ನು ಚುರುಕುಗೊಳಿಸಬೇಕು ಎಂಬಿತ್ಯಾದಿ ಹಕ್ಕೊತ್ತಾಯಗಳ ಮನವಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ವಿವಿಧ ಸಾಮೂಹಿಕ ಸಂಘಟನೆಗಳ ಮುಖಂಡರಾದ ಕೆ.ಜಿ. ವೀರೇಶ್, ಶರಣಬಸವ, ಕರಿಯಪ್ಪ ಅಚ್ಚೊಳ್ಳಿ, ಶಿವಕುಮಾರ್ ಮ್ಯಾಗಳಮನಿ, ಹೆಚ್. ಪದ್ಮ, ವರಲಕ್ಷ್ಮಿ, ಶ್ರೀಧರ್ ಮೊದಲಾದವರು ಭಾಗವಹಿಸಿದ್ದರು. ●

ಸುಡಾನ್ : ಅಲ್-ಬಶೀರ್ ಸರಕಾರ ಪತನ ಜನ-ಪ್ರತಿನಿಧಿಗಳಿಗೆ ಅಧಿಕಾರ ವರ್ಗಾಯಿಸಲು ಬೃಹತ್ ಪ್ರತಿಭಟನೆ





ಸುಡಾನ್‌ನಲ್ಲಿ ಇಸ್ಲಾಮಿಕ್ ಸರ್ವಾಧಿಕಾರಿ ಅಧ್ಯಕ್ಷ ಒಮರ್ ಅಲ್-ಬಶೀರ್ ಅವರ 30 ವರುಷಗಳ ಆಡಳಿತವನ್ನು ಮಿಲಿಟರಿ ದಂಗೆಯ ಮೂಲಕ ಪತನಗೊಳಿಸಲಾಗಿದೆ. ಆ ನಂತರ ಸುಡಾನನ್ನು ಮಿಲಿಟರಿ ನಿಯಂತ್ರಣ ಕ್ಕೆ ತೆಗೆದುಕೊಳ್ಳಲು ಅಲ್ಲಿನ ರಕ್ಷಣಾ ಮಂತ್ರಿ ಮಿಸ್ಟರ್ ಅವಾದ್ ಮೊಹಮ್ಮದ್ ರು ಆದೇಶಿಸಿದ್ದಾರೆ. ರಕ್ಷಣಾ ಮಂತ್ರಿಯವರು ಮಿಲಿಟರಿಯ ಸುಪ್ರೀಂ ಸೆಕ್ಯೂರಿಟಿ ಕಮಿಟಿಯ ಮುಖ್ಯಸ್ಥ ರಾಗಿರುವುದರಿಂದ, ಬಶೀರ್ ಆಡಳಿತದ ಪತನದ ನಂತರ ಮಿಲಿಟರಿಗೆ ಎರಡು ವರ್ಷಗಳ ಕಾಲ ಆಡಳಿತ ನಡೆಸಲು ಆ ನಂತರ, ಮಿಲಿಟರಿಯು, ಮಧ್ಯಂತರ ಕೌನ್ಸಿಲ್ ರಚಿಸಿ, ಅಲ್ಲಿನ ಲೆಫ್ಟಿನೆಂಟ್ ಜನರಲ್ ಅಬ್ದೆಲ್ ಫತಾಹ್ ಅಬ್ದೇಲ್ ರೆಹಮಾನ್ ಬುರ್ಹಾನ್ ರಿಗೆ ಆಡಳಿತ ನಿರ್ವಹಿಸಲು ವಹಿಸಿ ಕೊಡಲಾಗಿದೆ.

ಅಧ್ಯಕ್ಷ ಬಶೀರ್ ರ ಸರಕಾರದ ಆಡಳಿತವು ತುಂಬ ಕೆಟ್ಟ ಹಾಗೂ ವ್ಯವಸ್ಥಿತವಾದ ಭ್ರಷ್ಟಾಚಾರ ದಲ್ಲಿ ಮುಳುಗಿತ್ತು, ನ್ಯಾಯ ಎನ್ನುವುದು ಅಲ್ಲಿ ಗೈರು ಹಾಜರಾಗಿತ್ತು. ಆರ್ಥಿಕ ಅಸಮಾನತೆ ಹೆಚ್ಚಾಗಿ ಶ್ರೀಮಂತರು ಹೆಚ್ಚು ಶ್ರೀಮಂತರಾಗಿ, ಬಡವರು ಮತ್ತಷ್ಟು ಕಡು ಬಡವರಾಗಿದ್ದರು. ಆರ್ಥಿಕ ಸಮಾನತೆ ಎಂಬುದು ಮರೀಚಿಕೆಯಾಗಿತ್ತು. ನಿರುದ್ಯೋಗ ದ ಹೆಚ್ಚಳದಿಂದ ಯುವಕರು ಜೀವನದಲ್ಲಿ ಭರವಸೆಗಳನ್ನು ಕಳೆದುಕೊಂಡು ಕಂಗಾಲಾಗಿದ್ದರು. ಈ ಸರಕಾರಕ್ಕೆ ದೇಶದೊಳಗೆ ಬಹಳಷ್ಟು ವಿರೋಧವಿದ್ದರೂ ಯು.ಎಸ್., ಕೆನಡಾ, ಯುರೋ ಕೂಟ ಗಳ ತ್ರಿಮೂರ್ತಿ'ಗಳ ಮತ್ತು ಪ್ರಾದೇಶಿಕ ಪ್ರತಿಗಾಮಿ ಸರಕಾರಗಳಾದ ಕಟಾರ್, ಈಜಿಪ್ಟ್ ಮತ್ತು ಟರ್ಕಿಗಳ ಬೆಂಬಲವಿತ್ತು.

ಜೊತೆಗೆ, ಆಹಾರ ಪದಾರ್ಥಗಳ ಮೇಲಿನ ಸಬ್ಸಿಡಿ ಗಳನ್ನು ತೆಗೆದು ಹಾಕಲಾಗಿತ್ತು. ಇದರಿಂದಾಗಿ, ಬ್ರೆಡ್ ಬೆಲೆಯು 3 ಪಟ್ಟು ಹೆಚ್ಚಾಗಿತ್ತು. ಇದರ ವಿರುದ್ದ ಸೂಡಾನ್ ಕಮ್ಯೂನಿಸ್ಟ್ ಪಕ್ಷ (ಎಸ್.ಸಿ.ಪಿ) ಭಾರೀ ಪ್ರತಿಭಟನೆಯನ್ನು ನಡೆಸಿತ್ತು. ಈ ಸಂದರ್ಭಗಳಲ್ಲಿ ಎಸ್.ಸಿ.ಪಿ ಮುಖಂಡರಾದ ಮುಹಮ್ಮದ್ ಮುಖ್ತಾರ್ ಅಲ್-ಖಾಟೇಬ್ ಮತ್ತಿತರ ವಿರೋಧ ಪಕ್ಷದ ಜನ ಪ್ರತಿನಿಧಿಗಳನ್ನು ಬಂಧಿಸಿ ಕಳೆದ ಜನವರಿ 2018 ರಲ್ಲಿ ಸೆರೆಮನೆಗೆ ನೂಕಲಾಗಿತ್ತು. ಅದಾಗ್ಯೂ, ಈ ಜನ ಚಳುವಳಿ ಅಲ್ಲಿ ನಿರಂತರವಾಗಿ ನಡೆಯುತ್ತಲೇ ಇತ್ತು.

ಈ ಹಿನ್ನೆಲೆಯಲ್ಲಿ, ಮಿಲಿಟರಿ ದಂಗೆ ಎದ್ದು ಅಧ್ಯಕ್ಷ ಬಶೀರ್ ರನ್ನು ಬಂಧಿಸಿ ಅವರ 30 ವರ್ಷಗಳ ಸರ್ವಾಧಿಕಾರಿ ಆಡಳಿತ ಕೊನೆಗೊಳಿಸಲಾಗಿದೆ. ಎರಡು ವರ್ಷಗಳ ಕಾಲ ಮಿಲಿಟರಿಗೆ ಆಡಳಿತ ನಿರ್ವಹಣೆಯನ್ನು ವಹಿಸಿ ಕೊಡಲಾಗಿದೆ. ಆದರೆ, ಈ ಮಿಲಿಟರಿ ಆಡಳಿತ ವಹಿಸಿಕೊಂಡ ಒಂದೇ ಗಂಟೆಯೊಳಗೆ ಸುಡಾನಿನ ಸಂವಿಧಾನವನ್ನು ರದ್ದು ಗೊಳಸಿದೆ. ಮೂರು ತಿಂಗಳುಗಳ ಕಾಲ ತುರ್ತು ಪರಿಸ್ಥಿತಿಯನ್ನು ಹೇರಿದೆ. ಒಂದು ತಿಂಗಳ ಕಾಲ ಕರ್ಫ್ಯೂವನ್ನು ಘೋಷಿಸಿದೆ ಮತ್ತು ದೇಶದ ಎಲ್ಲಾ ಗಡಿಗಳನ್ನು ಮತ್ತು ವೈಮಾನಿಕ ಮಾರ್ಗ ಗಳನ್ನು ಒಂದು ತಿಂಗಳ ಕಾಲ ಮುಚ್ಚಲಾಗಿದೆ.

ಲೆಫ್ಟಿನೆಂಟ್ ಜನರಲ್ ನ ಮಿಲಿಟರಿ ಆಡಳಿತದ ವಿರುದ್ಧ ಈಗಾಗಲೇ ಭಾರೀ ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆಗಳು ಇಡೀ ಸುಡಾನ್ ದೇಶದಲ್ಲಿ ಆರಂಭಗೊಡಿದೆ. ಈ ಪ್ರತಿಭಟನೆಯ ನೇತೃವನ್ನು ಸುಡಾನಿನ ಪ್ರೊಫೆಷನಲ್ಸ್ ಅಸೋಸಿಯೇಷನ್ (ಎಸ್.ಪಿ.ಎ) ವಹಿಸಿದೆ. ಎಸ್.ಪಿ.ಎ ಟ್ರೇಡ್ ಯೂನಿಯನ್ ಗಳು, ವೈದ್ಯರು ಮತ್ತು ವಕೀಲ ಸಂಘಟನೆಗಳು ಸುಡಾನ್ ಕಮ್ಯೂನಿಸ್ಟ್ ಪಕ್ಷ ಸೇರಿದಂತೆ ಅನೇಕ ರಾಜಕೀಯ ಪಕ್ಷಗಳ ಒಂದು ಜಂಟಿ ಸಂಘಟನೆಯಾಗಿದೆ. ಸೆರೆಮನೆಗೆ ನೂಕಲಾಗಿದ್ದ ಎಸ್.ಸಿ.ಪಿ ಯ ಮುಖಂಡರಾದ ಮುಹಮ್ಮದ್ ಮುಖ್ತಾರ್ ಅಲ್-ಖಾಟೇಬ್ ಹಾಗೂ ಮತ್ತಿತರ ರಾಜಕೀಯ ಪಕ್ಷಗಳ ಜನಪ್ರತಿನಿಧಿಗಳಲ್ಲಿ, ಕೆಲವರನ್ನು ಇದೀಗ ಬಿಡುಗಡೆ ಗೊಳಿಸಲಾಗಿದೆ.

ಎಸ್.ಪಿ.ಸಿ ಯ ನಾಯಕ ಮುಹಮ್ಮದ್ ಮುಖ್ತಾರ್ ರ ಬಿಡುಗಡೆ ಯ ನಂತರ, ಪಕ್ಷದ ಕಚೇರಿಯಲ್ಲಿ ಸ್ವಾಗತ ಕೋರುವ ಸಂದರ್ಭದಲ್ಲಿ ಪ್ರತಿಕ್ರಿಯಿಸುತ್ತಾ, ಅಧ್ಯಕ್ಷ ಬಶೀರ್ ರನ್ನು ಕ್ರಾಂತಿಯ ಮೂಲಕ ಪತನಗೊಳಿಸಲಾಗಿದೆ. ಆದಾಗ್ಯೂ, ಸ್ವಾತಂತ್ರ್ಯ, ಶಾಂತಿ, ನ್ಯಾಯ ಹಾಗೂ ನಾಗರೀಕ ಸರಕಾರ ದ ಸ್ಥಾಪನೆಗಾಗಿ ಚಳುವಳಿ ಮುಂದುವರಿಯುತ್ತದೆ. ಕೊನೆಯ ವಿಜಯದ ವರೆಗೆ ಕ್ರಾಂತಿ ಮುಂದುವರೆಯುತ್ತದೆ, ಎಂದಿದ್ದಾರೆ.

ಈ ಹಿನ್ನೆಲೆಯಲ್ಲಿ ಮಿಲಿಟರಿ ಆಡಳಿತ ವಹಿಸಿಕೊಂಡಿರುವ ಮಿಲಟರಿ ಕೌನ್ಸಿಲ್ ನಾಯಕ ಲೆಫ್ಟಿನೆಂಟ್ ಜನರಲ್ ತೆಗೆದು ಕೊಂಡಿರುವ ತುರ್ತು ಕ್ರಮಗಳ ವಿರುದ್ದ ಇಡೀ ಸೂಡಾನ್ ನಲ್ಲಿ ಕಮ್ಯೂನಿಸ್ಟ್ ರ ನಾಯಕ ತ್ವದಲ್ಲಿ ಬೃಹತ್ ಚಳುವಳಿ ನಡೆಯುತ್ತಿದ್ದು, ಮಿಲಿಟರಿ ಆಡಳಿತವನ್ನು ತಕ್ಷಣದಿಂದಲೇ ಕೊನೆಗೊಳಿಸಿ, ಜನ ಪ್ರತಿನಿಧಿ ಗಳಿಗೆ ಆಡಳಿತ ನಡೆಸಲು ಅನುವು ಮಾಡಿಕೊಡಬೇಕು ಎಂಬ ಬೇಡಿಕೆ ಯೊಂದಿಗೆ ಹೋರಾಟವನ್ನು ಮುಂದುವರಿಸಲಾಗುತ್ತಿದೆ.

ಸುಡಾನಿನ ಈ ಕ್ಷಿಪ್ರ ರಾಜಕೀಯ ಬದಲಾವಣೆ ಕುತೂಹಲ ಕೆರಳಿಸಿದ್ದು, ಅದು ಈ ಈಜಿಪ್ಟಿನ ಅಥವಾ ಟ್ಯುನಿಶಿಯಾದ ಅಥವಾ ಸ್ವತಂತ್ರ ಹಾದಿ ಹಿಡಿಯುವುದೋ ಎಂದು ವೀಕ್ಷಕರು ಕಾದು ನೋಡುತ್ತಿದ್ದಾರೆ. ●

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಜಲಿಯಾನ್‌ವಾಲಾ ಬಾಗ್ ಹತ್ಯಾಕಾಂಡಕ್ಕೆ ಕ್ಷಮೆಕೇಳಲು ಒತ್ತಾಯ

ಜಲಿಯಾನ್‌ವಾಲಾ ಬಾಗ್ ಹತ್ಯಾಕಾಂಡದ ಶತಮಾನೋತ್ಸವ ವರ್ಷವನ್ನು ದೇಶದಲ್ಲಿ ಈ ವರ್ಷ ಆಚರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಬ್ರಿಟನಿನಲ್ಲಿ ಇಂಡಿಯನ್ ವರ್ಕರ್ಸ್ ಅಸೋಶಿಯೇಶನ್ ಸೇರಿದಂತೆ ಹಲವು ಸಂಘಟನೆಗಳ ಕೂಟ ಕಳೆದ 18 ತಿಂಗಳುಗಳಿಂದ ಜಲಿಯಾನ್‌ವಾಲಾ ಬಾಗ್ ಹತ್ಯಾಕಾಂಡದ ಇನ್ನೊಂದು ಆಯಾಮವನ್ನು ಎತ್ತಿಕೊಂಡು ಹೋರಾಟ ಮಾಡುತ್ತಿದೆ. ಈ ಕುರಿತು ಈ ಕೂಟ ಎರಡು ಹಕ್ಕೊತ್ತಾಯಗಳನ್ನು ರೂಪಿಸಿದ್ದು ಅದರ ಜಾರಿಗೆ ಹೋರಾಟ ಮಾಡುತ್ತಿದೆ. ಆ ಎರಡು ಹಕ್ಕೊತ್ತಾಯಗಳು ಹೀಗಿವೆ:

* ಬ್ರಿಟನಿನ ಪ್ರಧಾನಿ ಈ ಘೋರ ಹತ್ಯಾಕಾಂಡದ ಕುರಿತು ಕ್ಷಮೆಕೇಳಬೇಕು
* ಬ್ರಿಟಿಶ್ ವಸಾಹತು ಆಡಳಿತದ ಕ್ರೌರ್ಯಗಳನ್ನು ಹೇಳುವ ಚರಿತ್ರೆಯನ್ನು ಬ್ರಿಟಿಶ್ ಶಾಲೆಗಳಲ್ಲಿ ಬೋಧಿಸಬೇಕು

ಏಶ್ಯನ್ ಸಮುದಾಯಗಳು ನಡೆಸುವ ಶಾಲೆಗಳಲ್ಲಿ ಬ್ರಿಟಿಶ್ ವಸಾಹತು ಬಗ್ಗೆ ಚರಿತ್ರೆಯನ್ನು ಬೋಧಿಸಲಾಗುತ್ತಿದೆ. ಆದರೆ ಇದನ್ನು ಎಲ್ಲಾ ಶಾಲೆಗಳಿಗೆ ಬೋಧೀಸಬೇಕಾಗಿದೆ.

ಈ ಚಳುವಳಿ ಈ ಕುರಿತು ಒಂದು ಆನ್-ಲೈನ್ ಅರ್ಜಿಯನ್ನು ಹಾಕುವ ಮೂಲಕ ಆರಂಭವಾಯಿತು. ಈ ಅರ್ಜಿಗೆ 1.5 ಲಕ್ಷ ಜನ ಸಹಿ ಮಾಡಿದ್ದರು. ಭಾರತ ಮಾತ್ರವಲ್ಲದೆ ಪಾಕಿಸ್ತಾನ, ಬಾಂಗ್ಲಾದೇಶಿ ಮೂಲದವರು ಹಾಗೂ ಸಾಮ್ರಾಜ್ಯಶಾಹಿ-ವಿರೋಧಿಗಳು ಈ ಚಳುವಳಿಯಲ್ಲಿ ಭಾಗವಹಿಸುತ್ತಿದ್ದಾರೆ.

ಎಪ್ರಿಲ್ 10 ರಂದು 77 ಬ್ರಿಟಿಶ್ ಸಂಸದರು ವಿಧೇಶಾಂಗ ಕಾರ್ಯದರ್ಶಿಗೆ ಪತ್ರ ಬರೆದು ಬ್ರಿಟಿಶ್ ಪ್ರಧಾನಿ ಜಲಿಯಾನ್ ವಾಲಾ ಬಾಗ್ ಹತ್ಯಾಕಾಂಡದ ಬಗ್ಗೆ ಕ್ಷಮೆ ಕೇಳಬೇಕೆಂದು ಒತ್ತಾಯಿಸಿದ್ದಾರೆ. ಅವರು ಈ ಪತ್ರದಲ್ಲಿ, "ನಾವು ಭೂತಕಾಲದಲ್ಲಿ ಹೋಗಿ ಅದನ್ನು ಅಳಿಸಲು ಆಗುವುದಿಲ್ಲ. ಇಂದು ಸಾಮಾನ್ಯ ಮತ್ತು ಸಕಾರಾತ್ಮಕ ರಾಜತಾಂತ್ರಿಕ ಸಂಬಂಧ ಹೊಂದಿರುವ ಎರಡು ದೇಶಗಳ ನಡುವಿನ ಆಧುನಿಕ ಸಂಬಂಧಕ್ಕೆ ಸರಿತೂಗುವ ಕ್ರಮ ಕೈಗೊಳ್ಳುವುದು ಸಾಧ್ಯವಿದೆ" ಎಂದಿದೆ. 2013ರಲ್ಲಿ ಜಲಿಯಾನ್‌ವಾಲಾ ಬಾಗ್ ಹತ್ಯಾಕಾಂಡದ ಸ್ಮಾರಕಕ್ಕೆ ಭೇಟಿ ನೀಡಿದ ಆಗಿನ ಪ್ರಧಾನಿ ಕೆಮರೂನ್ ಹತ್ಯಕಾಂಡವನ್ನು "ತೀರಾ ನಾಚಿಕೆಗೇಡಿನದ್ದು" ಎಂದು ಬಣ್ಣಿಸಿ, ಕ್ಷಮೆಯಾಚನೆಗೆ ಹಿಂಜರಿದಿದ್ದರತ್ತ ಪತ್ರ ಗಮನ ಸೆಳೆದಿದೆ. ಇತ್ತೀಚೆಗೆ ಈಗಿನ ಪ್ರಧಾನಿ ಮೇ ಹತ್ಯಾಕಾಂಡವನ್ನು 'ವಿಷಾದಕರ' ಎಂದು ಬಣ್ಣಿಸಿ, ಪುನಃ ಕ್ಷಮೆಯಾಚನೆಗೆ ಹಿಂಜರಿದಿರುವುದನ್ನು ಕಾಣಬಹುದು.

ಎಪ್ರಿಲ್ 9 ರಂದು ಪಾರ್ಲಿಮೆಂಟಿನಲ್ಲಿ ನಡೆದ ಚರ್ಚೆಯಲ್ಲಿ ಸಹ ಪಕ್ಷಾತೀತವಾಗಿ ಈ ಹಕ್ಕೊತ್ತಾಯಗಳಿಗೆ ಹಲವು ಸಂಸತ್ ಸದಸ್ಯರು ಬೆಂಬಲಿಸಿದ್ದಾರೆ. ಸಂಸತ್ ಸದಸ್ಯರಲ್ಲದೆ ಲೇಖಕರು, ವಿ.ವಿ.ಗಳ ಪ್ರೊಫೆಸರುಗಳು, ಫಿಲಂ ಕಲಾವಿದರು, ಸಹ ಕ್ಷಮೆಯಾಚನೆಗೆ ಒತ್ತಾಯಿಸಿದ್ದಾರೆ. ಏಪ್ರಿಲ್ 13ರಂದು ಲಂಡನಿನಲ್ಲಿ ನಡೆದ ಸಮ್ಮೇಳನವೊಂದರಲ್ಲಿ ಇದಕ್ಕಾಗಿ ಒಂದು ನಿರ್ಣಯ ಅಂಗೀಕರಿಸಲಾಯಿತು.

ಬ್ರಿಟನಿನಲ್ಲಿ ವಾಸಿಸುತ್ತಿರುವ ಇಂಡಿಯನ್ ಸಮುದಾಯದ ಜನ ಈ ಕುರಿತು ಭಾರತ ಸರಕಾರದ ಧೋರಣೆ ಕುರಿತು ಆಕ್ರೋಶ, ಆತಂಕ ವ್ಯಕ್ತ ಪಡಿಸಿದ್ದಾರೆ. ಭಾರತ ಸರಕಾರ ಶತಮಾನೋತ್ಸವವನ್ನು ಸಮರ್ಪಕವಾದ ರೀತಿಯಲ್ಲಿ ಆಚರಿಸಿ, ಬ್ರಿಟಿಷ್ ಸರಕಾರದಿಂದ ಕ್ಷಮಾಯಾಚನೆ ಒತ್ತಾಯಿಸಲು ರಾಜಕೀಯ ಇಚ್ಛೆ ಪ್ರದರ್ಶಿಸಿಲ್ಲ. ಭಾರತ ಸರಕಾರ ಪಾರ್ಲಿಮೆಂಟಿನಲ್ಲಿ ಈ ಕುರಿತು ನಿರ್ಣಯವೊಂದನ್ನು ಮಂಡಿಸಿ, ಬ್ರಿಟಿಶ್ ಸರಕಾರದ ಮೇಲೆ ಒತ್ತಡ ತರಬೇಕು ಎಂದು ಒತ್ತಾಯಿಸುತ್ತಿದೆ. ಇಂತಹ ಒಂದು ಕ್ರಮಕ್ಕೆ ಇದು ಸಕಾಲ ಏಕೆಂದರೆ ಶತಮಾನೋತ್ಸವ ಅಲ್ಲದೆ, ಇನ್ನೊಂದು ರೀತಿಯಲ್ಲಿ ಇದು ಸಕಾಲ ಎಂದು ಭಾರತೀಯ ಸಮುದಾಯ ಅಭಿಪ್ರಾಯ ಪಡುತ್ತದೆ. ಬ್ರಿಟನ್ ಬ್ರೆಕ್ಸಿಟ್ ನ ಬಗ್ಗೆ ವಾಗ್ವಾದದಿಂದಾಗಿ ಒಂದು ಕವಲುದಾರಿಯಲ್ಲಿ ನಿಂತಿದ್ದು ಇತರ ದೇಶಗಳ ನಡುವೆ ಸಂಬಂಧಗಳನ್ನು ಪುನನಿರ್ವಚಿಸುವುದಕ್ಕೆ ತೆರೆದುಕೊಂಡಿದೆ. ಎಂಬುದು ಅವರ ಅಭಿಪ್ರಾಯ. 17ನೇ ಲೋಕಸಭೆ ರಚನೆಯಾದ ನಂತರ ಭಾರತದಲ್ಲಿ ಅಧಿಕಾರ ವಹಿಸಿಕೊಳ್ಳುವ ಸರಕಾರ ಪಾರ್ಲಿಮೆಂಟಿನಲ್ಲಿ ಈ ಕುರಿತು ನಿರ್ಣಯ ಮಂಡಿಸಬೇಕೆಂದು ಕೂಟ ಒತ್ತಾಯಿಸಿದೆ.

ಜಲಿಯಾನ್‌ವಾಲಾ ಬಾಗ್ ಹತ್ಯಾಕಾಂಡಕ್ಕೆ ಬ್ರಿಟಿಶ್ ಪ್ರಧಾನಿ ಕ್ಷಮಾಯಾಚನೆ ಮಾಡಬೇಕೆಂದು ಒತ್ತಾಯಿಸುತ್ತಿರುವ ಕೂಟದಲ್ಲಿ ಇಂಡಿಯನ್ ವರ್ಕರ್ಸ್ ಯೂನಿಯನ್, ಸೌತ್ ಏಶಿಯನ್ ಪೀಪಲ್ಸ್ ಫೋರಂ ಯುಕೆ, ಡೆರ್ಬಿ ಟ್ರೇಡ್ಸ್ ಯೂನಿಯನ್ ಕೌನ್ಸಿಲ್, ಶಹೀದ್ ಭಗತ್ ಸಿಂಗ್ ವೆಲ್ಫೇರ್ ಸೆಂಟರ್-ಲೈಸೆಸ್ಟರ್, ಡೆರ್ಬಿ ಸ್ಟ್ಯಾಂಡ್ಸ್ ಅರ್ಪ ಟು ರೇಸಿಸಮ, ಮಂಡೇಲಾ ಸೆಂಟರ್ ಡೆರ್ಬಿ, ಶಹೀದ್ ಊಧಮ್ ಸಿಂಗ್ ವೆಲ್ಫೇರ್ ಸೆಂಟರ್-ಬರ್ಮಿಂಗ್ ಹ್ಯಾಮ್, ನೇಶನಲಿಸ್ಟ್ ಸೋಶಲಿಸ್ಟ್ ವರ್ಕರ್ಸ್ ಯೂನಿಯನ್, ಮಾರ್ಕ್ಸ್ ಮೆಮೊರಿಯಲ್ ಲೈಬ್ರರಿ, ಲಿಬರೇಶನ್, ವಾಯ್ಸ್ ಆಫ್ ವಿಮೆನ್-ಸೌತಾಲ್ ಮುಂತಾದ ಸಂಘಟನೆಗಳು ಸೇರಿವೆ. ●

ಚಂಡಮಾರುತ ಫೊನಿಯಿಂದ ಅಪಾರ ಹಾನಿ:

ಸಿಪಿಐ(ಎಂ) ಪೊಲಿಟ್ ಬ್ಯುರೊ ಆತಂಕ



ಚಂಡಮಾರುತ ಫೊನಿಯಿಂದ ಒಡಿಶ ಮತ್ತು ಆಂದ್ರಪ್ರದೇಶದ ಉತ್ತರ ಭಾಗಗಳಲ್ಲಿ ಕರಾವಳಿ ಪ್ರದೇಶಗಳಲ್ಲಿ ಜೀವ, ಜಾನುವಾರು ಮತ್ತು ಆಸ್ತಿಗಳಿಗೆ ಉಂಟಾಗಿರುವ ಭಾರೀ ಹಾನಿಯ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯುರೊ ಗಂಭೀರ ಆತಂಕ ವ್ಯಕ್ತಪಡಿಸಿದೆ. ಈ ತೀವ್ರ ಚಂಡಮಾರುತ ಈಗ ಪಶ್ಚಿಮ ಬಂಗಾಲದತ್ತ ಸಾಗುತ್ತಿದ್ದು ಇನ್ನಷ್ಟು ಹಾನಿ ಉಂಟು ಮಾಡಬಹುದು ಎಂದು ಹೇಳಲಾಗುತ್ತಿದೆ.

ಕೇಂದ್ರ ಮತ್ತು ಸಂಬಂಧಿತ ರಾಜ್ಯ ಸರಕಾರಗಳು ಜನಗಳಿಗೆ ಪರಿಹಾರ ಒದಗಿಸಲು ಮತ್ತು ಅವರನ್ನು ಇನ್ನಷ್ಟು ಕಷ್ಟ-ಕಾರ್ಪಣ್ಯಗಳಿಂದ ರಕ್ಷಿಸಲು ಅತ್ಯಂತ ತುರ್ತಿನಿಂದ ಕೆಲಸ ಮಾಡಬೇಕಾಗಿದೆ. ಸಂಪನ್ಮೂಲಗಳ ಕೊರತೆ ಯುದ್ಧಸ್ತರದಲ್ಲಿ ಕಾರ್ಯಾಚರಣೆಗಳನ್ನು ಆರಂಭಿಸಲು ಅಡ್ಡಿಯಾಗಬಾರದು ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ, ಸಂಕಟಗ್ರಸ್ತ ಪ್ರದೇಶಗಳಲ್ಲಿ ಪರಿಹಾರಗಳನ್ನು ಒದಗಿಸಲು ಮತ್ತು ಸಂಕಟಕ್ಕೆ ಗುರಿಯಾಗುವವರ ನೆರವಿಗೆ ಧಾವಿಸುವಂತೆ ಪಕ್ಷದ ಎಲ್ಲ ಘಟಕಗಳನ್ನು ಜಾಗೃತಗೊಳಿಸಲಾಗಿದೆ ಎಂದು ಹೇಳಿದೆ. ●

JANASHAKTHI KANNADA VARA PATRIKE MAY 6-12, 2019 Price: Rs. 10/- Date of Publication: 3 MAY 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283





ರಾಯಚೂರು ಇಂಜಿನಿಯರಿಂಗ್ ವಿದ್ಯಾರ್ಥಿನಿಯ ನಿಗೂಢ ಸಾವು ಸ್ಫೋಟಗೊಂಡ ಜನಾಕ್ರೋಶ

ಅದು ಎಪ್ರಿಲ್ 25. ಸಮಯ ಮಧ್ಯಾಹ್ನ ಸುಮಾರು 12 ಗಂಟೆ. ರಾಯಚೂರ್ ಜಿಲ್ಲಾಧಿಕಾರಿ ಕಚೇರಿಯ ಎದುರಿನ ಮುಖ್ಯ ರಸ್ತೆಯಲ್ಲಿ ವಾಹನ ಸಂಚಾರ ಸ್ತಬ್ಧಗೊಂಡಿತ್ತು. ರಸ್ತೆಯ ಇಕ್ಕೆಡೆಗಳಲ್ಲಿನ ಅಂಗಡಿಗಳು, ಹೊಟೇಲುಗಳು ಒಂದರನಂತರ ಒಂದರಂತೆ ಮುಚ್ಚಿಕೊಳ್ಳುತ್ತಿದ್ದವು. ನೆತ್ತಿಯ ಮೇಲೆ ಸುಡುತ್ತಿರುವ ಬಿಸಿಲು, ಕಾಲಕೆಳಗೆ ಕೆಂಡದಂತೆ ಉರಿಯುತ್ತಿರುವ ನೆಲವನ್ನು ಲೆಕ್ಕಿಸದ ಸಾವಿರಾರು ಜನ ಅಲ್ಲಿ ಬಂದು ಸೇರಿಕೊಂಡಿದ್ದರು. “ಮಧು ಪತ್ತಾರ್ ಸಾವಿಗೆ ನ್ಯಾಯಬೇಕು, ಅತ್ಯಾಚಾರಿ ಕೊಲೆಗಡುಕರಿಗೆ ಕಠಿಣ ಶಿಕ್ಷೆಯಾಗಬೇಕು.” ಎಂಬಿತ್ಯಾದಿ ಆಕ್ರೋಶದ ಅವರ ಘೋಷಣೆಗಳು ಮುಗಿಲು ಮುಟ್ಟುವಂತಿದ್ದವು.

ಮಧು ಇಲ್ಲಿಯ ನವೋದಯ ಕಾಲೇಜಿನ ಇಂಜಿನಿಯರಿಂಗ್ ವಿದ್ಯಾರ್ಥಿನಿ. ಏಪ್ರಿಲ್ 13ರಂದು ಕಾಲೇಜಿಗೆ ಹೋದವಳು ಕಾಣೆಯಾಗಿದ್ದಳು. ಮೂರು ದಿನಗಳ ನಂತರ ಅವಳ ಅರೇಬರೇ ಸುಟ್ಟ ದೇಹ ಮಾಣಿಕ ಪ್ರಭು ದೇವಸ್ಥಾನದ ಹಿಂಬದಿಯ ಬೆಟ್ಟದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಸ್ಥಳದಲ್ಲಿ ದೊರಕಿತ್ತು ಎನ್ನಲಾದ ಪತ್ರದ ಆಧಾರದಲ್ಲಿ ಪೊಲೀಸರು ಆತ್ಮಹತ್ಯಾ ಪ್ರಕರಣವನ್ನು ದಾಖಲಿಸಿ ಕೊಂಡಿದ್ದರು. ಆದರೆ, ವಿದ್ಯಾರ್ಥಿಗಳ ತೀವ್ರ ಪ್ರತಿಭಟನೆ ಹಾಗೂ ವಿದ್ಯಾರ್ಥಿನಿಯ ಪಾಲಕರಿಂದ ತಮ್ಮ ಮಗಳ ಮೇಲೆ ಅತ್ಯಾಚಾರವೆಸಗಿ ಹತ್ಯೆ ಮಾಡಲಾಗಿದೆ ಎಂಬ ದೂರು ಸಲ್ಲಿಕೆಯಾದ ನಂತರ ಐ.ಪಿ.ಸಿ. 302 ಮತ್ತು 376 ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿ ಆರೋಪಿಗಳಲ್ಲಿ ಒಬ್ಬನನ್ನು ಬಂಧಿಸಲಾಗಿತ್ತು. ಸಾಮಾಜಿಕ ಜಾಲ ತಾಣದಲ್ಲಿ ಪ್ರಕರಣಕ್ಕೆ ವ್ಯಾಪಕ ಖಂಡನೆ ವ್ಯಕ್ತವಾಗಿ, ನಿಷ್ಪಕ್ಷಪಾತವಾಗಿ ತನಿಖೆಯಾಗಬೇಕೆಂಬ ಕೂಗು ತೀವ್ರವಾದಾಗ ರಾಯಚೂರು ಡಿ.ವೈ.ಎಸ್.ಪಿ. ಶೀಲವಂತರ್ ನೇತೃತ್ವದ ತನಿಖಾ ತಂಡ ರಚನೆಯಾಯಿತು. ವಿವಿಧ ವಿದ್ಯಾರ್ಥಿ ಹಾಗೂ ಮಹಿಳಾ ಸಂಘಟನೆಗಳ ಒತ್ತಡ ಹೆಚ್ಚಾದಾಗ ಸಮಗ್ರ ತನಿಖೆ ನಡೆಸಲು ರಾಜ್ಯ ಸರ್ಕಾರ ಪ್ರಕರಣವನ್ನು ಸಿಐಡಿಗೆ ಒಪ್ಪಿಸಿತು. ಸಿಐಡಿ ಯ ಎಸ್.ಪಿ ಶರಣಪ್ಪ ನೇತೃತ್ವದ ತಂಡ ತನಿಖೆಯನ್ನು ಆರಂಭಿಸಿದೆ.

ಈ ನಡುವೆ, ವಿದ್ಯಾರ್ಥಿನಿಯ ಪಾಲಕರು ದೂರು ನೀಡಲು ಮಹಿಳಾ ಪೊಲೀಸ್ ಠಾಣೆಗೆ ಬಂದಾಗ ಮಹಿಳಾ ಪಿಎಸ್ಐ ಮತ್ತು ಒಬ್ಬ ಪೊಲೀಸ್ ಪೇದೆ ಕರ್ತವ್ಯ ಲೋಪ ಎಸಗಿದ್ದಾರೆ ಎಂಬ ಆರೋಪದ ಮೇಲೆ ಅವರಿಬ್ಬರನ್ನು ಸೇವೆಯಿಂದ ಅಮಾನತು ಗೊಳಿಸಲಾಗಿದೆ. ಇಷ್ಟಾದರೂ ನಿಷ್ಪಕ್ಷಪಾತವಾದ ತನಿಖೆಗೆ ಒತ್ತಾಯಿಸಿ ಜನಚಳುವಳಿ ತಣ್ಣಗಾಗದೆ ರಾಜ್ಯದೆಲ್ಲೆಡೆ ವಿಸ್ತರಿಸಿತು. ಮಾತ್ರವಲ್ಲ ಹೊರ ರಾಜ್ಯಗಳಿಗೂ ಹರಡಿತು. ಚಲನಚಿತ್ರ ಕಲಾವಿದರು ಸಹ ಪಾಲ್ಗೊಳ್ಳತೊಡಗಿದರು.



ಲೋಕಸಭಾ ಚುನಾವಣೆಗಳ ನಡುವೆಯೂ ಮಧು ಸಾವಿನ ಪ್ರಕರಣ ಸಾರ್ವತ್ರಿಕ ಗಮನ ಸೆಳೆಯಿತು.

ಸಿಐಡಿ ತನಿಖೆಯನ್ನು ಚುರುಕುಗೊಳಿಸಬೇಕೆಂದು ಒತ್ತಾಯಿಸಲು ಏಪ್ರಿಲ್ 25ರಂದು ವಿಶ್ವಕರ್ಮ ಸಮಾಜದವರು ಒಂದು ಪ್ರತಿಭಟನಾ ಮೆರವಣಿಗೆಯನ್ನು ಹಮ್ಮಿಕೊಂಡಿದ್ದರು. ಮಧುರವರ ಶವ ದೊರೆತ ಸ್ಥಳದಿಂದ ಮೆರವಣಿಗೆಯಲ್ಲಿ ಹೊರಟು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿ ಮನವಿ ಸಲ್ಲಿಸುವ ಕಾರ್ಯಕ್ರಮ ಅದಾಗಿತ್ತು. ಮಧು ಪತ್ತಾರ್‌ರವರ ತಂದೆ ನಾಗರಾಜ ಮತ್ತು ತಾಯಿ ರೇಣುಕಾ ಈ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವುದಾಗಿ ಪ್ರಕಟಿಸಿದ್ದರು.

ವಿದ್ಯಾರ್ಥಿ ಸಂಘಟನೆಗಳು, ಮಹಿಳಾ ಸಂಘಟನೆಗಳು ಅಲ್ಲದೆ ಇತರ ಸಮಾನ ಮನಸ್ಕ ರೈತ, ಕಾರ್ಮಿಕ, ನೌಕರ, ಕೃಷಿ ಕೂಲಿಕಾರ ಸಂಘಟನೆಗಳು ಮಧು ರವರ ತಾಯಿ ತಂದೆಯರಿಗೆ ಬೆಂಬಲ ನೀಡಲು ಮುಂದೆ ಬಂದಿದ್ದರು. ಆದರೆ, ಜಿಲ್ಲಾಧಿಕಾರಿ ಕಚೇರಿ ಎದುರು ಸ್ವಲ್ಪ ಕಾಲ ಪರಿಸ್ಥಿತಿ ಉದ್ರಿಕ್ತಗೊಂಡಿತ್ತು. ಸಮಾಜದ ಮುಖಂಡರೊಬ್ಬರು ಮೈ ಮೇಲೆ ಸೀಮೆಎಣ್ಣೆ ಸುರಿದುಕೊಂಡು ಆತ್ಮಾಹುತಿಗೆ ಪ್ರಯತ್ನ ಪಟ್ಟರು. ಇದರಿಂದಾಗಿ ಅಲ್ಲಿ ಸೇರಿದ್ದ ಅನಿಯಂತ್ರಿತ ಜನಜಂಗುಳಿ ಇನ್ನೂ ಹೆಚ್ಚು ಉದ್ರಿಕ್ತವಾಯಿತು. ಕಚೇರಿ ಗೇಟನ್ನು ತಳ್ಳಿ ಮುನ್ನುಗ್ಗಲು ಅವರಲ್ಲಿ ಕೆಲವರು ಪ್ರಯತ್ನ ಪಟ್ಟರು. ನೂಕುನುಗ್ಗಲು ಉಂಟಾಯಿತು. ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಬಂದಿದ್ದ ಮಹಿಳೆಯರು ಆತಂಕಕ್ಕೆ ಒಳಗಾದರು. ಕೆಲವರು ಕಲ್ಲು, ಚಪ್ಪಲಿ, ನೀರು ತುಂಬಿದ ಬಾಟಲಿಗಳನ್ನು ತೂರಿದರು. ಇದರಿಂದಾಗಿ ಕೆಲವರಿಗೆ ಸಣ್ಣಪುಟ್ಟ ಗಾಯಗಳಾದವು. ಪೊಲೀಸರು ಪ್ರತಿಭಟನಾಕಾರರನ್ನು ನಿಯಂತ್ರಿಸಲು ಹರಸಾಹಸ ಪಟ್ಟರು. ಕೆಲವರಿಗೆ ಲಾಠಿ ಪೆಟ್ಟು ಬಿದ್ದವು.

ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಲು ಜಿಲ್ಲಾ ಎಸ್‌ಪಿ ಡಿ.

ಪುಟ 14 ಕ್ಕೆ



ವಿಶ್ವದಾದ್ಯಂತ ಮೇ ದಿನದ ರ್ಯಾಲಿ



ದಕ್ಷಿಣ ಆಫ್ರಿಕಾ




ರಷ್ಯ



ಇಂಡೋನೇಷ್ಯ



ಬಾಂಗ್ಲದೇಶ



ಬೋಲಿವಿಯಾ



ಟರ್ಕಿ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**